18 June 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸರಿಯಾದ ಕಾಲದಲ್ಲಿ ನಮಗೆ ಏನೂ ಅರ್ಥವಾಗುವುದಿಲ್ಲ, ಕಾಲ ಸರಿದಾಗ ಎಲ್ಲವೂ ತಿಳಿದರೂ ವ್ಯರ್ಥ !

▸▸ ಸ್ನೇಹಾ ಆನಂದ್

info.varthaman@gmail.com



ಗ್ಯಾರಂಟಿ ಯೋಜನೆಗಳು ನಿಲ್ಲಲ್ಲ: ಎಸ್. ಅರುಣ್‌ಕುಮಾರ್ ಸ್ಪಷ್ಟನೆ — ಪುಟ ಸಂ. 2



ಗುಂಡ್ಲುಪೇಟೆಯಲ್ಲಿ ಅದ್ದೂರಿಯಾಗಿ ಜರುಗಿದ ಬಸವ ಜಯಂತಿ — ಪುಟ ಸಂ. 3




ಕಾಂಗ್ರೆಸ್ ಮತ ಕಡಿತಕ್ಕೆ ಬಿಜೆಪಿ ಸಂಚು: ಶಾಸಕ ಪುಟ್ಟರಂಗಶೆಟ್ಟಿ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 201 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸಚಿವ ಸ್ಥಾನ ಸಿಗದಿದ್ದರೂ ಬೇಸರವಿಲ್ಲ: ಜಮೀರ್ ಅಹ್ಮದ್

**ಬೆಂಗಳೂರು:** ಸಚಿವ ಸಂಪುಟದ ಮೊದಲ ಹಂತದಲ್ಲಿ ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದೆ. ಸಿಗಲಿಲ್ಲ, ಎರಡನೇ ಹಂತದ ಸಂಪುಟ ರಚನೆಯಲ್ಲಿ ಕೂಡ ಸಿಗುವ ವಿಶ್ವಾಸವಿದೆ. ಹೈಕಮಾಂಡ್ ಏನು ನಿರ್ಧಾರ ಮಾಡುತ್ತದೋ ಅದಕ್ಕೆ ನಾನು ಬದ್ಧ ಎಂದು ಮಾಜಿ ಸಚಿವ ಜಮೀರ್ ಅಹ್ಮದ್ ಹೇಳಿದರು.



ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ನಾನು ಮಂತ್ರಿ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ. ನಾನು ಎಲ್ಲೂ ಬಹಿರಂಗವಾಗಿ ಸಚಿವ ಸ್ಥಾನ ಕೊಡಿ ಎಂದು ಕೇಳಿಲ್ಲ. ಸಚಿವ ಸ್ಥಾನ ಸಿಗದಿದ್ದರೂ ಯಾವುದೇ ಬೇಸರವಿಲ್ಲ ಎಂದರು.

ಇತ್ತೀಚೆಗೆ ಡಿ.ಕೆ.ಸುರೇಶ್ ಅವರನ್ನು ಭೇಟಿ ಮಾಡಿರುವ ಬಗ್ಗೆ ಮಾತನಾಡಿದ ಅವರು, ಸುರೇಶ್ ಅವರನ್ನು ಭೇಟಿ ಮಾಡುವುದು ಹೊಸದೇನಲ್ಲ. ಇದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಸ್ನೇಹಪೂರ್ವಕ ಭೇಟಿ. ನಾವು ತಿಂಗಳಿಗೆ ನಾಲ್ಕು ಬಾರಿ ಭೇಟಿ ಮಾಡುತ್ತೇವೆ ಎಂದರು.

## ನಿಷೇಧ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ಟೆಲಿಗ್ರಾಮ್

**ನವದೆಹಲಿ:** ವೈದ್ಯಕೀಯ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆ ಲೀಕ್ ತಡೆಯಲು ಟೆಲಿಗ್ರಾಮ್ ಆಪ್ ನಿಷೇಧಿಸಿರುವ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ಟೆಲಿಗ್ರಾಮ್ ಸಂಸ್ಥೆ ಮತ್ತು ಸಿಇಒ ಪಾವೆಲ್ ಡುರೊವ್ ಬುಧವಾರ ದೆಹಲಿ ಹೈಕೋರ್ಟ್ಗೆ ತುರ್ತು ಅರ್ಜಿ ಸಲ್ಲಿಸಿದ್ದಾರೆ.

ಸರ್ಕಾರ ಜೂನ್ 22 ಪುಟ 2ಕ್ಕೆ

## ಇಂದು ವಿಧಾನ ಪರಿಷತ್ ಚುನಾವಣೆ

# 3 ಪಕ್ಷಗಳಿಗೂ 'ಅಡ್ಡ ಮತಾತಂಕ'

## 7 ಸ್ಥಾನಗಳಿಗೆ 8 ಅಭ್ಯರ್ಥಿಗಳ ಸ್ಪರ್ಧೆ । ಶಾಸಕರಿಗೆ 'ರೆಸಾರ್ಟ್ ಭಾಗ್ಯ'

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆ ಜೂನ್ 18ರಂದು ನಡೆಯಲಿದೆ.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿ ಮೂರೂ ಪಕ್ಷಗಳಿಗೂ ಅಡ್ಡ ಮತದಾನ ಆತಂಕ ಎದುರಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಆಡಳಿತಾರೂಢ ಕಾಂಗ್ರೆಸ್ ತನ್ನ ಶಾಸಕರನ್ನು ಬಿಡದಿಯ ವಂಡರ್‌ಲಾ ರೆಸಾರ್ಟ್‌ಗೆ ಸ್ಥಳಾಂತರಿಸಿದೆ.

ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಎಂಟು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಈ ಚುನಾವಣೆಯಲ್ಲಿ ಪ್ರತಿಯೊಂದು ಮತವೂ ಮಹತ್ವದ್ದಾಗಿದೆ. ಈ ಚುನಾವಣೆ ಮತ್ತೆ ರೆಸಾರ್ಟ್ ರಾಜಕೀಯ ಮತ್ತು ಪರೋಕ್ಷ ರಾಜಕೀಯ ಆಟಗಳನ್ನು ಮುನ್ನೆಲೆಗೆ ತಂದಿದೆ.

ರೆಸಾರ್ಟ್‌ನಲ್ಲಿ ಮಂಗಳವಾರ ರಾತ್ರಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆದಿದೆ. ಪಕ್ಷವು ತನ್ನ ಐದು ಎಂಎಲ್‌ಸಿ ಅಭ್ಯರ್ಥಿಗಳ ಪರ ಮತದಾನದ ತಂತ್ರ ರೂಪಿಸುತ್ತಿದೆ. ಸಂಖ್ಯಾತ್ಮಕವಾಗಿ ಸುಗಮ ಗೆಲುವಿನ ಸಾಧ್ಯತೆ ಇದ್ದರೂ ಯಾವುದೇ ಅಪಾಯವನ್ನು ತೆಗೆದುಕೊಳ್ಳದಂತೆ ಎಚ್ಚರಿಕೆ ವಹಿಸಿದೆ.

ಕಾಂಗ್ರೆಸ್‌ನ 134 ಶಾಸಕರಲ್ಲಿ ಸುಮಾರು 120 ಶಾಸಕರು ಮಾತ್ರ ರೆಸಾರ್ಟ್‌ನಲ್ಲಿ ಇದ್ದಾರೆ. ಉಳಿದ 13–14 ಶಾಸಕರು ಕೆಲಸ ಅಥವಾ ಅನಾರೋಗ್ಯದ ಕಾರಣದಿಂದ ಗೈರಾಗಿದ್ದಾರೆ ಎನ್ನಲಾಗಿದೆ. ಕಾಂಗ್ರೆಸ್ ಮೂರು ಪ್ರಮುಖ ಆತಂಕಗಳನ್ನು ಎದುರಿಸುತ್ತಿದೆ. ಅಡ್ಡ ಮತದಾನ, ಗೈರುಹಾಜರಿ ಮತ್ತು



ಮತಗಳನ್ನು ಅಸಿಂಧುವಾಗಿಸುವ ಸಾಧ್ಯತೆ. ಪಕ್ಷವು ಶಾಸಕರನ್ನು ನಾಳೆ ಬೆಳಗ್ಗೆ ರೆಸಾರ್ಟ್‌ನಿಂದ ನೇರವಾಗಿ ವಿಧಾನ ಸೌಧಕ್ಕೆ ಕರೆದೊಯ್ಯಲಿದೆ.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಕಾಂಗ್ರೆಸ್ ಶಾಸಕರನ್ನು ರೆಸಾರ್ಟ್‌ಗೆ ಸ್ಥಳಾಂತರಿಸುವ ಕಾರ್ಯವನ್ನು ಮಾಡಿದ್ದಾರೆಂದು ತಿಳಿದುಬಂದಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್‌ಗೆ ಇದು ಮೊದಲ ದೊಡ್ಡ ರಾಜಕೀಯ ಪರೀಕ್ಷೆ ಎಂದು ಪರಿಗಣಿಸಲಾಗುತ್ತಿದೆ.

ಕಾಂಗ್ರೆಸ್ ಒಳಗೆ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಅವರ ಸ್ಥಾನವೇ ಪ್ರಮುಖ ಚರ್ಚೆಯ ವಿಷಯವಾಗಿದೆ. ಪಕ್ಷವು ನಾಲ್ಕು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ವಿಶ್ವಾಸದಲ್ಲಿದ್ದರೂ, ಐದನೇ ಸ್ಥಾನ ಗಟ್ಟಿಯಾದ ಸ್ಪರ್ಧೆಯಲ್ಲಿದೆ.

ಪಕ್ಷದ ನಾಯಕರು ಪ್ರತಿಯೊಬ್ಬ ಶಾಸಕರ ಮತದಾನ ಮಾದರಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ. ಶಿಸ್ತು ಕಾಪಾಡಲು ಕ್ರಮಗಳನ್ನು ಬಲಪಡಿಸುತ್ತಿದ್ದಾರೆ. ಈ ಚುನಾವಣೆ ಗುಪ್ತ ಮತದಾನವಾಗಿಲ್ಲದ ಕಾರಣ ಶಾಸಕರಿಗೆ ಯಾರಿಗೆ ಮತ ಹಾಕಬೇಕು ಎಂಬುದು ಸ್ಪಷ್ಟವಾಗಿ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

### ಜೆಟಿಡಿ ನಡೆ ಏನು?

ಜೆಡಿಎಸ್ ನಿಂದ ಈಗಾಗಲೇ ಅಂತರ ಕಾಯ್ದುಕೊಂಡಿರುವ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಅವರ ನಿಷ್ಠೆ ಬಗ್ಗೆ ನಾಯಕರಿಗೆ ಆತಂಕ ಹೆಚ್ಚಾಗಿದೆ. ಜೆಡಿಎಸ್ ಅಭ್ಯರ್ಥಿ ಗೋವಿಂದರಾಜ್ ಗೆ ಬೇಕಾದಷ್ಟು ಸಂಖ್ಯಾತ್ಮಕ ಬೆಂಬಲ ಸಿಗುವುದೇ ಎಂಬ ಪ್ರಶ್ನೆಯಿದೆ. ಜೆಡಿಎಸ್ ತನ್ನ 18 ಶಾಸಕರನ್ನು ಉತ್ತರ ಬೆಂಗಳೂರಿನ ದೇವನಹಳ್ಳಿ ಸಮೀಪದ ರೆಸಾರ್ಟ್‌ಗೆ ಸ್ಥಳಾಂತರಿಸಿದೆ. ಅಡ್ಡ ಮತದಾನ ಹಾಗೂ ಶಾಸಕರನ್ನು ಸೆಳೆಯುವ ಬಗ್ಗೆ ಇರುವ ಆತಂಕ ಇದಕ್ಕೆ ಕಾರಣ ಎನ್ನಲಾಗಿದೆ.

### ರೆಬೆಲ್ ಶಾಸಕರು ಕೈಹಿಡಿಯುವರೇ?

ಬಿಜೆಪಿಗೆ ಸಹ ತನ್ನ 66 ಶಾಸಕರಲ್ಲಿ ಕೆಲವರು ಅಡ್ಡ ಮತದಾನ ಮಾಡಬಹುದೆಂಬ ಆತಂಕ ಇದೆ. ವಿಶೇಷವಾಗಿ ಉಚ್ಚಾಟಿತ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ ಈಗಾಗಲೇ ಕಾಂಗ್ರೆಸ್ ಪಾಳಾಯಕ್ಕೆ ಸೇರಿಕೊಂಡಿದ್ದಾರೆ. ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಜನಾರ್ದನ ರೆಡ್ಡಿ ಪುಟ 2ಕ್ಕೆ

# 11 ಜನರ ಸಾವಿಗೆ ತೀವ್ರ ಹೃದಯಾಘಾತವೇ ಕಾರಣ

## ಸಾವಿನ ಪೂರ್ಣ ವರದಿ ತೆರೆದಿಟ್ಟ ವೈದ್ಯರ ತಂಡ! ಆಸ್ಪತ್ರೆ ನಿರ್ದೇಶಕ ಡಾ.ದಿನೇಶ್ ಸ್ಪಷ್ಟನೆ

**ಮೈಸೂರು:** ಜಯದೇವ ಆಸ್ಪತ್ರೆಯಲ್ಲಿ ಬುಧವಾರ 11 ಮಂದಿ ಸಾವಿಗೆ ತೀವ್ರ ಹೃದಯಾಘಾತವೇ ಕಾರಣ ಎಂದು ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ದಿನೇಶ್ ತಿಳಿಸಿದರು.

ಜಯದೇವ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಒಂದೇ ದಿನದಲ್ಲಿ 11 ಮಂದಿ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಿ ಮೃತರ ಕುಟುಂಬಸ್ಥರು ಬುಧವಾರ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಆಗಮಿಸಿದ ದಿನೇಶ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಸ್ಪಷ್ಟನೆ ನೀಡಿದರು.

ಇಲ್ಲಿಗೆ ಬರುವ ರೋಗಿಗಳಲ್ಲಿ ಶೇ 20ಷ್ಟು ಜನ





ತೀವ್ರ ಹೃದಯಾಘಾತವಾದ ನಂತರ ಬರುತ್ತಾರೆ. ಅವರು ಬದುಕುವ ಸಾಧ್ಯತೆ ಕಡಿಮೆ ಇರುತ್ತದೆ. ಆದರೂ ನಾವು ಹಣಕಾಸಿನ ಬಗ್ಗೆ ನೋಡದೆ ಮೊದಲು ಚಿಕಿತ್ಸೆ ನೀಡುತ್ತಿದ್ದೇವೆ. ಮೃತಪಟ್ಟಿರುವ 11 ಜನರೂ ಕೂಡ ತೀವ್ರತರದ ಹೃದಯಾಘಾತಕ್ಕೆ ಒಳಗಾಗಿದ್ದವರು.

ಗೋಲ್ಡನ್ ಹವರ್ ಕಳೆದ ಬಳಿಕ ಬಂದಿದ್ದರು. ಅವರನ್ನು ವೈದ್ಯರು ಐಸಿಯುನಲ್ಲಿ ಇಟ್ಟು ಎಲ್ಲಾ ತರದ ಔಷದೋಪಚಾರ ಮಾಡಿರುತ್ತಾರೆ. ನಿತ್ಯ ಸಾಯುವವರ ಸಂಖ್ಯೆ ಶೇ 5ರಿಂದ 7ರಷ್ಟು ಇದೆ. ರಾಷ್ಟ್ರೀಯ ಮಟ್ಟದಲ್ಲಿ ಈ ಸಂಖ್ಯೆ ಶೇ. 12ರಷ್ಟಿದೆ. ಇಲ್ಲಿಯವರೆಗೆ ಮೈಸೂರಿನ ಜಯದೇವ ಆಸ್ಪತ್ರೆ ಬಗ್ಗೆ ಪುಟ 2ಕ್ಕೆ

| ತಿಂಗಳು | ಹೊರರೋಗಿಗಳು | ಒಳರೋಗಿಗಳು | ಮರಣ | ಶೇಕಡವಾರು |
|---|---|---|---|---|
| ಜನವರಿ | 20,650 | 2,092 | 134 | 6.41 |
| ಫೆಬ್ರವರಿ | 19,341 | 1,885 | 94 | 4.99 |
| ಮಾರ್ಚ್ | 19,435 | 1,842 | 94 | 5.10 |
| ಏಪ್ರಿಲ್ | 19,723 | 1,771 | 91 | 5.14 |
| ಮೇ | 21,481 | 1,871 | 86 | 4.60 |
| ಒಟ್ಟು | 1,00,630 | 9,461 | 499 | 5.27 |
| 2025 | 2,39,941 | 21,577 | 1245 | 5.77 |

### 16 ದಿನಕ್ಕೆ 62 ಮಂದಿ ಸಾವು

**ಮೈಸೂರು:** ನಗರದ ಜಯದೇವ ಹೃದ್ರೋಗ ಅಸ್ಪತ್ರೆಯಲ್ಲಿ ಜೂನ್ 1ರಿಂದ 16ರವರೆಗೆ 62 ಮಂದಿ ಮೃತಪಟ್ಟಿದ್ದಾರೆ. ಈ ಅವಧಿಯಲ್ಲಿ 12,273 ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಪುಟ 2ಕ್ಕೆ

# ಸಿಎಂ ಆದರೂ 'ಖಯಾಲಿ' ಬಿಡಲ್ಲ!

## ಡಿ.ಕೆ.ಶಿವಕುಮಾರ್ ವಿರುದ್ಧ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿರೋಧಿಸಿ ಹೋರಾಟ ನಡೆಸುತ್ತಿರುವುದು ರೈತರ ಪರವಾಗಿ. ನನ್ನ ವಿರುದ್ಧ ಪೋಸ್ಟರ್ ಅಂಟಿಸಿ ಸುಳ್ಳು ಪ್ರಚಾರ ಮಾಡುವುದಕ್ಕೆ ಹೆದರುವ, ಜಗ್ಗುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ತಿರುಗೇಟು ನೀಡಿದರು.

ಎಚ್.ಡಿ.ಕುಮಾರಸ್ವಾಮಿ ಮತ್ತು ಕುಟುಂಬದ ವಿರುದ್ಧ ಪೋಸ್ಟರ್ ಅಂಟಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದ ಸಿಎಂ ಆದಮೇಲಾದರೂ ಬ್ಲೂಫಿಲ್ಮ್ ಮಾಡುವುದು, ಪೋಸ್ಟರ್ ಅಂಟಿಸೋದು ಬಿಡುತ್ತಾರೆ ಅಂದುಕೊಂಡಿದ್ದೆ. ಆ ಖಯಾಲಿ ಇನ್ನೂ ಡಿ.ಕೆ ಶಿವಕುಮಾರ್‌ಗೆ ಹೋಗಿಲ್ಲ ಎಂದು ವಾಗ್ದಾಳಿ ನಡೆಸಿದರು.

ಬೆನ್ನಗಾನಹಳ್ಳಿಯಲ್ಲಿ ಸತ್ತೋದವರ ಹೆಬ್ಬಟ್ಟು ಹೊತ್ತಿಸಿ ಜಮೀನು ತಗೊಂಡ ವ್ಯಕ್ತಿ ಈಗ ಅವರ ಬೆಂಬಲಿಗರಿಗೆ ಹೇಳಿ ಪೋಸ್ಟರ್ ಹಾಕಿಸಿದ್ದಾರೆ. ಪೋಸ್ಟರ್ ಹಾಕಿದರೆ ಜನ ನಂಬುತ್ತಾರಾ? ಸಿಎಂ ಆದ ಮೇಲಾದರೂ ಒಂದು ಸ್ಟ್ಯಾಂಡರ್ಡ್ ಬೇಡವಾ? ಸ್ಟ್ಯಾಂಡರ್ಡ್ ಇಲ್ಲದೇ ಈ ರೀತಿಯ ನಡವಳಿಕೆಯೇ ಎಂದು ಪ್ರಶ್ನಿಸಿದರು.



### ನಾವ್ಯಾಕೆ ಕಾಂಗ್ರೆಸ್‌ಗೆ ಆಪರೇಷನ್ ಮಾಡೋಣ?

**ಬೆಂಗಳೂರು:** ನಮ್ಮದು ಸಣ್ಣ ಪಕ್ಷ. ನಾವ್ಯಾಕೆ ಕಾಂಗ್ರೆಸ್ ಶಾಸಕರನ್ನು ಆಪರೇಷನ್ ಮಾಡೋಣ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದರು.

ವಿಧಾನ ಪರಿಷತ್ ಚುನಾವಣೆಗಾಗಿ ಜೆಡಿಎಸ್‌ನಿಂದ ಕಾಂಗ್ರೆಸ್ ಶಾಸಕರಿಗೆ ಕರೆ ಮಾಡಿ ಸೆಳೆಯೋ ಪ್ರಯತ್ನ ನಡೆಯುತ್ತಿದೆ ಎಂಬ ಸಿಎಂ ಡಿಕೆ

## ಹೃದಯಾಘಾತಕ್ಕೆ ಬಾಡಿ ಬಿಲ್ಡರ್ ಬಲಿ

**ದಾವಣಗೆರೆ:** ಜಿಮ್ ಮುಗಿಸಿ ಮನೆಗೆ ಮರಳಿದ ಬಾಡಿ ಬಿಲ್ಡರ್ ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಸುಶೀಲಕುಮಾರ್



(26) ಮೃತ ಯುವಕ. ಬಾಡಿ ಬಿಲ್ಡಿಂಗ್ ಪಟುವಾಗಿದ್ದ ಇವರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಗಳಿಸಿದ್ದರು. ಅಂತರರಾಷ್ಟ್ರೀಯ ಮಟ್ಟದ ಬಾಡಿ ಬಿಲ್ಡಿಂಗ್ ಕಾಂಪಿಟೇಷನ್‌ಗೆ ರೆಡಿಯಾಗುತ್ತಿದ್ದರು. ಮಂಗಳವಾರ ರಾತ್ರಿ 8:30ರ ಸುಮಾರಿಗೆ ಜಿಮ್ ಮುಗಿಸಿಕೊಂಡು ಮನೆಗೆ ಬಂದಿದ್ದ ಅವರು ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ.

## ಶಿಕ್ಷಕರ ಜೊತೆ ಜಗಳ: ಮುಖ್ಯಶಿಕ್ಷಕ ಆತ್ಮಹತ್ಯೆ

**ದಾವಣಗೆರೆ:** ಸಹಶಿಕ್ಷಕರು ಹಾಗೂ ಅಡುಗೆ ಕೆಲಸದವರೊಂದಿಗೆ ಜಗಳವಾಡಿ ನೊಂದು ವಿಷ ಸೇವಿಸಿದ್ದ ಮುಖ್ಯಶಿಕ್ಷಕ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮೃತಪಟ್ಟಿದ್ದಾರೆ.





ಹರಿಹರ ತಾಲೂಕಿನ ಕೊಕ್ಕನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಜಯಪ್ಪ (55) ಸಾವನ್ನಪ್ಪಿದವರು. ಸಹಶಿಕ್ಷಕರು, ಅಡುಗೆ ಕೆಲಸದವರು ಮತ್ತು ಹೆಡ್ ಮಾಸ್ಟರ್ ಮಧ್ಯೆ ಜಗಳ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮಂಗಳವಾರ ಶಾಲೆ ಶೌಚಾಲಯಕ್ಕೆ ತೆರಳಿ ವಿಷ ಸೇವಿಸಿದ್ದ ಜಯಪ್ಪ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

## ಪಬ್ ದುರಂತ: ಐವರು ಅಧಿಕಾರಿಗಳ ಅಮಾನತು

**ಮೈಸೂರು:** ನಗರದ ದಟ್ಟಗಳ್ಳಿಯ ಪಬ್‌ನಲ್ಲಿ ಸಂಭವಿಸಿದ ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ ಅಬಕಾರಿ ಇಲಾಖೆಯ ಐವರನ್ನು ಅಮಾನತು ಮಾಡಿ ಆದೇಶಿಸಲಾಗಿದೆ.

ಆ ಕಟ್ಟಡದ ರೂಫ್ ಟಾಪ್‌ನಲ್ಲಿ ಅನುಮತಿ ಪಡೆಯದೆ ಒಣ ಹುಲ್ಲು ಮತ್ತು ಗರಿಗಳಿಂದ ನಿರ್ಮಿಸಿದ ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿತ್ತು. ಅದನ್ನು ಪರಿಶೀಲಿಸದೆ ಕರ್ತವ್ಯಲೋಪ ಎಸಗಿರುವ ಮೈಸೂರು ಉಪವಿಭಾಗದ ಅಬಕಾರಿ ಉಪ ಅಧೀಕ್ಷಕ, ಮೈಸೂರು ವಲಯ-3ರ ಅಬಕಾರಿ ನಿರೀಕ್ಷಕ, ಇಬ್ಬರು ಅಬಕಾರಿ ಉಪನಿರೀಕ್ಷಕರು ಮತ್ತು ಒಬ್ಬ ಅಬಕಾರಿ ಕಾನ್ಸ್‌ಟೆಬಲ್ ಅನ್ನು ಅಮಾನತು ಮಾಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ಈ ಅಗ್ನಿ ಅವಘಡದಲ್ಲಿ ಇಬ್ಬರು ಮೃತಪಟ್ಟು, 6 ಮಂದಿ ಗಾಯಗೊಂಡಿದ್ದರು. ಘಟನಾ ಸ್ಥಳಕ್ಕೆ



ಬುಧವಾರ ಭೇಟಿ ನೀಡಿದ್ದ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದ್ದರು.

## ಆರ್‌ಎಸ್‌ಎಸ್ ಕಚೇರಿ ಮೇಲೆ ಬಾಂಬ್ ದಾಳಿ

**ರಾಂಚಿ:** ರಾಂಚಿಯ ಆರ್‌ಎಸ್‌ಎಸ್ ಕಚೇರಿ ಮೇಲೆ ಬುಧವಾರ ಬೆಳಗಿನ ಜಾವ ಇಬ್ಬರು ವ್ಯಕ್ತಿಗಳು ಪೆಟ್ರೋಲ್ ಬಾಂಬ್ ಎಸೆಯಲು ಪ್ರಯತ್ನಿಸಿದ್ದಾರೆ.

ಇಬ್ಬರು ದುಷ್ಕರ್ಮಿಗಳು ಪೆಟ್ರೋಲ್ ತುಂಬಿದ ಸಾಸ್ ಬಾಟಲಿಗಳನ್ನು ಆರ್‌ಎಸ್‌ಎಸ್ ಕಚೇರಿ ಆವರಣಕ್ಕೆ ಎಸೆದಿದ್ದಾರೆ. ಆದರೆ ಎರಡೂ ಬಾಟಲಿಗಳು ಕಾಂಪೌಂಡ್ ಬಳಿ ಬಿದ್ದಿವೆ. ಹೀಗಾಗಿ ಘಟನೆಯಲ್ಲಿ ಆರ್‌ಎಸ್‌ಎಸ್ ಕಚೇರಿಗೆ ಯಾವುದೇ ಹಾನಿಯಾಗಿಲ್ಲ. ರಾಂಚಿ ಪೊಲೀಸರು ಘಟನೆಯಲ್ಲಿ ಭಾಗಿಯಾಗಿರುವ ದಾಳಿಕೋರರಿಗಾಗಿ ಹುಡುಕಾಟ ಆರಂಭಿಸಿದ್ದಾರೆ.



# 'ಮಾಸ್ಕ್ ಮ್ಯಾನ್' ಜೊತೆ ಮಾತು ನಿಜ

## ಆದರೆ ಧರ್ಮಸ್ಥಳ ವಿರುದ್ಧ ಷಡ್ಯಂತ್ರದಲ್ಲಿ ನಾನಿಲ್ಲ: ನಟ ಪ್ರಕಾಶ್ ರಾಜ್

**ಬೆಂಗಳೂರು:** ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ 'ಮಾಸ್ಕ್ ಮ್ಯಾನ್' ಚಿನ್ನಯ್ಯನ ಜೊತೆಗೆ ಮಾತನಾಡಿರುವುದು ನಿಜ. ಆತ ನನ್ನೊಂದಿಗೆ ತಮಿಳಿನಲ್ಲಿ ಮಾತನಾಡಿದ್ದ ಎಂದು ಖ್ಯಾತ ನಟ ಪ್ರಕಾಶ್ ರಾಜ್ ತಿಳಿಸಿದರು.

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣದಲ್ಲಿ ತನ್ನ ಹೆಸರು ತಳುಕು ಹಾಕಿಕೊಂಡಿರುವ ವಿಚಾರಕ್ಕೆ ಸ್ಪಷ್ಟನೆ ನೀಡಿದರು.

ಗಿರೀಶ್ ಮಟ್ಟಣ್ಣನವರ್ ಹೇಳಿದ ರೀತಿಯಲ್ಲಿ ಕೇಳಿದರೆ ನಾನು ನಿನ್ನ ಅಪ್ಪಿಕೊಳ್ತಿನಿ ಅಂದಿದ್ದೆ ಅಂತ ಕೋರ್ಟ್‌ನಲ್ಲಿ ಚಿನ್ನಯ್ಯ ಹೇಳಿಕೆ ನೀಡಿದ್ದಾನೆ. ಕೇರಳದಿಂದ ಹಣ ಬಂದಿದೆ ಅಂತಲೂ ಹೇಳಿ ನನ್ನ ಹೆಸರು ಉಲ್ಲೇಖ ಮಾಡಿದ್ದಾನೆ. ಆದರೆ ನಾನು ಯಾವತ್ತೂ ಧರ್ಮಸ್ಥಳಕ್ಕೆ ಹೋಗಿಲ್ಲ. ಗಿರೀಶ್ ಮಟ್ಟನವರ್ ಅವರನ್ನ ಭೇಟಿಯಾಗಿಲ್ಲ ಎಂದು ತಿಳಿಸಿದರು.

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನ ಹೂತು ಹಾಕಿದ್ದಾರೆ ಅಂತಾ ಮಾತುಗಳು ಕೇಳಿಬಂದಿತ್ತು. ನಾನು ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ಎಸ್‌ಐಟಿ ರಚನೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರನ್ನು ಕೇಳಿದ್ದೆ.



ಈ ಟೈಮಲ್ಲಿ ಒಬ್ಬ ವ್ಯಕ್ತಿ ಕರೆ ಮಾಡಿ ಮಾಸ್ಕ್ ಮ್ಯಾನ್ ಚಿನ್ನಯ್ಯ ಮಾತಾಡಬೇಕು ಅಂದ. ನನ್ನ ಜೊತೆಗೆ ತಮಿಳಿನಲ್ಲಿ ಮಾತಾಡಿದ. ಈ ಬಗ್ಗೆ ಎಸ್‌ಐಟಿ ಮುಖ್ಯಸ್ಥರಾಗಿದ್ದ ಮೊಹಂತಿ ಅವರಿಗೆ ಕರೆ ಮಾಡಿ ವಿಚಾರ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಚಿನ್ನಯ್ಯ ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸಿದ್ದಾನೆ ಅನ್ನೋದು ತನಿಖೆಯಲ್ಲಿ ಗೊತ್ತಾಗಿದೆ. ನಾನು ಏನೇ ಪ್ರಶ್ನೆ ಕೇಳಿದರೂ ಹಿಂದೂ ವಿರೋಧಿ ಅಂತಾರೆ. ಈ ವಿಚಾರ ಇನ್ನೂ ಕೋರ್ಟ್‌ನಲ್ಲಿದೆ. ನಾನ್ ಧರ್ಮಸ್ಥಳಕ್ಕೆ ಹೋಗೇ ಇಲ್ಲ. ಪುಟ 2ಕ್ಕೆ

# ಸರಕು–ಸೇವೆ ರಫ್ತು ಪ್ರಮಾಣ: ಕರ್ನಾಟಕ ನಂ.1

## 173 ಬಿಲಿಯನ್ ಡಾಲರ್ ಮೌಲ್ಯದ ದಾಖಲೆ ರಫ್ತು: ಡಿ.ಕೆ.ಶಿವಕುಮಾರ್

**ಬೆಂಗಳೂರು:** ಕರ್ನಾಟಕ ಸಾಫ್ಟ್‌ವೇರ್ ಮತ್ತು ಸೇವೆಗಳ ರಫ್ತು ಕ್ಷೇತ್ರದಲ್ಲಿ ದೇಶದಲ್ಲಿಯೇ ತನ್ನ ಅಗ್ರಸ್ಥಾನ ಕಾಯ್ದುಕೊಂಡಿದೆ. ಸುಮಾರು 173 ಬಿಲಿಯನ್ ಡಾಲರ್ ಮೌಲ್ಯದ ರಫ್ತನ್ನು ದಾಖಲಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ವಾಣಿಜ್ಯ ಗುಪ್ತಚರ ಮತ್ತು ಅಂಕಿ ಅಂಶಗಳ ಮಹಾನಿರ್ದೇಶನಾಲಯ ನೀಡಿರುವ ಅಂಕಿಅಂಶಗಳ ಪ್ರಕಾರ, 2025–26ನೇ ಹಣಕಾಸು ವರ್ಷದಲ್ಲಿ ಕರ್ನಾಟಕ ಸಾಫ್ಟ್‌ವೇರ್, ಸೇವೆಗಳು ಮತ್ತು ಸರಕು ರಫ್ತುಗಳಲ್ಲಿ ಶೇ. 9.3 ಬೆಳವಣಿಗೆ ದಾಖಲಿಸಿದೆ.

ಕರ್ನಾಟಕದ ಒಟ್ಟು ರಫ್ತು ಮೌಲ್ಯ 2025–26ರಲ್ಲಿ ಸುಮಾರು 19.7 ಲಕ್ಷ ಕೋಟಿ ತಲುಪಿದೆ. ಭಾರತದ ಒಟ್ಟು ಸಾಫ್ಟ್‌ವೇರ್ ಮತ್ತು ಸೇವೆಗಳ ರಫ್ತಿನಲ್ಲಿ ಕರ್ನಾಟಕದ ಪಾಲು ಶೇ.41 ಆಗಿದೆ. ಇತರೆ ರಾಜ್ಯಗಳಿಗಿಂತ ಬಹಳ ಮುಂದಿದೆ.

ಕರ್ನಾಟಕದ ಕಬ್ಬಿಣದ ಅದಿರು ಮತ್ತು ಖನಿಜಗಳ



ರಫ್ತು ಅತ್ಯಧಿಕ 61 ಶೇಕಡಾ ಏರಿಕೆ ಕಂಡಿದೆ. ರಾಸಾಯನಿಕ ಮತ್ತು ಸಂಬಂಧಿತ ಉತ್ಪನ್ನಗಳು ಶೇ.56, ಎಂಜಿನಿಯರಿಂಗ್ ಉತ್ಪನ್ನಗಳು 28.9, ಚರ್ಮದ ಉತ್ಪನ್ನಗಳು 28.5 ಮತ್ತು ಮಸಾಲೆ ಪದಾರ್ಥಗಳು ಶೇ.24.5ರಷ್ಟಿದೆ.

ಕರ್ನಾಟಕದ ಉತ್ಪನ್ನಗಳು, ಸೇವೆಗಳು ಮತ್ತು ಆಲೋಚನೆಗಳು ವಿಶ್ವದ ವಿವಿಧ ಮಾರುಕಟ್ಟೆಗಳಿಗೆ ತಲುಪುತ್ತಿರುವ ಸಂದರ್ಭದಲ್ಲಿ, ಹೂಡಿಕೆ, ಕೈಗಾರಿಕೆ, ಉದ್ಯಮಶೀಲತೆ ಮತ್ತು ಉದ್ಯೋಗಾವಕಾಶಗಳನ್ನು ಮತ್ತಷ್ಟು ವೃದ್ಧಿಸುವ ಮೂಲಕ ಕರ್ನಾಟಕವನ್ನು ಭಾರತದ ಆರ್ಥಿಕ ಬೆಳವಣಿಗೆಯ ಪ್ರಮುಖ ಶಕ್ತಿಯಾಗಿ ಬಲಪಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ.

### ರಾಜ್ಯಗಳ ರಫ್ತು ಪ್ರಮಾಣ

- ಕರ್ನಾಟಕ ಶೇ.41
- ಮಹಾರಾಷ್ಟ್ರ ಶೇ.16
- ತಮಿಳುನಾಡು ಶೇ.12.5
- ಉತ್ತರ ಪ್ರದೇಶ ಶೇ.5
- ಆಂಧ್ರಪ್ರದೇಶ ಶೇ.1
- ಗುಜರಾತ್ ಶೇ.0.9

# ರೈತರ ಕಣ್ಣೀರು ಹಾಕಿಸಿದ ಯಾವ ಸರ್ಕಾರವೂ ಒಳ್ಳೆಯದಾಗೊಲ್ಲ

ರಾಮನಗರ: ರೈತರ ಹೊಟ್ಟೆ ಮೇಲೆ ಹೊಡೆದು, ಕಣ್ಣೀರು ಹಾಕಿಸಿದ ಯಾವುದೇ ಸರ್ಕಾರಕ್ಕೆ ಒಳ್ಳೆಯದಾಗೊಲ್ಲ. ಅಂತಹ ಸರ್ಕಾರಗಳು ಹೆಚ್ಚು ದಿನ ಉಳಿಯುವುದೂ ಇಲ್ಲ. ಬಿಡದಿ ಸಮಗ್ರ ನಗರ ನಿರ್ಮಾಣ ಯೋಜನೆಗೆ ಭೂಸ್ವಾಧೀನ ಕೈಬಿಡಿ, ರೈತರ ಬದುಕಿನ ಚೆಲ್ಲಾಟ ಆಡಲು ನಾವು ಬಿಡುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಸಿದರು.

ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ರಾಜ್ಯ ಸರ್ಕಾರ ಉದ್ದೇಶಿಸಿರುವ ಸಮಗ್ರ ನಗರ ನಿರ್ಮಾಣ ಯೋಜನೆಗಾಗಿ ಭೂಸ್ವಾಧಿನಕ್ಕೆ ಗುರುತಿಸಲಾಗಿರುವ ಕೆಂಪಯ್ಯನಪಾಳ್ಯ, ಅರಳಾಳುಸಂದ್ರ, ಹೊಸೂರು, ಬನ್ನಿಗಿರಿ ಗ್ರಾಮಗಳಿಗೆ ಭೇಟಿ ಮಾಡಿದ ನಂತರ ಅವರು ಬೈರಮಂಗಲ ವೃತ್ತದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮರ್ ಅವರು ರೈತರ ಪರವಾಗಿ ನಿಲ್ಲಬೇಕೇ ಹೊರತು ರಿಯಲ್ ಎಸ್ಟೇಟ್ ಮಾಡುವವರ ಪರವಾಗಿ ಅಲ್ಲ, ರೈತರ ಮೇಲೆ ಗೂಂಡಾಗಿರಿ, ದಬ್ಬಾಳಿಕೆ ಮಾಡುವುದನ್ನು ಬಿಟ್ಟು ರೈತರ ಪರವಾಗಿ ನಿಲ್ಲಬೇಕು ಎಂದು ಒತ್ತಾಯಿಸಿದರು. ಡಿ.ಕೆ.ಶಿವಕುಮಾರ್ ಅವರಿಗೆ ರಿಯಲ್ ಎಸ್ಟೇಟ್ ದಂಧೆ ಮಾಡಲು ಬೇರೆ ಕಡೆಗಳಲ್ಲಿ ಬೇಕಾದಷ್ಟು ಜಮೀನುಗಳಿವೆ. ಮುಖ್ಯಮಂತ್ರಿಗಳು, ಶಾಸಕರು ನೂರಾರು ಎಕರೆ ಜಮೀನು ಇಟ್ಟಿಕೊಳ್ಳಬಹುದು. ಅದೇ ಸಣ್ಣ ರೈತರು ಜಮೀನು ಇಟ್ಟುಕೊಂಡು ಬದುಕುವುದು ಬೇಡವೇ. ರೈತರನ್ನು ಬೀದಿಗೆ ತಂದರೆ ಆ ಭಗವಂತನು ನಿಮ್ಮನ್ನು ಕ್ಷಮಿಸುವುದಿಲ್ಲ ಎಂದರು.

**ಶೇ 70 ಒಪ್ಪಿಗೆ ಇದೆ ಎನ್ನುವುದು ಸುಳ್ಳು**

ಈ ಯೋಜನೆಗೆ ಬಲವಂತವಾಗಿ ಭೂ ಸ್ವಾಧೀನ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ವಿರುದ್ಧ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ರವರು ಶೇ.70ರಷ್ಟು ರೈತರು ಸ್ವಾಧೀನ ಪರವಾಗಿದ್ದಾರೆ ಎಂದು ಅವರು ಸುಳ್ಳು ಹೇಳಿದ್ದಾರೆ. ಭೂ ಸ್ವಾಧೀನದ ಜಾಗ ಬರಡು ಭೂಮಿ, ಪ್ರಧಾನಿ ಮೋದಿರವರು ಒಪ್ಪಿಗೆ ನೀಡಿದ್ದಾರೆ ಎಂದು ಅವರು ಹೇಳಿರುವುದು ಸಹ ಸುಳ್ಳು ಎಂದರು. ಪ್ರಧಾನಿ ಮೋದಿರವರು ರೈತರ ಪರವಾಗಿ ಇರುವವರು. ಅವರೆಂದೂ ರೈತರ ಭೂಮಿ ಕಸಿದು ಕೊಳ್ಳಿ ಅಂತ ಹೇಳಿರಲು ಸಾಧ್ಯವೇ ಇಲ್ಲ ಎಂದರು.

ಆಡಳಿತ ಪಕ್ಷದಷ್ಟೇ ಜವಾಬ್ದಾರಿ ವಿರೋಧ ಪಕ್ಷಕ್ಕೂ ಇದೆ. ಹಾಗಾಗಿ ಈ ರಾಜ್ಯಸರ್ಕಾರಕ್ಕೆ ವಾಸ್ತವವನ್ನು ತಿಳಿಸುವ ಕೆಲಸ ಮಾಡಬೇಕೆಂದು ನಿರ್ಧರಿಸಿ ಬಿಡದಿ ಭಾಗದ ಕೃಷಿ ಭೂಮಿಗೆ ಭೇಟಿ ನೀಡಿ ರೈತರಿಂದ ಅಹವಾಲು ಆಲಿಸಿದ್ದೇವೆ. ನಮ್ಮ ಪಕ್ಷ ರೈತರ ವಿಚಾರದಲ್ಲಿ ಹುಡುಗಾಟಿಕೆ, ರಾಜಕೀಯ ಮಾಡಲು ಹಾಗೂ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಂದಿಲ್ಲ. ಬಿಡದಿ, ರಾಯಚೂರು, ಬೆಳಗಾವಿ ಮಾತ್ರವಲ್ಲ ನಾಡಿನಲ್ಲಿ ಎಲ್ಲೇ ರೈತರು ಸಂಕಷ್ಟದಲ್ಲಿದ್ದರೆ ಬಿಜೆಪಿ ಅವರ ಪರವಾಗಿ ನಿಲ್ಲಲಿದೆ ಎಂದು ಹೇಳಿದರು.



**ಫಲವತ್ತಾದ ಭೂಮಿ ಕಸಿಯಲು ಬಿಡೋಲ್ಲ**

ರಾತ್ರಿ ವೇಳೆ ರೈತರ ಮನೆಗಳಿಗೆ ಬರುವ ಗೂಂಡಗಳು ಜೀವ ಬೆದರಿಕೆ ಹಾಕುವ ಘಟನೆಗಳು ನಡೆಯುತ್ತಿವೆ ಎಂಬ ಆರೋಪಗಳು ಕೇಳಿ ಬಂದಿವೆ. ಹೀಗಿದ್ದರೂ ಇಲ್ಲಿನ ರೈತರು ಪ್ರಾಣ ಬೇಕಾದರು ಕೊಡುತ್ತೇವೆ. ಭೂಮಿ ಮಾತ್ರ ಕೊಡಲ್ಲ ಅಂದಿದ್ದಾರೆ. ಆ ರೈತರ ಫಲವತ್ತಾದ ಕೃಷಿ ಭೂಮಿ ಕಸಿದುಕೊಳ್ಳಲು ನಾವು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು.

**ಕಾಂಗ್ರೆಸ್ ಪೋಸ್ಟರ್ ಕ್ಯಾಂಪೇನ್‌ಗೆ ಕಿಡಿ**

ರೈತರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ನಾವೆಲ್ಲ ಬರುತ್ತಿದ್ದೇವೆ ಎಂದು ಹೆದರಿ ಕಾಂಗ್ರೆಸ್ ನವರು ಪೋಸ್ಟರ್ ಕ್ಯಾಂಪೇನ್ ಮಾಡುತ್ತಿದ್ದಾರೆ. ಮುಖ್ಯ ಮಂತ್ರಿಗಳೇ ಕಾಂಗ್ರೆಸ್ ಶಾಸಕರ ಮೇಲೆ ಗೂಂಡಾಗಿರಿ, ದಬ್ಬಾಳಿಕೆ ಮಾಡಿದಂತೆ ನಮ್ಮ ಮೇಲೆ ಮಾಡಲು ಬರಬೇಡಿ ಎಂದು ಎಚ್ಚರಿಕೆ ನೀಡಿದರು.

**ರಾಹುಲ್‌ಗಾಂಧಿಗೆ ಪತ್ರ**

ಕರ್ನಾಟಕದಲ್ಲಿರುವ ನಿಮ್ಮದೇ ಸರ್ಕಾರಕ್ಕೆ ರೈತರನ್ನು ಒಕ್ಕಲೆಬ್ಬಿಸಲು ಅವಕಾಶ ನೀಡಬೇಡಿ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ನಾನೇ ಪತ್ರ ಬರೆದಿದ್ದೇನೆ. ರಾಹುಲ್ ಗಾಂಧಿ ಒಂದು ಮಾತು ಹೇಳಿದರೆ ಸಾಕು ಡಿಕೆಶಿ, ಕುರ್ಚಿ ಉಳಿಸಿಕೊಳ್ಳಲಾದರು ರೈತರ ಪರವಾಗಿ ನಿಲ್ಲುತ್ತಾರೆ ಎಂದು ವಿಜಯೇಂದ್ರ ಹೇಳಿದರು.

ಈ ಸಂದರ್ಭದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ , ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯ ರವಿಕುಮಾರ್, ಸಂಸದ ಡಾ.ಸಿ.ಎನ್.ಮಂಜುನಾಥ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಮುರಳೀಧರ್, ಬಿಜೆಪಿ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ, ಮಾಗಡಿ ಮಂಡಲ ಅಧ್ಯಕ್ಷ ಪ್ರಸಾದ್ ಗೌಡ, ರೈತ ಮುಖಂಡರಾದ ರಾಮಯ್ಯ ಮತ್ತಿತರರು ಇದ್ದರು.

## ಮೊದಲ ಪುಟದಿಂದ

### ಸಿಎಂ ಆದರೂ 'ಖಯಾಲಿ' ಬಿಡಲ್ಲ!

ಇದು ಡಿಕೆಶಿ ವಿಕೃತ ಮನಸು. ಇವರು ಮೊದಲಿಂದ ಬಂದಿರೋದು ಇದರಿಂದಲೇ. ಈ ಖಯಾಲಿಯಲ್ಲಿ ಬಂದ ವ್ಯಕ್ತಿ ಸಿಎಂ ಆದ ಮೇಲೂ ಸಿಎಂ ಕುರ್ಚಿಗೆ ಗೌರವ ಬೇಡವೇ? ಪೋಸ್ಟರ್ ಹಾಕಿಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ಅಶೋಕ್, ನಾರಾಯಣಸ್ವಾಮಿ, ವಿಜಯೇಂದ್ರ ವಿರುದ್ಧ ಪೋಸ್ಟರ್ ಹಾಕಿದ್ದಾರೆ. ತಪ್ಪು ಮಾಡಿದರೆ ಸಿಎಂ ಆಗಿ ಆಕ್ಷನ್ ತಗೊಳೋಕೆ ಹೇಳಿ ಅಧಿಕಾರಿಗಳಿಗೆ. ಸುಮ್ಮನೆ ಯಾಕೆ ಪೋಸ್ಟರ್ ಹಾಕಿದ್ದೀರಾ? ಎಂದು ತರಾಟೆಗೆ ತೆಗೆದುಕೊಂಡರು. ಈ ರೀತಿ ಪೋಸ್ಟರ್ ಅಂಟಿಸಿ ಪ್ರಚಾರ ಮಾಡೋದಾ? ನನ್ನದು ಬಿಡಿ, ನನ್ನ ಹೆಂಡತಿಯ ಪೋಟೋ ಹಾಕಿದ್ದಾರೆ. 100 ಎಕರೆ ಅಂತ ನನ್ನದು, ನಿಖಿಲ್ ಪೋಟೋ ಹಾಕಿದ್ದಾರೆ. 46 ಎಕರೆಯನ್ನು 40 ವರ್ಷದ ಹಿಂದೆ ಕಷ್ಟ ಪಟ್ಟು ಖರೀದಿ ಮಾಡಿದ್ದೇನೆ. ಅದು ಬಿಟ್ಟು ನನ್ನ ಹೆಸರಿನಲ್ಲಿ ಯಾವ ಜಮೀನು ಇದೆ. 100 ಎಕರೆ ಅಂತ ಪೋಸ್ಟರ್ ಹಾಕಿದ್ದಾರೆ. ಅನಿತಾ ಕುಮಾರಸ್ವಾಮಿ ಅವರು 36–37 ಎಕರೆ ತಗೊಂಡಿದ್ದಾರೆ. ಅದು ಖರೀದಿ ಮಾಡಿರುವುದು. ಯಾವನೋ ಹೆಸರಿನಲ್ಲಿ ಪೋಸ್ಟರ್ ಹಾಕಿ ಕೊಡಿ ಅಂದರೆ ಹೇಗೆ ಎಂದು ಪ್ರಶ್ನಿಸಿದರು.

### ನಿಷೇಧ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ಟೆಲಿಗ್ರಾಮ್

ರವರೆಗೆ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧಗಳನ್ನು ವಿಧಿಸಿದೆ. ನ್ಯಾಯಮೂರ್ತಿ ತೇಜಸ್ ಕರಿಯಾ ಅವರ ರಜಾ ಪೀಠದ ಮುಂದೆ ವಕೀಲ ಮಾಧವ್ ಖೋಸ್ಲಾ ಅವರು ಟೆಲಿಗ್ರಾಮ್ ಪರವಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಾಲಯ ವಿಚಾರಣೆ ನಡೆಸಲು ಒಪ್ಪಿಕೊಂಡಿದೆ.

### 16 ದಿನಕ್ಕೆ 62 ಮಂದಿ ಸಾವು

1,037 ಮಂದಿ ಒಳರೋಗಿಗಳಾಗಿ ದಾಖಲಾಗಿದ್ದರು ಎಂದು ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್. ಸದಾನಂದ ತಿಳಿಸಿದರು. ಈ ವರ್ಷದ ಜನವರಿಯಿಂದ ಮೇ ಅಂತ್ಯದವರೆಗೆ 499 ಮಂದಿ ಮೃತಪಟ್ಟಿದ್ದಾರೆ. ಆ ಅವಧಿಯಲ್ಲಿ ಮರಣ ಪ್ರಮಾಣ ಶೇ 5.37ರಷ್ಟಿದೆ ಎಂದು ತಿಳಿಸಿದ್ದಾರೆ. 2025ರ ಜನವರಿಯಿಂದ ಡಿಸೆಂಬರ್ ಅಂತ್ಯದ ವರೆಗೆ 2,39,941 ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. 21,577 ಮಂದಿ ದಾಖಲಾಗಿದ್ದರು. ಇವರಲ್ಲಿ 1,245 ಮಂದಿ ಮೃತಪಟ್ಟಿದ್ದಾರೆ. ಆ ಅವಧಿಯ ಮರಣ ಪ್ರಮಾಣ ಶೇ 5.77ರಷ್ಟಿದೆ. ತೀವ್ರ ಹೃದಯಾಘಾತವೇ ಸಾವಿಗೆ ಕಾರಣ ಎಂದು ಮಾಹಿತಿ ನೀಡಿದ್ದಾರೆ.

### ರೆಬೆಲ್ ಶಾಸಕರು ಕೈಹಿಡಿಯುವರೇ?

**ಕುರಿತು ಸಹ ಬಿಜೆಪಿಗೆ ಅಡ್ಡಮತದಾನದ ಆತಂಕವಿದೆ.ಅಲ್ಲದೆ, ಸಚಿವ ಸ್ಥಾನದಿಂದ ಉಚ್ಚಾಟನೆ ಗೊಂಡಿರುವ ಮಾಜಿ ಸಚಿವ ಕೆ. ಎನ್ ರಾಜಣ್ಣ ಕುರಿತು ಕಾಂಗ್ರೆಸ್ ಒಳಗೆ ಆತಂಕ ಹೆಚ್ಚಿದೆ. ಪ್ರತಿಸ್ಪರ್ಧಿ ಪಕ್ಷಗಳ ನಡುವೆ ಮುಂದಿನ 48 ಗಂಟೆಗಳು ರಾಜಕೀಯ ತಿರುವುಗಳಿಂದ ಕೂಡಿರಲಿವೆ ಎಂದು ನಿರೀಕ್ಷಿಸಲಾಗಿದೆ.**

### ಹೃದಯಾಘಾತವೇ ಕಾರಣ

ಯಾವುದೇ ದೂರು ಬಂದಿಲ್ಲ ಎಂದು ಡಾ.ದಿನೇಶ್ ತಿಳಿಸಿದರು. ಹನ್ನೊಂದು ಜನರಲ್ಲಿ ಒಬ್ಬರು ಮಾತ್ರ 45 ವರ್ಷದವರು. ಉಳಿದವರು ಹಿರಿಯ ನಾಗರಿಕರು. ಅವರೆಲ್ಲರೂ ಬಿಪಿ, ಪಲ್ಸ್ ಮುಂತಾದ ಸಮಸ್ಯೆಯಿಂದ ಬಳಲುತ್ತಿದ್ದರು. ಹೀಗಾಗಿ ಅವರಿಗೆ ಚಿಕಿತ್ಸೆ ನೀಡಿದರೂ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳಿದರು. ಸಾಮಾಜಿಕ ಮಾಧ್ಯಮದಲ್ಲಿ ವೈದ್ಯರ ಕೊರತೆ ಇದೆ ಎಂದಿದೆ. ಆದರೆ ರಾತ್ರಿ ಪಾಳಿಯಲ್ಲಿ ನಾಲ್ವರು ವೈದ್ಯರು ಇರುತ್ತಾರೆ. ವೈದ್ಯರ ಕೊರತೆಯು ಶೇ 5 ಕ್ಕಿಂತ ಕಡಿಮೆ ಇದೆ. ಹೀಗಾಗಿ ವೈದ್ಯರು ಇಲ್ಲದಿರುವುದು ಎಂಬುದು ಸತ್ಯಕ್ಕೆ ದೂರವಾದ ವಿಚಾರ ಎಂದು ಅವರು ತಿಳಿಸಿದರು.

**ಮೈಸೂರು ಅರಮನೆ ಮಂಡಳಿ, ಮೈಸೂರು**
**ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ಮೈಸೂರು**

ಸಂ.: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ: 03/2026–27 ದಿನಾಂಕ: 15.06.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ **ರೂ. 15.00 ಲಕ್ಷಗಳ ಅರಮನೆ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದ ಒಟ್ಟು 04 ಸಂಖ್ಯೆ ಕಾಮಗಾರಿಗೆ ಸಂಬಂಧಿಸಿದ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೋಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ/ನೋಂದಾಯಿತ ಏಜೆನ್ಸಿಯವರಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 29.06.2026 ಸಂಜೆ 4:00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 30.06.2026 ಸಂಜೆ 4:00 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 01.07.2026 ಸಂಜೆ 4:00 ಗಂಟೆಯವರೆಗೆ.** (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 01.07.2026ರ ಸಂಜೆ 4:30 ಗಂಟೆಗೆ.** (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ. 5.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ. 3.00 ಲಕ್ಷಗಳು.** ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ, ಆನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–
**ಉಪ ನಿರ್ದೇಶಕರು**
ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/MYS/345/SA/2026-27

# ಗ್ಯಾರಂಟಿ ಯೋಜನೆಗಳು ನಿಲಲ್ಲ

## ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಸ್ಪಷ್ಟನೆ

ಮೈಸೂರು: ಸರ್ಕಾರ ಬಡವರು, ಹಿಂದುಳಿದ ವರ್ಗದವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಪಂಚ ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್. ಅರುಣ್ ಕುಮಾರ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಮಾತ್ರ ತಲುಪಬೇಕು ಎಂಬುದು ಸಮಿತಿಯ ಉದ್ದೇಶವಾಗಿದೆ. ತಾಲ್ಲೂಕು ಮಟ್ಟದಲ್ಲಿ ನಡೆಯುವ ಸಮಿತಿ ಸಭೆಯಲ್ಲಿ ಅಧಿಕಾರಿಗಳು ಹಾಜರಾಗಬೇಕು, ಹಾಜರಾಗದಿದ್ದಲ್ಲಿ ವರದಿಯನ್ನು ಜಿಲ್ಲಾ ಮಟ್ಟದ ಸಮಿತಿಗೆ ವರದಿ ನೀಡಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಮಾತನಾಡಿ ಗೃಹಲಕ್ಷ್ಮಿ ಯೋಜನೆಯಲ್ಲಿ ಮೃತ ಫಲಾನುಭವಿ, ಐ.ಟಿ, ಜಿ.ಎಸ್.ಟಿ ಪಾವತಿ ಮಾಡುತ್ತಿರುವ ಫಲಾನುಭವಿಗಳು ಅನರ್ಹರಾಗಿದ್ದು, ಅವರಿಗೆ ಪಾವತಿಸಲಾಗುತ್ತಿರುವ ಗೃಹಲಕ್ಷ್ಮಿ ಹಣ ನಿಲುಗಡೆಯಾಗಬೇಕು. ಅನರ್ಹರಾಗಿ ಹಣ ಪಡೆದಿದ್ದಲ್ಲಿ ಅವರಿಂದ ವಸೂಲಿ ಮಾಡಬೇಕು. ಅನರ್ಹ ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿಗಳ ನಿಖರ ಮಾಹಿತಿಯನ್ನು ಸಭೆಗೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ, ಅರ್ಹ ಫಲಾನುಭವಿಗಳಿಗೆ ಪಂಚ ಗ್ಯಾರಂಟಿ ಯೋಜನೆ ತಲುಪಿಸಲು ತೊಂದರೆಯಿದ್ದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ತಕ್ಷಣ ಪರಿಹಾರಕ್ಕೆ ಕ್ರಮವಹಿಸಬೇಕು. 2028ಕ್ಕೂ ನಮ್ಮದೇ ಸರ್ಕಾರ ಬರಲಿದ್ದು, ಮುಂದಿನ ಸಾಲಿನಲ್ಲೂ ಗ್ಯಾರಂಟಿಯನ್ನು ಮುಂದುವರೆಸಲಾಗುವುದು. ಯಾವುದೇ ಆತಂಕದ ಅಗತ್ಯವಿಲ್ಲ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಯ ಸದಸ್ಯ ಸಾ.ಮಾ.ಯೋಗೇಶ್, ಮಾತನಾಡಿ ಹೊರರಾಜ್ಯದ ಮಹಿಳೆಯರು ಗೃಹಲಕ್ಷ್ಮಿಯ ಫಲಾನುಭವಿಗಳಾಗಿರಬಹುದು. ಅವರನ್ನು ಪತ್ತೆ ಹಚ್ಚಲು ಅಧಿಕಾರಿಗಳು ಕೆಳಹಂತದ ಸಿಬ್ಬಂದಿಗಳೊಂದಿಗೆ ಚುರುಕಾಗಿ ಕೆಲಸ ನಿರ್ವಹಿಸಿ ಶೀಘ್ರವಾಗಿ ವರದಿ ನೀಡಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಾಗರಾಜು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 13677 ಗೃಹಲಕ್ಷ್ಮಿ ಫಲಾನುಭವಿಗಳು ಮರಣ ಹೊಂದಿರುತ್ತಾರೆ. ಮನೆ ಮನೆಗೆ ಭೇಟಿ ನೀಡಿ ಅಂಗನವಾಡಿ ಕಾರ್ಯಕರ್ತೆಯರು ಪರಿಶೀಲಿಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ವರದಿ ನೀಡುತ್ತಿದ್ದಾರೆ. ಪರಿಶೀಲನೆ ಕೆಲಸವನ್ನು ಬೇಗನೇ ಪೂರ್ಣಗೊಳಿಸಲಾಗುವುದು. ಬಯೋಮೆಟ್ರಿಕ್ ಹಾಗೂ ಹೊಸ ಅರ್ಜಿ ಸಲ್ಲಿಕೆ ಕುರಿತಂತೆ ಸರ್ಕಾರದಿಂದ ಮಾರ್ಗಸೂಚಿ ಬಂದಿರುವುದಿಲ್ಲ, ಬಂದ ಕೂಡಲೇ ಅನುಷ್ಠಾನ ಗೊಳಿಸಲಾಗುವುದು ಎಂದರು. ಗೃಹಲಕ್ಷ್ಮಿ ಯೋಜನೆಯಡಿ 2026–27ನೇ ಸಾಲಿನಲ್ಲಿ ಬಿಡುಗಡೆಯಾದ ಮೊದಲನೇ ಕಂತಿನಲ್ಲಿ 671674 ಫಲಾನುಭವಿಗಳಿಗೆ ಅನುದಾನ 13433.48ಲಕ್ಷ ರೂ.ಗಳು ಬಿಡುಗಡೆಯಾಗಿದ್ದು ಫಲಾನುಭವಿಗಳಿಗೆ ಪಾವತಿಯಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಚಂದ್ರಶೇಖರ್, ಅಬ್ದುಲ್ ಖಾದರ್, ಚಲುವರಾಜು, ಮಹದೇವ್, ಗುರುಸ್ವಾಮಿ, ಉದಯಶಂಕರ್, ಚಲುವರಾಜು, ನಿತಿನ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.



### ಯುವನಿಧಿ ತರಬೇತಿಗೆ ಹಿನ್ನಡೆ

ಮೈಸೂರು: ಮೈಸೂರು ಜಿಲ್ಲೆಯಲ್ಲಿ ಯುವ ನಿಧಿಗೆ ಹಿನ್ನಡೆ ಆಗುತ್ತಿರುವ ಬಗ್ಗೆ ಸಮಿತಿ ಅಧ್ಯಕ್ಷ ಅರುಣ್ ಕುಮಾರ್ ಸೇರಿದಂತೆ ಅನೇಕರು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ, ಈ ಬಗ್ಗೆ ಪ್ರತಿ ವರ್ಷ ಪದವಿ, ಉನ್ನತ ಶಿಕ್ಷಣ ಪಡೆಯುವ ಕಾಲೇಜುಗಳಿಗೆ ತೆರಳಿ ಅರಿವು ಮೂಡಿಸುವ ಕೆಲಸ ಮಾಡುವಂತೆ ಸೂಚಿಸಿದರು. ಜತೆಗೆ ಯುವನಿಧಿಯೊಟ್ಟಿಗೆ ತರಬೇತಿ ಪಡೆಯಲು ಯುವಕರೇ ಬರುತ್ತಿಲ್ಲ. ತರಬೇತಿಗೆ ಆಗಮಿಸುವ ಯುವಕರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿದರೆ ಅನುಕೂಲ ಆಗಲಿದೆ ಎಂಬ ಅಧಿಕಾರಿಗಳ ಮಾತಿಗೆ ಈ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಲಾಗುವುದು. ಈಗಾಗಲೇ ಮಹಿಳೆಯರಿಗೆ ಉಚಿತ ಇರುವುದರಿಂದ ಅವರನ್ನು ಹೆಚ್ಚಾಗಿ ತರಬೇತಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಇಲಾಖೆ ಶ್ರಮವಹಿಸುವಂತೆ ಹೇಳಿದರು.

**ಶೀಘ್ರ ಗೃಹಜ್ಯೋತಿ, ಗೃಹಲಕ್ಷ್ಮಿ**

**ಶೀಘ್ರದಲ್ಲೇ ಗೃಹಜ್ಯೋತಿ, ಗೃಹಲಕ್ಷ್ಮಿ ಪರಿಷ್ಕರಣೆ ಮಾಡುವ ಕೆಲಸ ಆಗಲಿದ್ದು, ಅದು ಸಹ ಕರ್ನಾಟಕ ಒನ್, ಮೈಸೂರು ಒನ್ ಕೇಂದ್ರಗಳಲ್ಲಿ ಮಾತ್ರ ಆಗಲಿದೆ. ಕೇವಲ ಬಯೋ ಮೆಟ್ರಿಕ್ ಪಡೆದು ಪರಿಶೀಲನೆ ನಡೆಸುತ್ತಾರೆ. ಹೀಗಾಗಿ ಯಾರು ಸಹ ಆತಂಕ ಪಡುವ ಅಗತ್ಯವಿಲ್ಲ. ಸದ್ಯದಲ್ಲೇ ಈ ಸಂಬಂಧ ಸರ್ಕಾರ ಹೊಸ ಮಾರ್ಗಸೂಚಿ ಹೊರಡಿಸಲಿದೆ. ಅದಾದ ಬಳಿಕ ಸಾರ್ವಜನಿಕರು ಮಾಹಿತಿ ನೀಡಬಹುದಾಗಿದೆ. ಅಲ್ಲಿಯವರೆಗೂ ಕಾಯಬೇಕಿದೆ.**

**›› ಅರುಣಕುಮಾರ್**

## ಶಿವನಸಮುದ್ರ: 13,90,190 ರೂ. ಸಂಗ್ರಹ

ಕೊಳ್ಳೇಗಾಲ: ಇಲ್ಲಿನ ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, ಒಟ್ಟು 13,90,190 ರೂ. ಸಂಗ್ರಹವಾಗಿದೆ.

ತಾಲ್ಲೂಕಿನ ಮಧ್ಯರಂಗನಾಥಸ್ವಾಮಿ ದೇವಸ್ಥಾನ, ಮೀನಾಕ್ಷಿ ದೇವಸ್ಥಾನ ಹಾಗೂ ಆದಿಶಕ್ತಿ ಮಾರಮ್ಮ ದೇವಸ್ಥಾನಗಳ ಹುಂಡಿಗಳ ಎಣಿಕೆ ಕಾರ್ಯ ನಡೆಯಿತು. ಕಳೆದ ಮೂರು ಅವಧಿ ಬಳಿಕ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಆದೇಶದಂತೆ ಹುಂಡಿಗಳ ಎಣಿಕೆ ಕಾರ್ಯ ತಹಶಿಲ್ದಾರ್ ಬಸವರಾಜು ರವರ ಉಪಸ್ಥಿತಿಯಲ್ಲಿ ನಡೆಯಿತು. ಎಣಿಕೆಯ ಹಣವನ್ನು ಕೋಟೆಕ್ ಮಹೀಂದ್ರಾ ಬ್ಯಾಂಕ್ ನಲ್ಲಿ ಜಮಾ ಮಾಡಲಾಯಿತು. ಇಂದಿನ ಹುಂಡಿ ಎಣಿಕೆ ಕಾರ್ಯದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್, ಡೆಪ್ಯುಟಿ ತಹಶಿಲ್ದಾರ್ ವಿಜಯಕುಮಾರ್, ರೆವಿನ್ಯೂ ಇನ್ಸಪೆಕ್ಟರ್ ರಂಗಸ್ವಾಮಿ,ಶಾಂತರಾಜು, ರಾಕೇಶ್ ಮರಾಠ, ಸತೀಶ್, ಹೇಮಾ, ಪ್ರದೀಪ, ಮಹೇಶ್, ಕುಮಾರ, ಪಾಳ್ಯ ಮತ್ತು ಕಸಬಾ ಗ್ರಾಮ ಸಹಾಯಕರು, ದೇವಾಲಯದ ಸಿಬ್ಬಂದಿ ವರ್ಗ, ಅರ್ಚಕರು ಇದ್ದರು. ಎಣಿಕೆ ಕಾರ್ಯದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಹೆಡ್ ಕಾನ್ಸಟೇಬಲ್ ಮಹದೇವಸ್ವಾಮಿ, ಕಾನ್ಸಟೇಬಲ್ ರಾಜೇಶ್ ಬಂದೋಬಸ್ತ್ ವಹಿಸಿದರು.



## ಮೊದಲ ಪುಟದಿಂದ

### ನಾವ್ಯಾಕೆ ಕಾಂಗ್ರೆಸ್‌ಗೆ ಆಪರೇಷನ್ ಮಾಡೋಣ?

ಶಿವಕುಮಾರ್ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾವೇನು ಆಪರೇಷನ್ ಮಾಡೋಣ? ನಮ್ಮದು ಸಣ್ಣ ಪಕ್ಷ. ನಮ್ಮ ಕೈಯಲ್ಲಿ ಮಾಡೋಕೆ ಏನಿದೆ? ಸರ್ಕಾರ ಅವರ ಕೈಯಲ್ಲಿದೆ. ಮ್ಯಾನ್ ಪವರ್, ಮಸಲ್ ಪವರ್, ಹಣದ ಪವರ್ ಎಲ್ಲ ಇಟ್ಟುಕೊಂಡಿದ್ದಾರೆ. ಅವರ ವಿರುದ್ಧ ನಾವು ಫೈಟ್ ಮಾಡೋಕೆ ಆಗುತ್ತಾ? ಎಂದು ಪ್ರಶ್ನೆ ಮಾಡಿದರು.

ನಮ್ಮ ಪಕ್ಷದ ಮತಗಳು ಚೆಲ್ಲಾಪಿಲ್ಲಿ ಆಗಬಾರದು. ನಮ್ಮ ಮತ ಒಟ್ಟಾಗಿ ಇರಬೇಕು ಅಂತ ಅಭ್ಯರ್ಥಿ ಆಯ್ಕೆ ಮಾಡಿದ್ದೇವೆ. ಕುತಂತ್ರ ಮಾಡಿ ಗೆದ್ದೇ ಬಿಡಬೇಕು ಅನ್ನೋ ಪ್ರಶ್ನೆ ಇಲ್ಲ. ನಮ್ಮ ಅಭ್ಯರ್ಥಿ ಅರ್ಜಿ ಹಾಕುವಾಗ ಆತ್ಮಸಾಕ್ಷಿಯಿಂದ ಮತ ಕೊಡಿ ಅಂತ ಕೇಳಿದ್ದಾರೆ. ಇದನ್ನ ಹೊರತುಪಡಿಸಿ ಇನ್ನೇನಿದೆ. ನಮ್ಮ ವೋಟ್ ಜೊತೆ ಬಿಜೆಪಿ ವೋಟ್ ಇದೆ. ಅದಕ್ಕೆ ಮನವಿ ಮಾಡಿದ್ದೇವೆ. ನಮ್ಮ ವೋಟ್ ಭದ್ರ ಮಾಡೋಕೆ ಅಭ್ಯರ್ಥಿ ಹಾಕಿದ್ದೇವೆ ಎಂದು ತಿಳಿಸಿದರು. ಚಲುವರಾಯಸ್ವಾಮಿ ಅಂಥವರ ಹೇಳಿಕೆಗಳಿಗೆ ನಾನು ಉತ್ತರ ಕೊಡಲ್ಲ. ಅವರು ಪಾಪ ಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಮಾತನಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

### 'ಮಾಸ್' ಮ್ಯಾನ್' ಜೊತೆ ಮಾತು ನಿಜ

ಚಿನ್ನಯ್ಯ ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸಿದ್ದಾನೆ ಅನ್ನೋದು ತನಿಖೆಯಲ್ಲಿ ಗೊತ್ತಾಗಿದೆ. ನಾನು ಏನೇ ಪ್ರಶ್ನೆ ಕೇಳಿದರೂ ಹಿಂದೂ ವಿರೋಧಿ ಅಂತಾರೆ. ಈ ವಿಚಾರ ಇನ್ನೂ ಕೋರ್ಟ್ ನಲ್ಲಿದೆ. ನಾನ್ ಧರ್ಮಸ್ಥಳಕ್ಕೆ ಹೋಗೇ ಇಲ್ಲ.

ನಾನ್ಯಾಕೆ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮಾಡಲಿ? ಎಂದು ಪ್ರಶ್ನಿಸಿದರು ಧರ್ಮಸ್ಥಳಕ್ಕೆ ಅಪಪ್ರಚಾರ ಮಾಡಲು ಪ್ರಕಾಶ್ ರಾಜ್ 200 ಕೋಟಿ ಡೀಲ್ ಮಾಡಿದ್ದಾರೆ ಅಂತ ಬಿಂಬಿಸಲಾಗುತ್ತಿದೆ. ಅಷ್ಟಕ್ಕೂ 200 ಕೋಟಿ ರೂಪಾಯಿ ಹಣವನ್ನು ನಾನೆಲ್ಲಿಂದ ತರಲಿ? ಪರಮ ಪವಿತ್ರ ಧರ್ಮಸ್ಥಳದ ಮೇಲೆ ನಾನು ಯಾಕೆ ಅಪಪ್ರಚಾರ ಮಾಡಲಿ? ವಿಷಯವನ್ನು ತಿರುಚಿ ನನಗೆ ಧರ್ಮಸ್ಥಳದ ಮೇಲೆ ಪ್ರೀತಿ ಇಲ್ಲ. ನಾನು ಧರ್ಮ ವಿರೋಧಿ ಅಂತೆಲ್ಲಾ ಯಾಕೆ ಬಣ್ಣ ಬಳಿಯುತ್ತಿದ್ದೀರಾ? ಎಂದು ಪ್ರಕಾಶ್ ರಾಜ್ ಪ್ರಶ್ನಿಸಿದರು.

ಚಿನ್ನಯ್ಯ ಅಂತ ಪರಿಚಯ ಮಾಡ್ಕೊಂಡ ವ್ಯಕ್ತಿ ನಿಮ್ಮ ಮೀಟ್ ಮಾಡಬೇಕು ಅಂದ. ಆಗ ನಾನ್ಯಾಕೆ ನಿನ್ನ ಮೀಟ್ ಮಾಡಬೇಕು, ನೀನ್ ಹೇಳಬೇಕು ಅಂತ ಇದೀಯೋ ಅದನ್ನ ರೆಕಾರ್ಡ್ ಮಾಡಿ ಕಳಸು ಅಂತ ಹೇಳಿದ್ದೆ. ಪ್ರಣವ್ ಮೋಹಂತಿ ಸರ್ ಇದಾರೆ ಅವರನ್ನ ಭೇಟಿ ಮಾಡು ಅಂದಿದ್ದೆ ಎಂದು ಸ್ಪಷ್ಟನೆ ನೀಡಿದರು.

**ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ಸಲಹೆ**

# ಬಿಳಿ ಸುಳಿರೋಗ ನಿಯಂತ್ರಣಕ್ಕಾಗಿ ಬೆಳೆ ಪರಿವರ್ತನೆ ಅನಿವಾರ್ಯ

ಎಚ್ ಡಿ ಕೋಟೆ: ಈ ಹಿಂದೆ ರಾಗಿ ಬೆಳೆಯುವ ರೈತರ ಮಕ್ಕಳಿಗೆ ಹೆಣ್ಣು ಮಕ್ಕಳನ್ನುಕೊಡುತ್ತಿರಲಿಲ್ಲ. ಅವರು ರಾಗಿ ಹೊರತುಪಡಿಸಿ ಹೊಗೆಸೊಪ್ಪು, ಶುಂಠಿ ಸೇರಿದಂತೆ ವಾಣಿಜ್ಯ ಬೆಳೆಗಳನ್ನು ಬೆಳೆಯಲ್ಲ ಅನ್ನೋ ದೃಷ್ಟಿಯಿಂದ ಹಿಂದೇಟು ಹಾಕುತ್ತಿದ್ದರು. ಆದರೆ ಇವಾಗ ಪರಿಸ್ಥಿತಿ ಬದಲಾಗಿದೆ. ಈಗ ಎಪಿಎಂಸಿಯಲ್ಲೇ ಕ್ವಿಂಟಲ್ ರಾಗಿಗೆ 5,250 ರೂಪಾಯಿ ಕೊಟ್ಟು ಖರೀದಿಸುತ್ತಾರೆ. ಈ ಹಿಂದೆ 2–3 ಕ್ವಿಂಟಲ್ ರಾಗಿ ಬೆಳೆಯುತ್ತಿದ್ದರು. ಆದರೆ ಈಗ 15 ರಿಂದ 20 ಕ್ವಿಂಟಲ್ ನಾಟಿ ರಾಗಿ ಬೆಳೆಯುವ ಸಾಮರ್ಥ್ಯ ಇದೆ. ಇದಕ್ಕೆ ಬೆಳೆ ಪರಿವರ್ತನೆ ಕಾರಣ ಎಂದು ತಾಲೂಕಿನ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ಹೇಳಿದರು.



ತಾಲೂಕಿನ ಬೀಚನಹಳ್ಳಿಯಲ್ಲಿರುವ ಪ್ರವಾಸಿ ಮಂದಿರದಲ್ಲಿ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ, ಮಂಡ್ಯ ವತಿಯಿಂದ ಹಮ್ಮಿಕೊಂಡಿದ್ದ ಮುಸುಕಿನ ಜೋಳ ಉತ್ಪಾದನೆ, ಬೆಳೆ ಪರಿವರ್ತನೆ, ಬೀಜ ಪರಿಕರಗಳ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಮುಸುಕಿನ ಜೋಳದ ಬೆಳೆಯಲ್ಲಿ ಬೂಜುರೋಗ ಹಾಗೂ ಬಿಳಿಸುಳಿರೋಗ ನಿಯಂತ್ರಣಕ್ಕಾಗಿ ರೈತರು , ರಾಗಿ, ತೊಗರಿ, ಅಲಸಂದೆ ಹಾಗೂ ಅವರೆ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಅಳವಡಿಸಿಕೊಳ್ಳಬೇಕು. ಬಿತ್ತನೆಗೂ ಮುನ್ನ ಬೀಜೋಪಚಾರ ಕಡ್ಡಾಯವಾಗಿ ಮಾಡಬೇಕು ಹಾಗೂ ಕೃಷಿ ಇಲಾಖೆ ಶಿಫಾರಸು ಮಾಡುವ ಶೀಲಿಂಧ್ರನಾಶಕಗಳನ್ನೂ ಸೂಕ್ತ ಸಮಯದಲ್ಲಿ ಸಿಂಪಡಿಸಬೇಕು ಎಂದು ಹೇಳಿದರು. ಅನೇಕ ರೈತರು. ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ಪಡೆಯಲು 20:20:0:13 ಪೋಷಕಾಂಶ ಹೊಂದಿರುವ ಗೊಬ್ಬರ ಬಳಸುತ್ತಿದ್ದಾರೆ. ಇದರಲ್ಲಿ ಪೊಟ್ಯಾಸಿಯಂ ಅಂಶ ಕಡಿಮೆ ಇರುವುದರಿಂದ ಬೆಳೆಗಳ ರೋಗ ನಿರೋಧಕ ಶಕ್ತಿ ಕುಗ್ಗುತ್ತದೆ. ಒಂದು ಎಕರೆಗೆ 25 ಕೆಜಿ ಪೊಟ್ಯಾಸಿಯಂ 5ಕೆಜಿ ಜಿಂಕ್ ಸಲ್ಫೇಟ್ ನೀಡಿದರೆ ಬೆಳೆಗಳ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ವರ್ಷಕ್ಕೆ ಮೂರು ಅಥವಾ ನಾಲ್ಕು ಬಾರಿ ಮುಸುಕಿನ ಜೋಳವನ್ನು ಒಂದೇ ಹೊಲದಲ್ಲಿ ನಿರಂತರವಾಗಿ ಬೆಳೆಯುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗಿ ವಿವಿಧ ರೋಗಗಳಿಗೆ ಆಹ್ವಾನ ನೀಡುತ್ತಿದೆ. ಹೀಗಾಗಿ ರೈತರು ಮಿಶ್ರ ಬೇಸಾಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದ ಆಡಳಿತ ಅಧಿಕಾರಿ ಮಹೇಶ್ ಕೆ, ಪಿ.ಮಹದೇವ್, ಮಲ್ಲಿಕಾರ್ಜುನ, ಮನು, ಬಸಪ್ಪ, ಸುಷ್ಮಾ, ಚಂದ್ರಕಲಾ ಅಣಗಿ. ಡಾ.ಸ್ವಪ್ನಾ ಜೆ, ಕಾವೇರಿ ನೀರಾವರಿ ನಿಗಮ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಗಣೇಶ್ ಉಪಸ್ಥಿತರಿದ್ದರು.

# ಗುಂಡ್ಲುಪೇಟೆಯಲ್ಲಿ ಅದ್ದೂರಿಯಾಗಿ ಜರುಗಿದ ಬಸವ ಜಯಂತಿ

ಗುಂಡ್ಲುಪೇಟೆ: ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕ, ಯುವ ಘಟಕ ಹಾಗೂ ತಾಲೂಕಿನ ಸಮಸ್ತ ವೀರಶೈವ ಲಿಂಗಾಯತ ಸಂಘ-ಸಂಸ್ಥೆಗಳು ಮತ್ತು ಸಮಾಜದ ವತಿಯಿಂದ ತಾಲೂಕು ಮಟ್ಟದ ಬಸವ ಜಯಂತಿಯನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು. ಸೋಮಹಳ್ಳಿ ಮಠದ ಸಿದ್ದಮಲ್ಲ ಸ್ವಾಮೀಜಿ, ಪಡಗೂರು ಅಡವಿ ಮಠದ ಶಿವಲಿಂಗೇಂದ್ರ ಸ್ವಾಮೀಜಿ, ಮಾದಾಪುಟ್ಟಣ ಮಠದ ತೋಂಟದಾರ್ಯ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಹಾಗೂ ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಅವರು ಬೆಳ್ಳಿ ರಥದಲ್ಲಿದ್ದ ಬಸವೇಶ್ವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.



### ಬೆಳ್ಳಿ ರಥದ ಭವ್ಯ ಮೆರವಣಿಗೆ

ಪಟ್ಟಣದ ಜೆಎಸ್‌ಎಸ್ ಕಾಲೇಜು ಆವರಣದಿಂದ ಆರಂಭವಾದ ಬಸವೇಶ್ವರರ ಬೆಳ್ಳಿ ರಥದ ಭವ್ಯ ಮೆರವಣಿಗೆಯು ಪ್ರಮುಖ ರಸ್ತೆಗಳ ಮೂಲಕ ಸಾಗಿತು. ಕೆಎಸ್ ಆರ್‌ಟಿಸಿ ಸರ್ಕಲ್ ಮಾರ್ಗವಾಗಿ ಹೊರಟು, ಬಸವೇಶ್ವರ ವೃತ್ತ, ಹಳೆ ಬಸ್ ನಿಲ್ದಾಣ, ಕೆಆರ್‌ಸಿ ರಸ್ತೆ ಹಾಗೂ ಕೋಡಹಳ್ಳಿ ಸರ್ಕಲ್ ಮೂಲಕ ಹಾದುಹೋಗಿ ಅಂತಿಮವಾಗಿ ತಾಲೂಕು ಕಚೇರಿವರೆಗೆ ವಿಜೃಂಭಣೆಯಿಂದ ಸಾಗಿಬಂತು.

### ಕಲಾತಂಡಗಳ ಮೆರುಗು ಜನಸಾಗರ

ಬಸವ ಜಯಂತಿಯ ಹಿನ್ನೆಲೆಯಲ್ಲಿ ಸಹಸ್ರಾರು ಸಂಖ್ಯೆಯ ಯುವಕರು ಡಿಜೆ ಸಂಗೀತಕ್ಕೆ ಹೆಜ್ಜೆಹಾಕಿ ಸಂಭ್ರಮಿಸಿದರು. ಆಕರ್ಷಕ ಹಳ್ಳಿಕಾರ್ ಜೋಡೆತ್ತುಗಳ ಮೆರವಣಿಗೆ, ಕಂಸಾಳೆ ನಾದ, ನಂದಿಕಂಬ, ಗೊರವರ ಕುಣಿತ, ಡೋಳು, ಕೇರಳ ಚೆಂಡೆ ಹಾಗೂ ನಗಾರಿ ಸೇರಿದಂತೆ ನಾಡಿನ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ವಿಶೇಷ ಮೆರುಗು ನೀಡಿದವು. ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಶರಣರು ಹರಿದು ಬಂದಿದ್ದರಿಂದ ಜೆಎಸ್‌ಎಸ್ ಕಾಲೇಜಿನಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೂ ಭಾರಿ ಜನಸ್ತೋಮವೇ ನೆರೆದಿತ್ತು. ಯುವಕರು ಬಸವ ಧ್ವಜಗಳನ್ನು ಹಿಡಿದು ಭಕ್ತಿಭಾವ ಮೆರೆದರು.

### 15 ಸಾವಿರ ಜನರಿಗೆ ಅನ್ನಸಂತರ್ಪಣೆ

ಈ ಬೃಹತ್ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಶಾಸಕ ಗಣೇಶ್ ಪ್ರಸಾದ್ ಅವರ ಸಂಪೂರ್ಣ ಸಹಕಾರದೊಂದಿಗೆ ಬೃಹತ್ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಜನರಿಗೆ ಅಚ್ಚುಕಟ್ಟಾಗಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

### ಮಠಾಧೀಶರು ಹಾಗೂ ಗಣ್ಯರ ಉಪಸ್ಥಿತಿ

ಈ ಶುಭ ಸಂದರ್ಭದಲ್ಲಿ ವಿವಿಧ ಮಠಗಳ ಶ್ರೀಗಳಾದ ಮೂಡಗೂರು ಇಮ್ಮಡಿ ಉದ್ದಾನಸ್ವಾಮಿಗಳು ಹಾಗೂ ಗೋಪಾಲಪುರ, ಹಂಗಳ, ಕಬ್ಬಹಳ್ಳಿ ಸೇರಿದಂತೆ ವಿವಿಧ ಮಠಾಧಿಪತಿಗಳು ಸಾಕ್ಷಿಯಾದರು. ಇವರೊಂದಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷ ಶಿವಪ್ರಸಾದ್, ಜಿಲ್ಲಾಧ್ಯಕ್ಷ ನಂದೀಶ್, ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ನಂಜುಂಡಪ್ರಸಾದ್, ಮಾಜಿ ಅಧ್ಯಕ್ಷ ಕಮರಹಳ್ಳಿ ರವಿ, ಯುವ ಘಟಕದ ಅಧ್ಯಕ್ಷ ಗುರುಪ್ರಸಾದ್, ರಾಜ್ಯ ಘಟಕದ ಪ್ರಣಯ್ ಸೇರಿದಂತೆ ಮಹಾಸಭಾದ ಜಿಲ್ಲಾ ಮತ್ತು ತಾಲೂಕು ನಿರ್ದೇಶಕರು, ಪದಾಧಿಕಾರಿಗಳು, ಸಮುದಾಯದ ಮುಖಂಡರು ಹಾಗೂ ಅಪಾರ ಸಂಖ್ಯೆಯ ಸಾರ್ವಜನಿಕರು ಉಪಸ್ಥಿತರಿದ್ದರು.

---

## ಪೌರಕಾರ್ಮಿಕರಿಗೆ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಿ

**ಅಧಿಕಾರಿಗಳಿಗೆ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾದ ಸಿ. ಶಂಕರ ಅಂಕನಶೆಟ್ಟಿಪುರ ಸೂಚನೆ**



ಚಾಮರಾಜನಗರ, ಪೌರಕಾರ್ಮಿಕರಿಗೆ ಸರ್ಕಾರದ ಸೌಲಭ್ಯ, ಸವಲತ್ತುಗಳನ್ನು ನಿಗದಿತ ಕಾಲಮಿತಿಯಲ್ಲಿ ಸಮರ್ಪಕವಾಗಿ ತಲುಪಿಸಲು ಮುಂದಾಗುವಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾದ ಸಿ. ಶಂಕರ ಅಂಕನಶೆಟ್ಟಿಪುರ ಅವರು ನಗರಸಭೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ನಗರಸಭಾ ಸಭಾಂಗಣದಲ್ಲಿಂದು ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪೌರ ಕಾರ್ಮಿಕರ ಸಮಸ್ಯೆ, ಕುಂದುಕೊರತೆಗಳನ್ನು ಆಲಿಸಿ ಬಳಿಕ ಮಾತನಾಡಿದ ಅವರು ಸರ್ಕಾರದ ಮಾರ್ಗಸೂಚಿಗಳನ್ವಯ ಪೌರಕಾರ್ಮಿಕರಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ನಿರ್ಲಕ್ಷ್ಯ ವಹಿಸಿದಲ್ಲಿ ಆಯೋಗದ ವತಿಯಿಂದ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು ಎಂದು ತಾಕೀತು ಮಾಡಿದರು.

ಗೃಹಭಾಗ್ಯ ಯೋಜನೆಯಡಿ ಹೊಸದಾಗಿ ನೇಮಕವಾಗಿರುವ ಪೌರ ಕಾರ್ಮಿಕರಿಗೆ ಸೋಮವಾರಪೇಟೆ ಹಾಗೂ ರಾಮಸಮುದ್ರ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಲಾಗಿದ್ದು, ಈವರೆಗೂ ಹಕ್ಕುಪತ್ರಗಳನ್ನು ನೀಡಿರುವುದಿಲ್ಲ. ಪೌರಕಾರ್ಮಿಕರು ವಾಸಿಸುವ ಸ್ಥಳಗಳಲ್ಲಿ ರಸ್ತೆ, ಒಳಚರಂಡಿ, ಬೀದಿದೀಪ ಸೇರಿದಂತೆ ಮೂಲಸೌಲಭ್ಯಗಳಿಲ್ಲ. ಕೊಳಚೆ ಮಂಡಳಿಯಿಂದ 92 ಮನೆಗಳು ಮಂಜೂರಾಗಿದ್ದರೂ ಮನೆ ನಿರ್ಮಾಣಕ್ಕೆ ತಡೆಯೊಡ್ಡಲಾಗಿದೆ. ಖಾಯಂ ಪೌರಕಾರ್ಮಿಕರಂತೆ ನೇರ ಪಾವತಿದಾರರಿಗೂ ವೇತನದ ಜತೆಗೆ ಸಂಕಷ್ಟ ಭತ್ಯೆಯನ್ನು ನೀಡಬೇಕು. 2-3 ತಿಂಗಳಿಗೊಮ್ಮೆ ವೇತನ ನೀಡದೆ ಪ್ರತಿತಿಂಗಳು ನೀಡಬೇಕೆಂಬ ಸಮಸ್ಯೆಗಳನ್ನು ಸಭೆಯಲ್ಲಿ ಗಮನಕ್ಕೆ ತರಲಾಯಿತು. ಸ್ವಚ್ಚತೆಗಾಗಿ ಆರೋಗ್ಯ ಸುರಕ್ಷಾ ಪರಿಕರಗಳನ್ನು ನೀಡಬೇಕು. ಗುರುತಿನ ಚೀಟಿ ನೀಡಬೇಕು. ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಗರಸಭೆಯಲ್ಲಿ ಕ್ಷೇಮಾಭಿವೃದ್ಧಿ ನಿಧಿ ಮೀಸಲಿಡಬೇಕು. ವಿಶ್ರಾಂತಿಗೃಹ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ನಿಯಮಿತವಾಗಿ ಸಮವಸ್ತ್ರ ನೀಡುವ ವ್ಯವಸ್ಥೆಯಾಗಬೇಕು. ಇ.ಎಸ್.ಐ ಮತ್ತು ಪಿಎಫ್ ಹಣ ಕೊಡಿಸಬೇಕು. ನಿವೃತ್ತಿ ಹೊಂದಿದ ಪೌರಕಾರ್ಮಿಕರಿಗೆ ನಗರಸಭೆಯಿಂದ ಗೌರವಯುತವಾಗಿ ಬೀಳ್ಕೊಡುಗೆ ನೀಡಬೇಕು. ಖಾಯಂ ಹಾಗೂ ನೇರಪಾವತಿ ಪೌರ ಕಾರ್ಮಿಕರ ನಡುವೆ ತಾರತಮ್ಯವಿರಬಾರದು ಎಂಬುದು ಸೇರಿದಂತೆ ಇನ್ನಿತರೆ ಅಹವಾಲುಗಳನ್ನು ಪೌರಕಾರ್ಮಿಕರು ನಿವೇದಿಸಿಕೊಂಡರು.

ಸಮಸ್ಯೆಗಳನ್ನು ಆಲಿಸಿದ ಆಯೋಗದ ಸದಸ್ಯರಾದ ಸಿ. ಶಂಕರ ಅಂಕನಶೆಟ್ಟಿಪುರ ಅವರು ಮಾತನಾಡಿ ಪ್ರತಿನಿತ್ಯ ನಗರಸ್ವಚ್ಚತೆ ಕಾಯಕ ಮಾಡುವ ಪೌರಕಾರ್ಮಿಕರ ಹಿತ ಕಾಪಾಡಲು ನಗರಸಭೆ ಬದ್ಧವಾಗಿರಬೇಕು. ಪೌರಕಾರ್ಮಿಕರ ಜೀವನ ನಿರ್ವಹಣೆಗೆ ತೊಂದರೆಯಾಗದಂತೆ ಪ್ರತಿತಿಂಗಳು 5ರೊಳಗೆ ವೇತನ ಪಾವತಿಸಬೇಕು. ಸಮವಸ್ತ್ರ, ಕೈಗ್ಲೌಸ್, ಗಮ್‌ಬೂಟ್, ಮಾಸ್ಕ್ ಸೇರಿದಂತೆ ಆರೋಗ್ಯ ಸುರಕ್ಷಾ ಪರಿಕರಗಳನ್ನು ಸಮರ್ಪಕವಾಗಿ ಒದಗಿಸಬೇಕು. ಹೊರಗುತ್ತಿಗೆ ನೇಮಕದಲ್ಲಿನ ಮಾನದಂಡಗಳನ್ನು ಏಜೆನ್ಸಿದಾರರು ಕಡ್ಡಾಯವಾಗಿ ಪಾಲಿಸಬೇಕು. ತಪ್ಪಿದಲ್ಲಿ ಏಜೆನ್ಸಿದಾರರಿಗೆ ನೋಟಿಸ್ ಜಾರಿಗೊಳಿಸಿ ಕಪ್ಪುಪಟ್ಟಿಗೆ ಸೇರಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪೌರಕಾರ್ಮಿಕರ ವಿಶ್ರಾಂತಿಗೃಹ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಳ್ಳಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಮಾಡಬೇಕು. ನಗರಸಭಾ ವ್ಯಾಪ್ತಿಯ ಪೌರಕಾರ್ಮಿಕರ ಕುಂದುಕೊರತೆ ಪರಿಹಾರ ಸಂಬಂಧ 15 ದಿನದೊಳಗೆ ಆಯೋಗಕ್ಕೆ ಅಧಿಕಾರಿಗಳು ವರದಿ ಸಲ್ಲಿಸಬೇಕು. ಪೌರಕಾರ್ಮಿಕರು ಯಾವುದೇ ದೂರು, ಸಮಸ್ಯೆಗಳಿದ್ದರೂ ಆಯೋಗಕ್ಕೆ ನೇರವಾಗಿ ಅಥವಾ ಲಿಖಿತವಾಗಿ ದೂರು ನೀಡಬಹುದು. ಆಯೋಗ ಇದನ್ನು ಗಂಭೀರವಾಗಿ ಪರಿಗಣಿಸಿ ಪರಿಹರಿಸಲಿದೆ ಎಂದು ಸದಸ್ಯರಾದ ಸಿ. ಶಂಕರ ಅಂಕನಶೆಟ್ಟಿಪುರ ಅವರು ತಿಳಿಸಿದರು. ಇದೇ ವೇಳೆ ನಗರಸಭೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ನಗರಸಭೆ ಪೌರಾಯುಕ್ತರಾದ ಪರಶುರಾಮ ಎಂ ಛಲವಾದಿ, ಪರಿಸರ ವಿಭಾಗದ ಎಂಜಿನಿಯರ್ ರೂಪ, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮೇಘ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಉಪಸ್ಥಿತರಿದ್ದರು.

---

# ಅಭಿವೃದ್ಧಿ ಕಾಮಗಾರಿಗೆ ಚಾಲನೆ

## ಅಮೃತ ನಗರೋತ್ಥಾನ ಯೋಜನೆ: ರೈಲು ನಿಲ್ದಾಣ, ರಸ್ತೆಗಳ ಅಭಿವೃದ್ಧಿ

ರಾಮನಗರ: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಅಡಿ ರಾಮನಗರ ನಗರಸಭೆಗೆ 1231.86 ಲಕ್ಷ ರೂಗಳ ಅನುದಾನ ಮಂಜೂರಾಗಿದ್ದು, ಬುಧವಾರ ಕೆಲವು ವಾರ್ಡುಗಳಲ್ಲಿ ಅಭಿವೃದ್ದಿ ಕಾಮಗಾರಿಗೆ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಲಭ್ಯವಾಗಿರುವ ಅನುದಾನದಲ್ಲಿ ವಿವಿಧ ವಾರ್ಡುಗಳಲ್ಲಿ ಅಭಿವೃದ್ದಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಿದ್ದೇವೆ. ಯಾರಬ್‌ನಗರ ದೊಡ್ಡ ಪ್ರದೇಶ ಅಲ್ಲಿ ಸಾಕಷ್ಟು ಅಭಿವೃದ್ದಿಯಾಗಬೇಕಾಗಿದೆ. ಆದರೂ ತೀರಾ ಅವಶ್ಯಕವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ಇದೇ ರೀತಿ ದೊಡ್ಡ ವಾರ್ಡುಗಳಾದ ಟಿಪ್ಪು ನಗರ, ಮೆಹಬೂಬನಗರ, ವಾರ್ಡ್ ಸಂಖ್ಯೆಗಳಾದ 1, 2, 27 ಮತ್ತು 31ನೇ ವಾರ್ಡುಗಳಲ್ಲೂ ಮೂಲ ಸೌಕರ್ಯಗಳ ಕೊರತೆ ಇದೆ. ಮೂಲ ಸೌಕರ್ಯಗಳನ್ನು ಕಲ್ಪಿಸಲು ನಗರಸಭೆ ಬದ್ದವಾಗಿದೆ. ಹಂತ, ಹಂತವಾಗಿ ಎಲ್ಲಾ ಅನುಕೂಲಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಪಡುತ್ತಿದ್ದೇವೆ ಎಂದರು.

### ಪ್ರಮುಖ ರಸ್ತೆಗಳಿಗೆ ಕಾಯಕಲ್ಪ

ಅಮೃತ ನಿಧಿ ಯೋಜನೆಯಡಿ ಮಂಜೂರಾಗಿರುವ ಅನುದಾನದಲ್ಲಿ ಸಾಮಾನ್ಯ (ಇತರೆ) ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ 892.11 ಲಕ್ಷ ರೂಗಳು ವೆಚ್ಚವಾಗುತ್ತಿದೆ. ಪ್ರಮುಖ ರಸ್ತೆಗಳಾದ ವಾಟರ್ ಟ್ಯಾಂಕ್ ವೃತ್ತದಿಂದ ಕಾಮಣ್ಣನಗುಡಿ ವೃತ್ತದ ವರೆಗಿನ ಎಂ.ಜಿ.ರಸ್ತೆ, ಬೆಂಗಳೂರು ಮೈಸೂರು ರಸ್ತೆಯ ಶ್ರೀ ಆಂಜನೇಯಸ್ವಾಮಿ ಆರ್ಚ್‌ಬಳಿಯಿಂದ ಶ್ರೀರಾಮ ದೇವರ ಬೆಟ್ಟದ ರಸ್ತೆ, ವಾರ್ಡ್ ಸಂಖ್ಯೆ 30ರಲ್ಲಿರುವ ಪೂರ್ವಿಕ ಮೊಬೈಲ್ ಬಳಿಯಿಂದ ಐಜೂರು ಗುಡ್ಡೆಯವರೆಗಿನ ರಸ್ತೆಗಳನ್ನು ಅಭಿವೃದ್ಧಪಡಿಸಲಾಗುವುದು ಎಂದರು.



ಕಾಮಗಾರಿಗೆ ಚಾಲನೆ ನೀಡಿದ ವೇಳೆ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮೊಹಮ್ಮದ್ ಆರಿಫ್, ಸದಸ್ಯರಾದ ಅಜ್ಮತ್, ಪಾರ್ವತಮ್ಮ, ಮಹಾಲಕ್ಷ್ಮಿ, ಪವಿತ್ರ, ವಿಜಯ ಕುಮಾರಿ, ಮಂಜುನಾಥ್, ಸಮದ್, ಗ್ಯಾಬ್ರಿಯಲ್, ನಿಜಾಂ ಷರೀಫ್, ಪದ್ಮಶ್ರೀ, ನಾಗಮ್ಮ, ಮಂಜುಳಾ, ಆಯಿಷಾ ಖಾನಂ, ಮುತ್ತುರಾಜ್, ಗೋವಿಂದ ರಾಜ್, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್, ಮುಖಂಡರುಗಳಾದ ಷಫಿ, ಆರ್. ದೇವರಾಜ್, ಪೌರಾಯುಕ್ತ ಡಾ.ಜಯಣ್ಣ, ಎಇಇ ವಿಶ್ವನಾಥ್, ಇಂಜಿನಯರ್‌ಗಳಾದ ನಿರ್ಮಲಾ, ಪವಿತ್ರ ಮುಂತಾದವರು ಹಾಜರಿದ್ದರು.

### ರೈಲು ನಿಲ್ದಾಣದ ರಸ್ತೆ ಅಭಿವೃದ್ಧಿ

**ನಗರಸಭೆ ಮುಂಭಾಗದಿಂದ ಹಾದು ಹೋಗಿರುವ ರೈಲು ನಿಲ್ದಾಣದ ರಸ್ತೆ ಅಭಿವೃದ್ದಿಗೆ ಅಮೃತ ನಗರೋತ್ಥಾನ ನಿಧಿಯಿಂದ 220 ಲಕ್ಷ ರೂ ವೆಚ್ಚದಲ್ಲಿ ಅಭಿವೃದ್ದಿ ಮಾಡಲು ನಿರ್ಧರಿಸಲಾಗಿದೆ. ಶೇ 17.15 ಎಸ್.ಸಿ.ಎಸ್.ಪಿ ಯೋಜನೆಯಡಿ 60.76 ಲಕ್ಷ ರೂ ವೆಚ್ಚದಲ್ಲಿ ಅಂಬೇಡ್ಕರ್ ನಗರದ 3ನೇ ಕ್ರಾಸ್‌ನಲ್ಲಿ ಸಮುದಾಯ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ.**

**ಎಸ್.ಸಿ.ಎಸ್.ಪಿ ಸಮುದಾಯ ಸಂಬಂಧಿತ ಕಾರ್ಯಕ್ರಮ ಮೂಲಕ 124.62 ಲಕ್ಷ ರೂವೆಚ್ಚದಲ್ಲಿ ವಾರ್ಡ್ 3, 4, 5, 31, ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಎಸ್.ಸಿ.ಎಸ್.ಪಿ ಯೋಜನೆಯಡಿ ಒಟ್ಟು 185.38 ಲಕ್ಷರೂ ವೆಚ್ಚವಾಗುತ್ತಿದೆ ಎಂದರು.**

**ಟಿ.ಎಸ್.ಪಿ.ಯೋಜನೆಯಡಿ ಪೌರಕಾರ್ಮಿಕರ ಕಲ್ಯಾಣ ಕಾಮಗಾರಿಗಾಗಿ ಕಾಯಿಸೊಪ್ಪಿನ ಬೀದಿಯ ಸ್ಲಂ ಬೋರ್ಡ್‌ನಲ್ಲಿ ರಸ್ತೆ ಅಭಿವೃದ್ದಿ ಕಾಮಗಾರಿಗೆ 30.81 ಲಕ್ಷ ರೂ, ವಾರ್ಡ್ ಸಂಖ್ಯೆ 26ರಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ 33.80 ಲಕ್ಷ ರೂ ಒಟ್ಟು 64.61 ಲಕ್ಷ ರೂ ಬಳಕೆಯಾಗಲಿದೆ ಎಂದರು.**

**ಇತರ ಬಡಜನರ ಕಲ್ಯಾಣಕ್ಕಾಗಿ ಶೇ7.25 ಯೋಜನೆಯಡಿ 19.76 ಲಕ್ಷ, ವಿಕಲಚೇತನರ ಕಲ್ಯಾಣಕ್ಕಾಗಿ ಶೇ 5 ಯೋಜನೆಯಡಿ 70 ಲಕ್ಷ ರೂ ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದರು. ವಿಕಲಚೇತನರಿಗಾಗಿ ಅಂಬೇಡ್ಕರ್ ಭವನದಲ್ಲಿ ಲಿಫ್ಟ್ ಅಳವಡಿಸುವುದು ಮತ್ತು ವಿಕಲಚೇತನ ಸ್ನೇಹಿ ಶೌಚಾಲಯ ನಿರ್ಮಾಣ ಮತ್ತು ಎರಡನೇ ಮಹಡಿಯಲ್ಲಿ ವಿಕಲಚೇತನರೇ ನಡೆಸಲು ಕಫೆಟೇರಿಯಾ ನಿರ್ಮಿಸುವ ಕಾಮಗಾರಿ ಒಳಗೊಂಡಿದೆ ಎಂದು ಅಧ್ಯಕ್ಷ ಕೆ.ಶೇಷಾದ್ರಿ ವಿವರಿಸಿದರು.**

---

# ಜಿಲ್ಲಾ ಆಸ್ಪತ್ರೆ ಅವ್ಯವಸ್ಥೆ ಸರಿಪಡಿಸಿ




ಚಾಮರಾಜನಗರ, ನಗರದ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಮಿತಿಮೀರಿದ ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ತಾಲೂಕು ಘಟಕದ ವತಿಯಿಂದ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಮತ್ತು ನಿರ್ದೇಶಕ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಆಸ್ಪತ್ರೆ ಎಮರ್ಜೆನ್ಸಿ ವಾರ್ಡ್ ನಲ್ಲಿ ವೈದ್ಯರ ಕೊರತೆ ಪೂರೈಸಬೇಕು, ವೈದ್ಯಕೀಯ ಉಪಕರಣಗಳಾದ ಎಂಡೋಸ್ಕೋಪಿ ಮತ್ತು ಇತರೆ ಉಪಕರಣಗಳನ್ನು ಸರಿಯಾಗಿ ಬಳಸದಿರುವುದನ್ನು ಬಳಸಬೇಕು. ಆ?ಯಂಬುಲೆನ್ಸ್ ಸರಿಯಾದ ಸಮಯಕ್ಕೆ ಇರುವುದಿಲ್ಲ ಹೆಚ್ಚಿನ ಆ?ಯಂಬುಲೆನ್ಸ್ ವ್ಯವಸ್ಥೆ ಮಾಡಬೇಕು ಡಿ.ಗ್ರೂಪ್ ನೌಕರರು ರೋಗಿಗಳೊಂದಿಗೆ ದಬ್ಬಾಳಿಕೆ ಮಾಡುತ್ತಿದ್ದು ಇವರ ವಿರುದ್ಧ ಕ್ರಮ ಜರುಗಿಸಬೇಕು ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿದ್ದು ತಕ್ಷಣದಿಂದಲೇ ಹೃದ್ರೋಗ ತಜ್ಞರ ಅವಶ್ಯಕತೆ ಇದೆ ಗರ್ಭಿಣಿಯರನ್ನು ಕೊಠಡಿಯಿಂದ ಸ್ಕ್ಯಾನಿಂಗ್ ಮಾಡಿಸಲು ಹೊರಗಡೆ ಕಳುಹಿಸುತ್ತಿರುವುದು ಖಂಡನೀಯ ನಮಗೆ ಹೊರಗಿನವರೊಂದಿಗೆ ಶಾಮೀಲಾಗಿರುವ ಅನುಮಾನ ಹೆಚ್ಚಿನ ಸ್ಕ್ಯಾನಿಂಗ್ ಕಮಿಷನ್ ಗಾಗಿ ಒತ್ತಾಯ ರೋಗಿಗಳಿಗೆ ಸುಮಾರು 80%ರಷ್ಟು ಔಷಧಿಯನ್ನು ಹೊರಕ್ಕೆ ಬರೆಯುತ್ತಿರುವುದು ಕೆಟ್ಟ ಬೆಳವಣಿಗೆ ಎಲ್ಲಾ ಔಷಧಿಯನ್ನು ಆಸ್ಪತ್ರೆಯಲ್ಲಿ ಕೊಡಬೇಕು ಔಷಧಿ ಸರಿಯಾಗಿ ಪೂರೈಕೆ ಆಗದಿರುವುದು ವೈದ್ಯರು ಸರಿಯಾಗಿ ಇರದೇ ವೈದ್ಯಕೀಯ ವಿದ್ಯಾರ್ಥಿಗಳಿಂದ ಚಿಕಿತ್ಸೆ ನೀಡುತ್ತಿದ್ದು ರೋಗಿಗಳಲ್ಲಿ ಆತಂಕ ಹೆಚ್ಚಾಗಿದೆ. ಆಸ್ಪತ್ರೆಯಲ್ಲಿ ಹೆಚ್ಚಿನ ಶುಚಿತ್ವ ಕಾಪಾಡುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಇದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ಡೀನ್ ಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲ ತಾಲೂಕು ಅಧ್ಯಕ್ಷ ನವೀನ್, ಪ್ರಧಾನ ಕಾರ್ಯದರ್ಶಿ ಅರ್ಜುನ್ ಟೌನ್ ಅಧ್ಯಕ್ಷ ಮಹೇಂದ್ರ,ಕಾರ್ಮಿಕ ಘಟಕದ ಹರೀಶ್, ಹೋಬಳಿ ಘಟಕ ಮಂಜು ಹರದನಹಳ್ಳಿ, ನಟರಾಜು, ನಲ್ಲೂರು, ಕಾಡಳ್ಳಿ ಕುಮಾರ್, ಮಾದೇವಸ್ವಾಮಿ , ಸಹಕಾರ್ಯದರ್ಶಿ ವೀರಣ್ಣ ,ರಾಜೇಂದ್ರ, ರಿಜ್ವಾನ್ ,ಆಟೋ ಘಟಕದ ಮನೋಜ್ ,ಮನು ಇತರರು ಹಾಜರಿದ್ದರು.

---

## ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿದ ಮಠಾಧೀಶರು

ಗುಂಡ್ಲುಪೇಟೆ: ತಾಲ್ಲೂಕಿನ ವೀರಶೈವ ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ಯಲ್ಲಿ ಹೆಚ್ಚಿನ ಅಂಕ ಪಡೆದ 20 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ತಾಲ್ಲೂಕಿನ ವಿವಿಧ ಮಠಾಧೀಶರು, ಹಾಲಿ ಮತ್ತು ಮಾಜಿ ಶಾಸಕರು ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಪ್ರೋತ್ಸಾಹ ಧನ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸೋಮಹಳ್ಳಿ ಮಠದ ಸಿದ್ದಮಲ್ಲಸ್ವಾಮಿಗಳು, ಪಡಗೂರು ಮಠದ ಶಿವಲಿಂಗೇಂದ್ರ ಸ್ವಾಮಿಗಳು, ಮೂಡಗೂರು ಮಠದ ಇಮ್ಮಡಿ ಉದ್ದಾನ ಸ್ವಾಮಿಗಳು, ಮಾದಾಪಟ್ಟಣ ಮಠದ ತೊಂಟದಾರ್ಯ ಸ್ವಾಮಿಗಳು, ಕಬ್ಬಹಳ್ಳಿ ಶ್ರೀ ಗಳು, ಹಂಗಳ ಶ್ರೀ ಗಳು, ಗೊಪಾಲಪುರ ಕಬ್ಬಿನ ಕೋಲೇಶ್ವರ ಮಠದ ಶ್ರೀ ಗಳು, ಶಾಸಕ ಎಚ್ ಎಂ ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭೆ ಅಧ್ಯಕ್ಷ ನಂದೀಶ್ ಮೂಡ್ಲುಪುರ, ತಾಲ್ಲೂಕು ಅಧ್ಯಕ್ಷ ಶಿವಪ್ರಸಾದ್, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಅಧ್ಯಕ್ಷ ನಂಜಪ್ಪ ಹಂಗಳ, ಮದುಶಂಕರ್, ಕೆ,ಎಂ ಮಹದೇವಸ್ವಾಮಿ, ಬಸವಣ್ಣ ಕೊಡಸೋಗೆ, ಪ್ರಣಯ್, ಗುರುಪ್ರಸಾದ್,ರವಿ ಕಮರಹಳ್ಳಿ ಮತ್ತಿತರರಿದ್ದರು.




---



# ಪಿಒಪಿ ಗಣೇಶ ವಿಗ್ರಹ ಮಾರಾಟಗಾರರ ವಿರುದ್ಧ ಕ್ರಮಕ್ಕೆ ಒತ್ತಾಯ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಪಿಒಪಿ ಗಣೇಶ ವಿಗ್ರಹಗಳ ಅಕ್ರಮ ತಯಾರಿಕೆ ಮತ್ತು ಸಾಗಾಟ, ಮಾರಾಟವನ್ನು ಸಂಪೂರ್ಣ ತಡೆಗಟ್ಟಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಮಣ್ಣಿನ ಗೌರಿಗಣೇಶ ವಿಗ್ರಹ ತಯಾರಕರ ಮತ್ತು ಮಾರಾಟಗಾರರ ಸಂಘ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸಂಘದ ಅಧ್ಯಕ್ಷ ಶಿವಕುಮಾರ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಕ ಪ್ರತಿಭಟನೆ ನಡೆಸಿ, ಉಪ ತಹಸೀಲ್ದಾರ್ ರಂಗರಾಜ್ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಪಿಒಪಿ ಗಣೇಶ ವಿಗ್ರಹ ತಯಾರಿಸುವವರು, ಹೊರಜಿಲ್ಲೆಗಳಿಂದ ತಂದು ಮಾರಾಟ ಮಾಡುವವರು ಹಾಗೂ ಮಾರಾಟಕ್ಕೆ ಸಹಕರಿಸುವವರ ವಿರುದ್ಧ ಕಾನೂನುಬದ್ದವಾಗಿ ಅತ್ಯಂತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಪೊಲೀಸ್ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತುರ್ತು ನಿರ್ದೇಶನ ನೀಡಬೇಕು. ಜಿಲ್ಲಾ ಮಟ್ಟದಲ್ಲಿ 247 ಏಕೀಕೃತ ಸಹಾಯವಾಣಿ ಆರಂಭಿಸಿ, ಸಾರ್ವಜನಿಕರು ಎಲ್ಲಿಂದಲಾದರೂ ಪಿಒಪಿ ವಿಗ್ರಹಗಳ ತಯಾರಿಕೆ, ಸಾಗಾಟ ಹಾಗೂ ಮಾರಾಟದ ಬಗ್ಗೆ ಮಾಹಿತಿ ನೀಡಲು ಅವಕಾಶ ಕಲ್ಪಿಸಬೇಕು ಎಂದರು




ದೂರು ಬಂದ ತಕ್ಷಣ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ತಕ್ಷಣ ಕ್ರಮ ಕೈಗೊಳ್ಳುವ ವ್ಯವಸ್ಥೆ ರೂಪಿಸಬೇಕು,. ಪಿಒಪಿ ಹಾಗೂ ಮಣ್ಣಿನ ವಿಗ್ರಹಗಳ ವ್ಯತ್ಯಾಸವನ್ನು ಗುರುತಿಸಲು ಅನುಭವ ಹೊಂದಿರುವ ಮಣ್ಣಿನ

ಗಣೇಶ ಕಲಾವಿದರು, ತಾಂತ್ರಿಕ ತಜ್ಞರು ಹಾಗೂ ಪರಿಸರ ತಜ್ಞರನ್ನು ಒಳಗೊಂಡ ವಿಶೇಷ ಪರಿಶೀಲನಾ ತಂಡಗಳನ್ನು ರಚಿಸಬೇಕು, ಜಿಲೆಯಲ್ಲಿ ಶೀಘ್ರವಾಗಿ ಮಣ್ಣಿನ ಗಣೇಶ ವಿಗ್ರಹ ತಯಾರಕರ ಸಭೆ ನಡೆಸಿ, ನಿಯಮಗಳು, ಕಾನೂನು ಕ್ರಮಗಳು ಹಾಗೂ ಪರಿಸರ ಸಂರಕ್ಷಣೆಯ ಕುರಿತು ಸಮಗ್ರ ಚರ್ಚೆ ನಡೆಸಿ ಎಲ್ಲರಿಗೂ ಅಗತ್ಯ ಮಾರ್ಗದರ್ಶನ ಹಾಗೂ ಎಚ್ಚರಿಕೆ ನೀಡಬೇಕು,

ಪಿಒಪಿ ವಿಗ್ರಹಗಳ ಆನ್‌ಲೈನ್ ಜಾಹೀರಾತು, ಸಾಮಾಜಿಕ ಜಾಲತಾಣಗಳ ಪ್ರಚಾರ ಹಾಗೂ ಮಾರಾಟದ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳಿಗೆ ಅನುಮತಿ ನೀಡುವಾಗ "ಮಣ್ಣಿನ ಗಣೇಶ ವಿಗ್ರಹ ಮಾತ್ರ ಪ್ರತಿಷ್ಠಾಪಿಸಬೇಕು" ಎಂಬ ಷರತ್ತನ್ನು ಕಡ್ಡಾಯಗೊಳಿಸಬೇಕು.

ಮಣ್ಣಿನ ಗಣಪತಿ ಮತ್ತು ಪೇಪರ್ ಗಣಪತಿಯನ್ನು ಮಾರಾಟ ಮಾಡಲು ಹಾಗೂ ಕೂರಿಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು ಪ್ರತಿಭಟನೆಯಲ್ಲಿ ಮಣ್ಣಿನ ಗೌರಿಗಣೇಶ ವಿಗ್ರಹ ತಯಾರಕರ ಮತ್ತು ಮಾರಾಟಗಾರರ ಸಂಘದಉಪಾಧ್ಯಕ್ಷ ವಿ.ನಿತ್ಯ, ಪ್ರಧಾನ ಕಾರ್ಯದರ್ಶಿ ಡಿ.ವಿನಯ್ ಕುಮಾರ್, ಸದಸ್ಯರಾದ ಸಿದ್ದಪ್ಪಾಜಿ, ನಟರಾಜು, ಮಂಜುನಾಥ್, ಪುಟ್ಟಸ್ವಾಮಿಶೆಟ್ಟಿ, ಬಸವಣ್ಣ, ಸೋಮಣ್ಣ, ಮಹೇಶ್, ಅವಿನಾಶ್, ರಂಗಸ್ವಾಮಿ, ನಾಗರಾಜು, ವಿ.ಎಂ. ರವಿಕುಮಾರ್, ಮಮತ, ಗೌರಮ್ಮ, ಆಶಾ, ಬೇಬಿ, ಭಾಗ್ಯ ಇತರರು ಭಾಗವಹಿಸಿದ್ದರು.

---

## ವಿದ್ಯುತ್ ಶಾಕ್ ಹೊಡೆದು ಬಾಲಕಿ ಸಾವು

ಗುಂಡ್ಲುಪೇಟೆ: ಗ್ರೈಂಡರ್‌ನಿಂದ ವಿದ್ಯುತ್ ಶಾಕ್ ಹೊಡೆದು ನಾಲ್ಕು ವರ್ಷದ ಬಾಲಕಿಯೊಬ್ಬಳು ಮೃತಪಟ್ಟಿರುವ ದುರ್ಘಟನೆ ತಾಲೂಕಿನ ಕಲ್ಲಿಗೌಡನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಕಲ್ಲಿಗೌಡನಹಳ್ಳಿ ಗ್ರಾಮದ ಸುಶ್ಮಿತಾ ಮತ್ತು ಆನಂದ ದಂಪತಿಯ ನಾಲ್ಕು ವರ್ಷದ ಪುತ್ರಿ ಅದ್ವಿತ ಮೃತಪಟ್ಟ ಬಾಲಕಿ. ಮನೆಯಲ್ಲಿ ತಾಯಿ ಗ್ರೈಂಡರ್ ಬಳಸುತ್ತಿದ್ದ ವೇಳೆ ಬಾಲಕಿ ಅದನ್ನು ಮುಟ್ಟಿದ್ದಾಳೆ. ಈ ವೇಳೆ ಗ್ರೈಂಡರ್‌ಗೆ ವಿದ್ಯುತ್ ಪ್ರವಹಿಸಿದ್ದು, ಬಾಲಕಿಗೆ ತೀವ್ರ ಶಾಕ್ ಹೊಡೆದಿದೆ. ತಕ್ಷಣ ಅಸ್ವಸ್ಥಗೊಂಡ ಬಾಲಕಿಯನ್ನು ಪೋಷಕರು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರಾದರೂ, ಚಿಕಿತ್ಸೆ ಫಲಕಾರಿ ಯಾಗದೆ ಬಾಲಕಿ ಮೃತಪಟ್ಟಿದ್ದಾಳೆ ಎಂದು ತಿಳಿದುಬಂದಿದೆ.

ತಂದೆ-ತಾಯಿಯ ಕಣ್ಮುಂದೆಯೇ ಮಗಳು ವಿದ್ಯುತ್ ಶಾಕ್‌ಗೆ ಬಲಿಯಾಗಿರುವುದರಿಂದ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ. ಈ ಘಟನೆ ಗುಂಡ್ಲುಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಸಾವಯವ, ನೈಸರ್ಗಿಕ ಕೃಷಿಯಿಂದ ಆರೋಗ್ಯವಂತ ಜೀವನ

**ಸಿ.ಎಸ್. ನಿರಂಜನ್‌ಕುಮಾರ್ ಹೇಳಿಕೆ । ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗಾಗಿ ಕಾರ್ಯಗಾರ ಉದ್ಘಾಟನೆ**




ಚಾಮರಾಜನಗರ, ರೈತರು ಹಾಗೂ ಯುವಕರು ಶೂನ್ಯ ಬಂಡಾವಳವುಳ್ಳ ಸಾವಯವ ಮತ್ತು ನೈಸಗಿಕ ಕೃಷಿಯಿಂದ ವಿಷದಿಂದ ಮುಕ್ತ ಆಹಾರವನ್ನು ದೇಶಕ್ಕೆ ನೀಡುವ ಜೊತೆಗೆ ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡಿದಂತಾಗುತ್ತದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ತಿಳಿಸಿದರು.

ತಾಲೂಕಿನ ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರಿಗಾಗಿ ಬಿಜೆಪಿ ರೈತ ಮೋರ್ಚಾದಿಂದ ನಡೆದ ನೈಸರ್ಗಿಕ ಮತ್ತು ಸಾವಯವ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸ್ವಾತಂತ್ಯದ ಬಳಿಕ ದೇಶದಲ್ಲಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ವೈಜ್ಞಾನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡ ಪರಿಣಾಮ ದೇಶವು ಬಹಳಷ್ಟು ಸಂಕಷ್ಟವನ್ನು ಅನುಭವಿಸುವಂತಾಗಿದೆ. ದೇಶದ 140 ಕೋಟಿ ಜನರಿಗೆ ನಾವೇ ವಿಷ ಆಹಾರವನ್ನು ನೀಡುವಂತಹ ಪರಿಸ್ಥಿತಿ ಉದ್ಭವಾಗಿದೆ ಎಂದರು.

ಇದನ್ನು ತಪ್ಪಿಸಲು ಹಾಗು ಆರೋಗ್ಯವಂತ ಜೀವನ ನಡೆಸಲು ನಮ್ಮ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೇ ಸಾವಯವ ಹಾಗೂ ನೈಸರ್ಗಿಕ ಕೃಷಿಯತ್ತ ರೈತರಿಗೆ ಉತ್ತೇಜನ ನೀಡಲು ಮುಂದಾಗಿದ್ದಾರೆ. ಸಾವಯವ ಕೃಷಿಯನ್ನು ಅವಲಂಬಿಸಿಕೊಳ್ಳುವ ರೈತರಿಗೆ ಕೇಂದ್ರದಿಂದ ಯೋಜನೆಗಳನ್ನು ರೂಪಿಸಿದ್ದಾರೆ. ಸಾವಯವ ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆ ವ್ಯವಸ್ಥೆ, ಇಂಥ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆಯನ್ನು ಕೊಡಿಸಲು ಇ. ಮಾರುಕಟ್ಟೆ ವ್ಯವಸ್ಥೆ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನೈಸರ್ಗಿಕ ಕೃಷಿಗೆ ಉತ್ತೇಜನ, ಕೃಷಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಈ ಬಗ್ಗೆ ಹೆಚ್ಚು ಭೋಧನೆ ಮಾಡುವ ಜೊತೆಗೆ ರೈತರ ತಾಕುಗಳನ್ನು ಶೂನ್ಯ ಕೃಷಿ ಅಳವಡಿಸಿಕೊಳ್ಳುವ ಬಗ್ಗೆ ಪಾತ್ಯಾಕ್ಷತೆ ಹಾಗು ಪರಿಚಯ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದೆ. ಇದರ ಭಾಗವಾಗಿ ಬಿಜೆಪಿ ರೈತ ಮೋರ್ಚಾದಿಂದ ಒಂದು ತಿಂಗಳು ಸಾವಯವ ಕೃಷಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಮಾತನಾಡಿ, ರಾಸಾಯನಿಕ ಯುಕ್ತ ಆಹಾರವನ್ನು ಸೇವಿಸುತ್ತಿರುವ ಪರಿಣಾಮ ಮನುಷ್ಯಯ ಆಯುಷ್ಯ ಆರೋಗ್ಯವು ಕಡಿಮೆಯಾಗುತ್ತದೆ. ಕ್ಯಾನ್ಸರ್‌ತಹ ಮಾರಕ ಕಾಯಿಲೆಗಳು ಹೆಚ್ಚಾಗಿವೆ. ಇದನ್ನು ತಡೆಯಲು ಹಿಂದಿನ ವ್ಯವಸಾಯ ಪದ್ದತಿಯನ್ನು ಆಳವಡಿಸಿಕೊಳ್ಳಲು ರೈತರು ಮುಂದಾಗಿದ್ದಾರೆ. ನಮ್ಮ ಹೆಮ್ಮೆ ಪ್ರಧಾನಿ ನರೇಂದ್ರ ಮೋದಿ ಅವರು ಸಾವಯವ ಹಾಗೂ ನೈಸರ್ಗಿಕ ಕೃಷಿಯತ್ತ ರೈತರನ್ನು ಮರಳುವಂತೆ ಮಾಡಲು ಮುಂದಾಗಿದ್ದಾರೆ. ರೈತರು ಸಹ ಇದರ ಪ್ರಯೋಜವನ್ನು ಪಡೆದುಕೊಳ್ಳಬೇಕು ಎಂದರು.

ಹಿರಿಯ ಕೃಷಿ ವಿಜ್ಞಾನಿ ಡಾ. ನರೇಂದ್ರ ಮಾತನಾಡಿ, ರೈತರು ಶೂನ್ಯ ಹಾಗು ಸಾವಯವ ಕೃಷಿಯನ್ನು ಅವಲಂಬಿಸಿಕೊಂಡು ಕೃಷಿ ವಿಜ್ಞಾನಿಗಳ ಸಲಹೆ ಮಾರ್ಗದರ್ಶನದೊಂದಿಗೆ ಬೇಸಾಯ ಮಾಡಿದರೆ, ಹೆಚ್ಚಿನ ಲಾಭವನ್ನು ಗಳಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ರೈತರು ಈ ಬಗ್ಗೆ ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕ ಮಾಡಿದರೆ, ಎಲ್ಲಾ ರೀತಿಯ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು.

ಕಾರ್ಯಗಾರದಲ್ಲಿ ಕೃಷಿ ವಿಜ್ಞಾನಿಗಳಾದ ಡಾ. ಪಂಪನಗೌಡ, ಡಾ. ಶೃತಿ ಹಾಗೂ ಯುವ ರೈತ ಪೃಥ್ವಿಕುಮಾರ್ ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡಿದರು. ಕಾರ್ಯಗಾರದಲ್ಲಿ ಬಿಜೆಪಿ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಬೇಡರಪುರ ಬಸವಣ್ಣ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಹೊನ್ನಹಳ್ಳಿ ಪುರುಷೋತ್ತಮ್, ಚಂದ್ರಶೇಖರ್, ಕಾರ್ಯದರ್ಶಿ ಮರಿಯಾಲ ಮಹೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ಬಸವಣ್ಣ, ಚುಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮುರ್ತಿ, ಹೊಸೂರು ಮಹೇಶ್, ಕುಮಾರಸ್ವಾಮಿ ಹಾಗೂ ರೈತ ಮುಖಂಡರು ಹಾಜರಿದ್ದರು.

## ಉಚಿತ ಕಣ್ಣಿನ ತಪಾಸಣ ಶಿಬಿರ

ಚಾಮರಾಜನಗರ, ವಲ್ಲಭಭಾಯಿ ಪಟೇಲ್ ರವರ 150 ನೇ ಜನ್ಮ ದಿನಾಚರಣೆಯ ಸ್ಮರಣಾರ್ಥ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಕುಟುಂಬ ವರ್ಗದವರಿಗೆಕಣ್ಣಿನ ತಪಾಸಣೆ ಶಿಬಿರವನ್ನು ಇಂದು ನಗರದ ಪೊಲೀಸ್ ಭವನದಲ್ಲಿ ಆಯೋಜಿಸಲಾಗಿತ್ತು.

ಮೈಸೂರಿನ ಪ್ರಸಿದ್ದ ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್ ಸಹಯೋಗದಲ್ಲಿ ನಡೆದ. ಕಣ್ಣಿನ ತಪಾ ಸಣಾ ಶಿಬಿರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ ಅವರು ಸ್ವತಹ ಕಣ್ಣಿನ ತಪಾಸಣೆಗೆ ಒಳಗಾಗುವ ಮೂಲಕ ಚಾಲನೆ ದೊರೆಯಿತು.

ಶಿಬಿರದಲ್ಲಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಯ ಅಧಿಕಾರಿ, ಸಿಬ್ಬಂದಿ ಹಾಗೂ ಕುಟುಂಬದ 300ಕ್ಕೂ ಹೆಚ್ಚು ಮಂದಿ ಕಣ್ಣಿನ ತಪಾಸಣೆಗೊಳಪಟ್ಟು ಶಿಬಿರವನ್ನು ಯಶಸ್ವಿಗೊಳಿಸಿದರು. ಚಾಮರಾಜನಗರ ಪೊಲೀಸ್ ಉಪಾಧೀಕ್ಷಕರಾದ ಎನ್. ಸ್ನೇಹರಾಜ್, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಆರಕ್ಷಕ ಉಪಾಧೀಕ್ಷಕರಾದ ಜಿ. ಸೋಮಣ್ಣ ಹಾಗೂ ಇನ್ನಿತರ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.



# ಅರಿವುಯಿಂದ ಪರಿಸರ ಪ್ರೇಮಿ ಪ್ರಶಸ್ತಿ ಪ್ರದಾನ




ಮೈಸೂರು: ಪ್ಲಾಸ್ಟಿಕ್ ಮುಕ್ತ ದೇಶವನ್ನಾಗಿಸಲು ಮನೆಗೊಂದು ಮರ ಬೆಳೆಸುವ ಮೂಲಕ ಪ್ರತಿಯೊಬ್ಬರೂ ಪರಿಸರವನ್ನು ಉಳಿಸಿ ಬಳಸಬೇಕೆಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಹೇಳಿದರು.

ನಗರದ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಅರಿವು ಸಂಸ್ಥೆಯ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಕಡಕೋಳ ಪಟ್ಟಣ ಪಂಚಾಯತ್ ಆರೋಗ್ಯ ನಿರೀಕ್ಷಿಕರಾದ ಮಂಜುನಾಥ್ ,ಪರಿಸರ ಪ್ರೇಮಿ ಕೃಷ್ಣಪ್ಪ (ಘಂಟಯ್ಯ),ಪರಿಸರ ಸ್ನೇಹಿ ತಂಡದ ಅಧ್ಯಕ್ಷ ಲೋಹಿತ್, ಗಗನ್ ಗೌಡ, ರವರಿಗೆ ಸನ್ಮಾನಿಸಿ ಪರಿಸರ ಪ್ರೇಮಿ ಪ್ರಶಸ್ತಿ ನಿಧಿ ಗೌರವಿಸಿ ಮಾತನಾಡಿದ ಅವರು ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಧಕ್ಕೆಯಾಗುತ್ತಿದೆ. ವಿದ್ಯಾವಂತರೇ ಪ್ಲಾಸ್ಟಿಕ್ ಬಳಸುತ್ತಿದ್ದಾರೆ. ಪರಿಸರದ ಮಹತ್ವ ತಿಳಿದಿದ್ದರೂ ಅನಕ್ಷರಸ್ಥರ ರೀತಿಯಲ್ಲಿ ಪರಿಸರವನ್ನು ನಾಶ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪರಿಸರವನ್ನು ಕಾಪಾಡಿ, ಅದನ್ನು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು ಎಂದರು.

ಹಿರಿಯ ಸಮಾಜ ಸೇವಕ ಕೆ ರಘುರಾಮ ವಾಜಪೇಯಿ ಮಾತನಾಡಿ, ಗಿಡ ಬೆಳೆಸಿ ನಾಡು ಬೆಳೆಸಿ ಎಂಬ ಘೋಷಣೆ ವಾಸ್ತವದಲ್ಲಿ ಜಾರಿಯಾಗಬೇಕು. ನಾವು ಇರುವ ಜಾಗದ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಸುತ್ತಮುತ್ತ ಇರುವ ಜಾಗದಲ್ಲಿ ಹಸಿರು ಇರುವ ರೀತಿಯಲ್ಲಿ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಬೇಕು ಎಂದು ಹೇಳಿದರು.

ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷರಾದ ಕೆ.ಬಿ.ಲಿಂಗರಾಜ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮುಖಂಡರಾದ ನಜರ್ಬಾದ್ ನಟರಾಜ್, ಕೆಆರ್ ಬ್ಯಾಂಕ್ ಅಧ್ಯಕ್ಷರಾದ ಬಸವರಾಜ್ ಬಸಪ್ಪ, ಕೇಬಲ್ ಮಹೇಶ್, ಜಿ ರಾಘವೇಂದ್ರ, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಕಶ್ಯಪ್, ಎಸ್.ಎನ್.ರಾಜೇಶ್, ರಾಕೇಶ್, ಸುರೇಂದ್ರ, ಪುರುಷೋತ್ತಮ್, ನವೀನ್ ಕೆಂಪಿ ಇನ್ನಿತರರು ಹಾಜರಿದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ !

ಕೃಷ್ಣ ಬಂದ ನಮ್ಮ ಮನೆಗೆ ನೋಡಿ ಸಖಿಯರೆ,
ಭಕುತಿಯಿಂದ ಸೌಭಾಗ್ಯವ ನೀವು ಬೇಡಿರೆ,
ಅರಿಶಿಣ, ಕುಂಕುಮ ಹಚ್ಚಿ ಹೂವ ಮುಡಿಯಿರೆ
ಜರದ ಪೀತಾಂಬರುಟ್ಟು ಸಡಗರದಿ ಬನ್ನಿರೆ !

ಕರಗಳಿಗೆ ಹಸಿರು ಬಳೆಯ ತೊಟ್ಟು ಕೊಳ್ಳಿರೆ,
ಮಧ್ಯದಲಿ ಕೆಂಪು ಬಳೆಯ ಚೆಂದದಿ ಹಾಕಿರೆ ,
ಪದಕವಿರುವ ಸರವ ನೀವು ಕೊರಳಿಗ್ಹಾಕಿರೆ,
ಕರಿಮಣಿಯ ಮಾಂಗಲ್ಯಕೆ ಮೆರಗು ನೀಡಿರೆ !

ಅಂಗಳವ ಸಾರಿಸಿ ರಂಗವಲ್ಲಿ ಬರೆಯಿರೆ,
ಚಪ್ಪರ ಹಾಕಿಸಿ ಪದುಮವ ಜೋಡಿಸಿರೆ,
ದೀಪಗಳನು ಸಾಲಾಗಿ ಇಡಲು ತನ್ನಿರೆ
ಅರಿಶಿಣ ಕುಂಕುವಿಟ್ಟು ಪೂಜೆಗೆ ಬನ್ನಿರೆ!

ಚಿನ್ನದ ಮಣೆಯನಿಟ್ಟು ರಂಗನ ಕುಳ್ಳಿರಿಸಿರೆ,
ಭಕ್ತಿಯಲಿ ಕರವ ಮುಗಿದು ಊಟಕೆ ಕರೆಯಿರೆ,
ಪರಿಪರಿಯ ಪರಮಾನ್ನ ಎಲೆಗೆ ಬಡಿಸಿರೆ ,
ಹೇಮ ಗಿರೀಶನ ಮುದದಿಂದ ಪಾಡಿರೆ!

# ಕೈ ಮತ ಕಡಿತಕ್ಕೆ ಬಿಜೆಪಿ ಸಂಚು

## ಶಾಸಕ ಪುಟ್ಟರಂಗಶೆಟ್ಟಿ ಆರೋಪ । ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ತರಬೇತಿ



ಚಾಮರಾಜನಗರ: ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯ ನೆಪದಲ್ಲಿ ಕಾಂಗ್ರೆಸ್ ಪಕ್ಷದ ಸಾಂಪ್ರದಾಯಿಕ ಮತದಾರರನ್ನು ಪಟ್ಟಿಯಿಂದ ಕೈಬಿಡುವ ಹುನ್ನಾರ ನಡೆಸುತ್ತಿದೆ. ಇದಕ್ಕೆ ನಮ್ಮ ಬೂತ್ ಮಟ್ಟದ ಕಾರ್ಯಕರ್ತರು ಅತ್ಯಂತ ಜಾಗರೂಕರಾಗಿ ತಕ್ಕ ಪಾಠ ಕಲಿಸಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಕರೆ ನೀಡಿದರು. ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ, ಚಾಮರಾಜನಗರ ಗ್ರಾಮಾಂತರ ಹಾಗೂ ನಗರ ಬ್ಲಾಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಧಾನಸಭಾ ಕ್ಷೇತ್ರದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

### ಕಾರ್ಯಾಗಾರದಲ್ಲಿ ತಾಂತ್ರಿಕ ಮಾಹಿತಿ ಮತ್ತು ಗಣ್ಯರ ಭಾಗಿತ್ವ

ಸಭೆಯ ನಂತರ ಮತದಾರರ ಜಾಗೃತಿ ಸಮಿತಿಯ ಪೃಥ್ವಿಕುಮಾರ್ ಅವರು ಮತದಾರರ ಪಟ್ಟಿ ಪರಿಷ್ಕರಣೆಯ ತಾಂತ್ರಿಕ ಪ್ರಕ್ರಿಯೆ ಹಾಗೂ ಕಾನೂನಾತ್ಮಕ ಅಂಶಗಳ ಕುರಿತು ಬೂತ್ ಮಟ್ಟದ ಕಾರ್ಯಕರ್ತರಿಗೆ ಸವಿಸ್ತಾರವಾದ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಚುಡಾ (ಅಊಗಆಂ) ಅಧ್ಯಕ್ಷ ಮೊಹಮ್ಮದ್ ಅಸ್ಗರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್. ಮಹದೇವ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಸೋಮೇಶ್ವರ್ ಹಾಗೂ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಶೆಟ್ಟಿ ಉಪಸ್ಥಿತರಿದ್ದರು.

### ರಾಜ್ಯದ 90 ಕ್ಷೇತ್ರಗಳ ಮೇಲೆ ಬಿಜೆಪಿಯ ಕಣ್ಣು

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟನಾತ್ಮಕವಾಗಿ ಸೋಲಿಸಲು ಸಾಧ್ಯವಾಗದೆ ಬಿಜೆಪಿ ಈಗ ಮತದಾರರ ಸಂಖ್ಯೆಯನ್ನು ಕಡಿತಗೊಳಿಸುವ ಕುತಂತ್ರಕ್ಕೆ ಕೈಹಾಕಿದೆ ಎಂದರು. ಈಗಾಗಲೇ ಕರ್ನಾಟಕದ ಸುಮಾರು 90 ಕಾಂಗ್ರೆಸ್ ಶಾಸಕರ ಕ್ಷೇತ್ರಗಳನ್ನು ಟಾರ್ಗೆಟ್ ಮಾಡಲಾಗುತ್ತಿದ್ದು, ಅಲ್ಲಿನ ಮತದಾರರ ಪಟ್ಟಿಯಲ್ಲಿ ಹಸ್ತಕ್ಷೇಪ ಮಾಡುವ ಪಿತೂರಿ ನಡೆಯುತ್ತಿದೆ ಎಂಬ ಮಾಹಿತಿ ಇದೆ. ಇದನ್ನು ಸಮರ್ಥವಾಗಿ ಎದುರಿಸಲು ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಶ್ರಮಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ ಹೊಸ ಮತದಾರರ ಸೇರ್ಪಡೆ ಹಾಗೂ ಮೃತರ ಹೆಸರು ತೆಗೆಯುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತದೆ. ಆದರೆ ಬಿಜೆಪಿ ಈ ವಿಶೇಷ ಪರಿಷ್ಕರಣೆಯ ಹೆಸರಿನಲ್ಲಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದು, ಇದರ ವಿರುದ್ಧ ಜಾಗೃತಿ ಮೂಡಿಸಲು ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

### ವಾಮಮಾರ್ಗದ ರಾಜಕಾರಣ, ಬಿಎಲ್‌ಒಗಳ ಜವಾಬ್ದಾರಿ

ಕೇಂದ್ರದ ಬಿಜೆಪಿ ಸರ್ಕಾರವು ಇಂತಹದ್ದೊಂದು ಪ್ರಯೋಗವನ್ನು ಈಗಾಗಲೇ ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಯಶಸ್ವಿಯಾಗಿ ನಡೆಸಿ, ವಾಮ ಮಾರ್ಗದ ಮೂಲಕ ಅಧಿಕಾರ ಹಿಡಿದಿದೆ ಎಂದು ಶಾಸಕರು ಆರೋಪಿಸಿದರು. ಕರ್ನಾಟಕದಲ್ಲೂ ಇದೇ ಮಾದರಿಯನ್ನು ಜಾರಿಗೆ ತರಲು ಮುಂದಾಗಿದ್ದು, ಇದನ್ನು ತಡೆಯಲು ನಮ್ಮ ಮತದಾರರ ಹಕ್ಕನ್ನು ಗಟ್ಟಿಗೊಳಿಸುವ ಕೆಲಸವಾಗಬೇಕಿದೆ. ಆಯಾ ಬೂತ್ ಮಟ್ಟದಲ್ಲಿರುವ ಬೂತ್ ಮಟ್ಟದ ಏಜೆಂಟರು (ಬಿಎಲ್‌ಎ) ಮತ್ತು ಅಧಿಕಾರಿಗಳು (ಬಿಎಲ್‌ಒ) ಪರಿಷ್ಕರಣೆಯ ಸಂದರ್ಭದಲ್ಲಿ ಯಾವುದೇ ಒಬ್ಬ ನೈಜ ಮತದಾರನ ಹೆಸರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಜಾಗ್ರತೆ ವಹಿಸಬೇಕು. ಮುಂದಿನ ದಿನಗಳಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರಿದ್ದರೆ ಮಾತ್ರ ಸರ್ಕಾರದ ಗ್ಯಾರಂಟಿ ಸೇರಿದಂತೆ ಇನ್ನಿತರ ಸವಲತ್ತುಗಳನ್ನು ಪಡೆಯಲು ಸಾಧ್ಯ ಎಂಬುವುದನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಿಕೊಡಬೇಕು ಎಂದು ಅವರು ಸೂಚಿಸಿದರು.

ಇವರೊಂದಿಗೆ ಪ್ರಮುಖ ಮುಖಂಡರಾದ ರವಿ ಬಿಸಲವಾಡಿ, ಯರಗನಹಳ್ಳಿ ಬಸವಣ್ಣ, ನಯಾಜ್, ಕರಿನಂಜನಪುರಸ್ವಾಮಿ, ಮರಿಯಲಕುಮಾರ್ ಸೇರಿದಂತೆ ನೂರಾರು ಬಿಎಲ್‌ಎಗಳು ಸಕ್ರಿಯವಾಗಿ ಭಾಗವಹಿಸಿದ್ದರು.

# ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ



ರಾಮನಗರ: ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ ಮಾಡುವ ಮೂಲಕ ಕೃತಕ ಅಭಾವ ಸೃಷ್ಟಿಸುವುದು, ತದನಂತರ ಯೂರಿಯಾ ಮತ್ತು ಡಿಎಪಿ ರಸಗೊಬ್ಬರವನ್ನು ಅವುಗಳ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿಗೆ ಮಾರಾಟ ಮಾಡುವ ಮೂಲಕ ಪ್ರತಿ ವರ್ಷ ಸಾವಿರಾರು ಕೋಟಿ ಹಣವನ್ನು ಭ್ರಷ್ಟ ಅಧಿಕಾರಿಗಳು, ಮಾರಾಟಗಾರರು ಮತ್ತು ಕೆಲವು ರಾಜಕಾರಣಿಗಳು ದೋಚುತ್ತಿದ್ದಾರೆ ಎಂದು ಕೆ. ಆರ್.ಎಸ್ ಪಕ್ಷ ಆರೋಪಿಸಿದ್ದು, ಇದಕ್ಕೆ ಕಡಿವಾಣ ಹಾಕುವಂತೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಆಗ್ರಹ ಪತ್ರವನ್ನು ಸಲ್ಲಿಸಲಾಗಿದೆ.


ಈ ವಿಚಾರದಲ್ಲಿ ಹಲವಾರು ಬಾರಿ ಮನವಿ ಮಾಡಿದ್ದರೂ ಉಪಯೋಗವಾಗಿಲ್ಲ. ರೈತರಿಗೆ ಆಗುತ್ತಿರುವ ಮೋಸ, ಅನ್ಯಾಯ ಮುಂದುವರೆದಿದೆ. ಕೃಷಿ ಇಲಾಖೆಯ ಅಧಕ್ಷತೆ ಕಾರಣಕ್ಕೆ ರೈತರಿಗೆ ನಿರಂತರ ಮೋಸವಾಗುತ್ತಿದೆ ಎಂದು ಮನವಿಯಲ್ಲಿ ದೂರಲಾಗಿದೆ. ಜಿಲ್ಲೆಯಲ್ಲಿ ಎಲ್ಲಿಯೂ ರಸಗೊಬ್ಬರವನ್ನು ಗರಿಷ್ಠ ಮಾರಾಟ ಬೆಲೆಗೆ (ಎಂ.ಆರ್.ಪಿ) ಮಾರಾಟವಾಗುತ್ತಿಲ್ಲ. ಎಂ.ಆರ್.ಪಿಗಿಂತ ಶೇ 20 ರಿಂದ 30ರವರೆಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ರೈತರ ಹಿತಾಸಕ್ತಿಯನ್ನು ಕಾಪಾಡಬೇಕಾದ ಕೃಷಿ ಇಲಾಖೆ ನಿರ್ಲಕ್ಷವಹಿಸಿದೆ. ವ್ಯಾಪಾರಿಗಳು ಮತ್ತು ರಸಗೊಬ್ಬರ ಕಂಪನಿಗಳಿಂದಾಗಿ ರೈತರು ಮೋಸ ಹೋಗಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇನ್ನೊಂದೆಡೆ ಸರ್ಕಾರದ ಸಬ್ಸಿಡಿ ಯೋಜನೆಗಳ ಆಶಯವೂ ಈಡೇರುತ್ತಿಲ್ಲ. ಕೃಷಿ ಇಲಾಖೆಯ ಅಧಿಕಾರಿಗಳ ಕರ್ತವ್ಯ ಲೋಪ, ಭ್ರಷ್ಟಾಚಾರ ಮತ್ತು ನಿರ್ಲಕ್ಷವೇ ಇಷ್ಟಕ್ಕೆಲ್ಲ ಕಾರಣ ಎಂದು ಆಗ್ರಹ ಪತ್ರದಲ್ಲಿ ಆಕ್ರೋಶ ವ್ಯಕ್ತಪಡಿಸಲಾಗಿದೆ.

ಇನ್ನೊಂದು ವಾರದಲ್ಲಿ ರಸಗೊಬ್ಬರದ ವಿಚಾರದಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಗಟ್ಟದೆ ಹೋದಲ್ಲಿ, ಕೆ.ಆರ್.ಎಸ್ ಪಕ್ಷದವತಿಯಿಂದ ಕಾರ್ಯಕರ್ತರು ತಾವೇ ಸ್ವತಃ ರಸಗೊಬ್ಬರ ಡೀಲರ್‌ಗಳ ಬಗೆ ತೆರಳಿ ಅವರು ಮಡುತ್ತಿರುವ ಅಕ್ರಮಗಳನ್ನು ಬಯಲಿಗೆ ಎಳೆಯುವುದಾಗಿ ಎಚ್ಚರಿಸಲಗಿದೆ. ಅಹಿತಕರ ಘಟನೆಗಳಿಗೆ ಕೃಷಿ ಇಲಖೆಯೇ ಜವಾಬ್ದಾರಿಯಾಗಲಿದೆ ಎಂದು ಸಹ ಪತ್ರದಲ್ಲಿ ತಿಳಿಸಲಾಗಿದೆ.

ಮನವಿ ಸಲ್ಲಿಸಿದ ವೇಳೆ ಕೆ.ಆರ್.ಎಸ್ ಪಕ್ಷದ ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಎಲ್.ಜೀವನ್, ಜಿಲ್ಲಾಧ್ಯಕ್ಷ ಗಂಗಾಧರಯ್ಯ ಎಂ.ಎನ್., ಪ್ರಮುಖರಾದ ದೇವರಾಜ್. ಆರ್, ಮುಜಾಹಿದ್ ಪಾಷ, ವೇಣುಗೋಪಾಲ್, ಯಾರಬ್ ಪಾಷ ಮುಂತಾದವರು ಹಾಜರಿದ್ದರು.

# ಶಿರಡಿ ಸಾಯಿಬಾಬಾ ದೇಗುಲದ ದ್ವಿತೀಯ ವಾರ್ಷಿಕೋತ್ಸವ

## ದೇವರ ಮೂರ್ತಿಗೆ ವಿಶೇಷ ಅಲಂಕಾರ, ಅನ್ನಸಂತರ್ಪಣೆ



ಚಾಮರಾಜನಗರ, ನಗರದ ಹೌಸಿಂಗ್ ಬೋರ್ಡ್‌ನ ಫಾರೆಸ್ಟ್ ನರ್ಸರಿ ಪಕ್ಕದಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಹಾಗೂ ಶ್ರೀ ಧ್ಯಾನಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ದ್ವಿತೀಯ ವರ್ಷದ ವಾರ್ಷಿಕೋತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು.

ಸೋಮವಾರ ಸಂಜೆ ದೇವಸ್ಥಾನದಲ್ಲಿ ಶ್ರೀ ಗಣಪತಿ ಪೂಜಾ, ಪುಣ್ಯಾಹ, ಪಂಚಗವ್ಯ, ನಾಂದಿ, ಆದಿತ್ಯಾದಿ ನವಗ್ರಹ ಪುರಸ್ಸರ ಕಳಸಸ್ಥಾಪನೆ. ಪಂಚ ಸೂಕ್ತ ಪಾರಾಯಣ, ಮಹಾ ಮಂಗಳಾರತಿ ನೆರವೇರಿತು. ಇದಕ್ಕೂ ಮೊದಲು ಬೆಳಗ್ಗೆ 6 ಕ್ಕೆ ಶ್ರೀ ಗಣಪತಿ ಪೂಜೆ, ಕಳಸಗಳಿಗೆ ಪುನಃಪೂಜೆ, ಶ್ರೀ ಗಣಪತಿ, ಶ್ರೀ ನವಗ್ರಹ, ಮೃತ್ಯುಂಜಯ, ಶ್ರೀ ಆಂಜನೇಯಸ್ವಾಮಿಗೆ ಪವಮಾನ, ಶ್ರೀ ಸುಬ್ರಮಣ್ಯ, ಶ್ರೀ ಸಾಯಿಬಾಬಾ ರವರಿಗೆ, ಶ್ರೀ ಚಾಮರಾಜೇಶ್ವರ ಹಾಗೂ ಅಮ್ಮನವರಿಗೆ, ಶ್ರೀ ಲಕ್ಷ್ಮಿ ವೆಂಕಟೇಶ್ವರಸ್ವಾಮಿ ರವರ ಹೋಮಗಳು ನೆರವೇರಿತು. ಮಧ್ಯಾಹ್ನ 12.30ಕ್ಕೆ ಪೂಜಾ ಮತ್ತು ಮಹಾ ಮಂಗಳಾರತಿ ನಡೆಯಿತು. ದೇವಸ್ಥಾನಕ್ಕೆ ಆಗಮಿಸಿದ ಸಹಸ್ರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಶ್ರೀಶಿರಡಿ ಸಾಯಿಬಾಬಾ ಧಾರ್ಮಿಕ ಮತ್ತು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಕಾರ್ಯಾಧ್ಯಕ್ಷ ಉಮೇಶ್ ಎಸ್ ಪಿಕೆ, ಪ್ರಧಾನ ಕಾರ್ಯದರ್ಶಿ ರಾಜು ಎಸ್ ಪಿಕೆ, ಉಪಾಧ್ಯಕ್ಷ ಎಂ.ರಾಜು, ಕೃಪಾಶಂಕರ್, ಪದಾಧಿಕಾರಿಗಳು, ಭಕ್ತರು ಹಾಜರಿದ್ದರು.

**ಸರ್ಕಾರಿ ಆಯುರ್ವೇದ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಮಧುಮಾಲತಿ ಸಲಹೆ**

# ಯೋಗಾಭ್ಯಾಸದಿಂದ ಆರೋಗ್ಯವಂತ ಜೀವನ



ಪಿರಿಯಾಪಟ್ಟಣ :ವೃದ್ಧಾಪ್ಯದ ದಿನಗಳಲ್ಲಿ ಕಾಡುವ ಖಾಯಿಲೆಗಳಿಂದ ಪಾರಾಗಿ ಆರೋಗ್ಯವಂತ ಜೀವನ ನೆಡೆಸಲು ದಿನನಿತ್ಯ ಬದುಕಿನಲ್ಲಿ ಯೋಗಾಭ್ಯಾಸ ಅಳವಡಿಸಿಕೊಳ್ಳಿ ಎಂದು ಪಟ್ಟಣದ ಸರ್ಕಾರಿ ಆಯುರ್ವೇದ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಮಧುಮಾಲತಿ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಬುಧವಾರ 12ನೇ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಆಯುಷ್ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ "ಯೋಗ ತಾಲೀಮು" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತೀಯ ಪರಂಪರೆಯಲ್ಲಿ ಯೋಗವು ಕೇವಲ ದೈಹಿಕ ವ್ಯಾಯಾಮ ಮಾತ್ರವಲ್ಲದೆ ದೇಹ, ಮನಸ್ಸು ಮತ್ತು ಆತ್ಮದ ನಡುವಿನ ಸಾಮರಸ್ಯವನ್ನು ಸಾಧಿಸುವ ಒಂದು ಶ್ರೇಷ್ಠ ಆಧ್ಯಾತ್ಮಿಕ ಧ್ಯಾನವಾಗಿದೆ. ಹಾಗೂ ಯೋಗ ಅಭ್ಯಾಸದಿಂದ ಮಾನಸಿಕ ಶಾಂತಿ, ಒತ್ತಡ, ಆತಂಕವನ್ನು ಕಡಿಮೆಯಾಗುವುದಲ್ಲದೆ ಮನಸ್ಸಿಗೆ ನೆಮ್ಮದಿಯನ್ನು ಕಾಣಬಹುದು ಎಂದರು.

ಕಾಲೇಜಿನ ಪ್ರಾಂಶುಪಾಲ ಎಚ್.ರಾಜಣ್ಣ ಮಾತನಾಡಿ ವಿದ್ಯಾರ್ಥಿಗಳು ಪ್ರತಿನಿತ್ಯ ದಿನದಲ್ಲಿ ಕನಿಷ್ಠ ಅರ್ಧ ಅಥವಾ ಒಂದು ತಾಸು ಯೋಗಾಭ್ಯಾಸಕ್ಕೆ ಮೀಸಲಿಡಿ ಎಂದು ಕಿವಿಮಾತು ಹೇಳಿದ್ದಲ್ಲದೆ, ವಿದ್ಯಾರ್ಥಿಗಳಿಗೆ ಯೋಗದ ಮಹತ್ವ ಹಾಗೂ ಅದರಿಂದಾಗುವ ಉಪಯೋಗದ ಮಾಹಿತಿಯನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಉಪನ್ಯಾಸಕ ಮಹೇಶ್, .ಎನ್‌ಎಸ್‌ಎಸ್ ಕಾರ್ಯಕ್ರಮ ಆಯೋಜಕಿ ಬೇಬಿ ಎನ್ ಸಿ ಮಾತನಾಡಿದರೆ, ಯೋಗ ತರಬೇತುದಾರರಾದ ಆಶಾ ಮಹದೇವರಾವ್ ಯೋಗ ತಾಲೀಮು ನಡೆಸಿಕೊಟ್ಟರು. ಕಾಲೇಜಿನ ಉಪನ್ಯಾಸಕರಾದ ಕವಿತಾ,ತನುಜ,ಲತಾ, ಮಾನಸ ಅನಿತಾ, ಮನು ಕುಮಾರ್, ರಮೇಶ್ ಸೇರಿದಂತೆ ಇತರರು ಹಾಜರಿದ್ದರು.

# ವಿದ್ಯಾರ್ಥಿಗಳಿಗೆ ಅಂಕಗಳಿಕೆಯೆ ಮುಖ್ಯವಲ್ಲ




ಚಾಮರಾಜನಗರ, ವಿದ್ಯಾರ್ಥಿಗಳಿಗೆ ಅಂಕ ಗಳಿಕೆಯೇ ಮುಖ್ಯವಲ್ಲ. ಅಂಕಗಳಿಕೆ ಒಂದು ಪ್ರೇರೇಪಣೆಯಾಗಿದ್ದು, ಅದರಿಂದ ಪ್ರೋತ್ಸಾಹ ಪಡೆದು ಮುಂದಿನ ಸಾಧನೆಯತ್ತ ಮುಖ ಮಾಡಬೇಕು ಎಂದು ನಿವೃತ್ತ ಅಧ್ಯಾಪಕ ಆರ್.ಪಿ.ನಿರಂಜನ್ ಸಲಹೆ ನೀಡಿದರು.

ನಗರದ ಮಹಾಮನೆ ಸಭಾಂಗಣದಲ್ಲಿ ಚಾ.ನಗರ ಜಿಲ್ಲಾ ಆರಾಧ್ಯ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದವರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿ ಜೀವನವನ್ನು ಸಾಧನೆಯ ಮೆಟ್ಟಿಲಾಗಿ ಮಾಡಿಕೊಳ್ಳಬೇಕು. ಅದರೊಂದಿಗೆ ನಮ್ಮ ಸಂಸ್ಕೃತಿ, ಸಂಸ್ಕಾರ, ನಡೆ ನುಡಿಯನ್ನು ಪಾಲಿಸಬೇಕು. ಸಂಸ್ಕಾರ ಇಲ್ಲದ ವ್ಯಕ್ತಿ ಎಷ್ಟೇ ಸಾಧನೆ ಮಾಡಿದರೂ ವ್ಯರ್ಥ ಎಂದರು.

ಯಾವುದೇ ವ್ಯಕ್ತಿಯ ಸಾಧನೆ ಅವರೊಬ್ಬರ ಶ್ರಮವಲ್ಲ. ಅದರಲ್ಲಿ ತಂದೆ ತಾಯಿ, ಪೋಷಕರ ಪಾಲೂ ಇದೆ. ಪೋಷಕರು ಮಕ್ಕಳ ಮೇಲೆ ಯಾವುದೇ ಒತ್ತಡ ಹಾಕಬಾರದು. ನೂರಕ್ಕೆ ನೂರು ಅಂಕ ಬರಲೇಬೇಕು ಎಂಬ ಅತಿಯಾದ ಆಕಾಂಕ್ಷೆ, ನಿರೀಕ್ಷೆ ಬೇಡ ಎಂದು ಸಲಹೆ ನೀಡಿದರು. ಹೆಚ್ಚು ಓದದೇ ಸಾಧನೆ ಮಾಡಿದವರು ಹಲವಾರು ಮಂದಿ ಇದ್ದಾರೆ. ಕನ್ನಡ ಚಿತ್ರರಂಗವನ್ನು ಬೆಳಗಿದ ಡಾ. ರಾಜಕುಮಾರ್ ಓದಿದ್ದು ನಾಲ್ಕನೇ ತರಗತಿ ಮಾತ್ರ ಎಂಬು ದನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಎಷ್ಟೋ ಮಹನೀಯರು ಹೆಚ್ಚು ಓದದೆಯೂ ಸಮಾಜದಲ್ಲಿ ಉನ್ನತ ಗೌರವ ಸ್ಥಾನ ಪಡೆದುಕೊಂಡಿದ್ದಾರೆ ಎಂದರು.

ಅಧ್ಯಕ್ಷ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಅಗರ ಬಿ. ರಾಮಾರಾಧ್ಯ ಮಾತನಾಡಿ, ಚಾಮರಾಜನಗರ ಆರಾಧ್ಯ ಟ್ರಸ್ಟ್ ಇದೀಗ ಆರಂಭಿಕ ಸ್ಥಿತಿಯಲ್ಲಿದ್ದು, ಇದರ ಬೆಳವಣಿಗೆ ಸಮುದಾಯದ ಎಲ್ಲರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.ಸರಸಕಾಯ‌ಕ್ರಮದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ರುದ್ರಾರಾಧ್ಯ, ಗುಂಡ್ಲುಪೇಟೆ ಸಂಘದ ಪುಟ್ಟಸೋಮಾರಾಧ್ಯ, ಮೈಸೂರು ಸಂಘದ ಅಧ್ಯಕ್ಷ ಸೋಮಶೇಖರಾರಾಧ್ಯ, ವಿಶ್ವಾರಾಧ್ಯ, ಶಿವಶಂಕರಾರಾಧ್ಯ, ಚಂದ್ರಶೇಖರಾರಾಧ್ಯ, ನಿಜಗುಣ ಆರಾಧ್ಯ, ಸಿದ್ದರಾಮಾರಾಧ್ಯ, ಗಣೇಶಾರಾಧ್ಯ, ಗುರುಮಲ್ಲಾರಾಧ್ಯ, ಸೋಮಾರಾಧ್ಯ, ಗಾಯತ್ರಿ ವೇದಿಕೆಯಲ್ಲಿ ಹಾಜರಿದ್ದರು.

## ಐಐಎಂ ಪದವಿಪೂರ್ವ ಕ್ಯಾಂಪಸ್ ಗೆ ಟಾಟಾ ಟ್ರಸ್ಟ್ಸ್‌ನಿಂದ ಅನುದಾನ

# ಜಾಗತಿಕ ಮಟ್ಟದ ಶಿಕ್ಷಣ ನೀಡಲು ಸಜ್ಜಾದ ಐಐಎಂಬಿ

**ಮೈಸೂರು :** ಐಐಎಂ ಬೆಂಗಳೂರು ಸಂಸ್ಥೆಯು ನಗರದಲ್ಲಿ ಆರಂಭಿಸಲು ಉದ್ದೇಶಿಸಿರುವ ವಿಶ್ವದರ್ಜೆಯ ಪದವಿಪೂರ್ವ (ಅಂಡರ್ ಗ್ರಾಜುಯೇಟ್) ಕಾಲೇಜು ಕ್ಯಾಂಪಸ್ ಗೆ ಟಾಟಾ ಟ್ರಸ್ಟ್ಸ್ ಸಂಸ್ಥೆಯು ಭಾರಿ ಮೊತ್ತದ ಆರ್ಥಿಕ ನೆರವು ಒದಗಿಸುವುದಾಗಿ ಘೋಷಿಸಿದೆ. ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಟಾಟಾ ಟ್ರಸ್ಟ್ಸ್ ನೀಡಿರುವ ಈ ಬೃಹತ್ ಅನುದಾನ ಮಹತ್ವದ ಮೈಲಿಗಲ್ಲಾಗಿದೆ.

ಬಹುಶಿಸ್ತೀಯ ಪದವಿಪೂರ್ವ ಶಿಕ್ಷಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಟಾಟಾ ಟ್ರಸ್ಟ್ಸ್ ಮತ್ತು ಐಐಎಂಬಿ ಹೊಂದಿರುವ ಜಂಟಿ ದೃಷ್ಟಿಕೋನಕ್ಕೆ ಈ ಅನುದಾನವು ದೊಡ್ಡ ಶಕ್ತಿ ನೀಡಲಿದ್ದು, ಅತ್ಯಾಧುನಿಕ ಮೂಲಸೌಕರ್ಯ, ಗುಣಮಟ್ಟದ ಸಂಶೋಧನಾ ಸಾಮರ್ಥ್ಯ ಹಾಗೂ ಜಾಗತಿಕ ಮಟ್ಟದ ಕಲಿಕಾ ವಾತಾವರಣವನ್ನು ನಿರ್ಮಿಸಲು ನೆರವಾಗಲಿದೆ.

ಪ್ರಸ್ತುತ ಬನ್ನೇರುಘಟ್ಟ ರಸ್ತೆಯಲ್ಲಿರುವ ಐಐಎಂಬಿಯ ಮುಖ್ಯ ಕ್ಯಾಂಪಸ್ ನಿಂದ ಸುಮಾರು 27 ಕಿಲೋಮೀಟರ್ ದೂರದಲ್ಲಿ ಈ ನೂತನ ಪದವಿಪೂರ್ವ ಅಧ್ಯಯನ ಶಾಲೆ ತಲೆಯೆತ್ತಲಿದೆ. ಐಐಎಂ ಸಂಸ್ಥೆಯು ತನ್ನ ಸ್ನಾತಕೋತ್ತರ (ಪಿಜಿ) ಮತ್ತು ಕಾರ್ಯನಿರ್ವಾಹಕ (ಎಕ್ಸಿಕ್ಯೂಟಿವ್) ಶಿಕ್ಷಣ ಯೋಜನೆಗಳಲ್ಲಿ ಕಾಯ್ದುಕೊಂಡು ಬಂದಿರುವ ಅದೇ ಶೈಕ್ಷಣಿಕ ಶಿಸ್ತು, ಕಠಿಣತೆ ಹಾಗೂ ಜಾಗತಿಕ ದೃಷ್ಟಿಕೋನವನ್ನು ಈಗ ಪದವಿಪೂರ್ವ ಶಿಕ್ಷಣದಲ್ಲೂ ಅಳವಡಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಹೊಂದಿದೆ. ಅದರ ಭಾಗವಾಗಿಯೇ ಈ ನೂತನ ಕ್ಯಾಂಪಸ್ ರೂಪುಗೊಳ್ಳುತ್ತಿದೆ.

ಈ ನೂತನ ಸಂಸ್ಥೆಯು ಆರಂಭದಲ್ಲಿ ನಾಲ್ಕು ವರ್ಷಗಳ ಅವಧಿಯ ಎರಡು ಪೂರ್ಣಾವಧಿ ವಸತಿ (ರೆಸಿಡೆನ್ಶಿಯಲ್) ಪದವಿ ಕೋರ್ಸ್ ಗಳನ್ನು ಒದಗಿಸಲಿದೆ. ಇದರಲ್ಲಿ ಡೇಟಾ ಸೈನ್ಸ್ ಅನ್ನು ಮೈನರ್ ವಿಷಯವಾಗಿ ಒಳಗೊಂಡ ಬಿಎಸ್‌ಸಿ (ಆನರ್ಸ್) ಎಕನಾಮಿಕ್ಸ್ ಹಾಗೂ ಎಕನಾಮಿಕ್ಸ್ ಅನ್ನು ಮೈನರ್ ವಿಷಯವಾಗಿ ಒಳಗೊಂಡ ಬಿಎಸ್‌ಸಿ (ಆನರ್ಸ್) ಡೇಟಾ ಸೈನ್ಸ್ ಕೋರ್ಸ್‌ಗಳು ಸೇರಿವೆ. ಪ್ರಸಕ್ತ ವರ್ಷದ ಆಗಸ್ಟ್ ತಿಂಗಳಿನಿಂದಲೇ ಈ ತರಗತಿಗಳು ಆರಂಭವಾಗಲಿವೆ. ಇಂದಿನ ಸಂಕೀರ್ಣ ಹಾಗೂ ದತ್ತಾಂಶ ಆಧಾರಿತ ಮಾರುಕಟ್ಟೆಯ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಡೇಟಾ ಸೈನ್ಸ್, ಅರ್ಥಶಾಸ್ತ್ರ




ಮತ್ತು ಬ್ಯುಸಿನೆಸ್ ಸ್ಟಡೀಸ್ ವಿಷಯಗಳನ್ನು ಒಳಗೊಂಡ ಬಹುಶಿಸ್ತೀಯ ಪಠ್ಯಕ್ರಮವನ್ನು ಇಲ್ಲಿ ರೂಪಿಸಲಾಗಿದೆ. ಆರಂಭಿಕ ಹಂತದಲ್ಲಿ ಪ್ರತಿ ವಿಭಾಗಕ್ಕೆ 40 ರಂತೆ ಒಟ್ಟು 80 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದ್ದು, ಇದು ವಿದ್ಯಾರ್ಥಿಗಳ ಮೇಲೆ ವೈಯಕ್ತಿಕ ಗಮನ ಹರಿಸಲು ಮತ್ತು ಐಐಎಂಬಿ ವಾತಾವರಣದಲ್ಲಿ ಅತ್ಯುತ್ತಮ ಶೈಕ್ಷಣಿಕ ಮಾರ್ಗದರ್ಶನ ನೀಡಲು ಸಹಕಾರಿಯಾಗಲಿದೆ.

ಟಾಟಾ ಟ್ರಸ್ಟ್ಸ್ ನೀಡಿರುವ ಈ ಐತಿಹಾಸಿಕ ಅನುದಾನವನ್ನು ವಿಶ್ವದರ್ಜೆಯ ಶೈಕ್ಷಣಿಕ ಮತ್ತು ವಸತಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತದೆ. ಇದರೊಂದಿಗೆ, ಪ್ರಸ್ತುತ ಜಗತ್ತಿನಲ್ಲಿ ಮುಂಚೂಣಿಗೆ ಬರುತ್ತಿರುವ ಎಐ, ಡೇಟಾ ಸೈನ್ಸ್, ಆಲ್ಗಾರಿದಮಿಕ್ ಡಿಸೈನ್, ಭಾರತೀಯ ಜ್ಞಾನ ಪರಂಪರೆ (ಇಂಡಿಯನ್ ನಾಲೆಡ್ಜ್ ಸಿಸ್ಟಮ್ಸ್) ಹಾಗೂ ಅಪ್ಲೈಡ್ ಬ್ಯುಸಿನೆಸ್ ಲರ್ನಿಂಗ್ ಸೇರಿದಂತೆ ಹಲವು ಉದಯೋನ್ಮುಖ ಕ್ಷೇತ್ರಗಳಲ್ಲಿ ಹೊಸ ಸಂಶೋಧನಾ ವಿಭಾಗಗಳನ್ನು ಸ್ಥಾಪಿಸಲು ಈ ನೆರವು ಮುನ್ನುಡಿ ಬರೆಯಲಿದೆ. ವಿವಿಧ ಶೈಕ್ಷಣಿಕ ಹಿನ್ನೆಲೆಯುಳ್ಳ ನುರಿತ ಮತ್ತು ಸಮರ್ಪಿತ ಪ್ರಾಧ್ಯಾಪಕರ ಬಳಗವನ್ನು ಸಂಸ್ಥೆಗೆ ಆಕರ್ಷಿಸಲು ಈ ಸಾಂಸ್ಥಿಕ ಬೆಂಬಲವು ಐಐಎಂಬಿಗೆ ಮತ್ತಷ್ಟು ಶಕ್ತಿ ತುಂಬಲಿದೆ.

ಸಮಾಜ ಸೇವಾ ಸಂಸ್ಥೆಯೊಂದು ಮಾಡಬಹುದಾದ ಅತ್ಯಂತ ಮಹತ್ವದ ಹೂಡಿಕೆಯೆಂದರೆ ಅದು ಜ್ಞಾನ ಮತ್ತು ಅದನ್ನು ಮುನ್ನಡೆಸುವ ಮಾನವ ಸಂಪನ್ಮೂಲದ ಮೇಲಿನ ಹೂಡಿಕೆ ಎಂಬ ದೃಢ ನಂಬಿಕೆಯನ್ನು ಟಾಟಾ ಟ್ರಸ್ಟ್ಸ್ ಬಹಳ ಹಿಂದಿನಿಂದಲೇ ಹೊಂದಿದೆ. ಶೈಕ್ಷಣಿಕವಾಗಿ ಕಠಿಣ ಶಿಸ್ತು ಹೊಂದಿರುವ, ಜಾಗತಿಕ ದೃಷ್ಟಿಕೋನವುಳ್ಳ ಹಾಗೂ ಭಾರತದ ಅಭಿವೃದ್ಧಿಗೆ ಪೂರಕವಾಗಿರುವ ಸಂಸ್ಥೆಗಳನ್ನು ಕಟ್ಟುವ ಪ್ರಯತ್ನಗಳನ್ನು ಟಾಟಾ ಟ್ರಸ್ಟ್ಸ್ ನಿರಂತರವಾಗಿ ಮಾಡಿಕೊಂಡು ಬಂದಿದೆ. ಡೇಟಾ, ಅರ್ಥಶಾಸ್ತ್ರ ಮತ್ತು ಪುರಾವೆ ಆಧಾರಿತ ಕಲಿಕೆಯನ್ನು ಒಳಗೊಂಡಿರುವ ಈ ಪದವಿಪೂರ್ವ ಕೋರ್ಸ್ ಟಾಟಾ ಸಂಸ್ಥೆಯ ಅದೇ ಸುದೀರ್ಘ ಸಂಪ್ರದಾಯಕ್ಕೆ ಪೂರಕವಾಗಿದೆ.

ಈ ಐತಿಹಾಸಿಕ ಸಂದರ್ಭದಲ್ಲಿ ಮಾತನಾಡಿದ ಟಾಟಾ ಟ್ರಸ್ಟ್ಸ್ ಅಧ್ಯಕ್ಷ ನೋಯೆಲ್ ಟಾಟಾ ಅವರು, "ಟಾಟಾ ಟ್ರಸ್ಟ್ಸ್ ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಟಾಟಾ ಮೆಮೋರಿಯಲ್ ಆಸ್ಪತ್ರೆ ಮತ್ತು ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ನಂತಹ ಭಾರತದ ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳನ್ನು ಬೆಂಬಲಿಸುತ್ತಾ ಬಂದಿದೆ. ಐಐಎಂಬಿಯ ಈ ಹೊಸ ಪ್ರಯತ್ನಕ್ಕೆ ನಾವು ನೀಡುತ್ತಿರುವ ಬೆಂಬಲವೂ ಅದೇ ಆಶಯವನ್ನು ಪ್ರತಿಬಿಂಬಿಸುತ್ತದೆ. ಯಾವುದೇ ಒಂದು ಸಂಸ್ಥೆಯು ಆರಂಭಿಕ ಹಾಗೂ ರೂಪುಗೊಳ್ಳುವ ಹಂತದಲ್ಲಿರುವಾಗ ದೊರೆಯುವ ಬಂಡವಾಳವು ಕೇವಲ ಒಂದು ಕಟ್ಟಡ ಅಥವಾ ಬಜೆಟ್ ಅನ್ನು ಮಾತ್ರ ರೂಪಿಸುವುದಿಲ್ಲ; ಬದಲಿಗೆ ಆ ಸಂಸ್ಥೆಯ ಚಾರಿತ್ರ್ಯ ಮತ್ತು ಮಹತ್ವಾಕಾಂಕ್ಷೆಯನ್ನೇ ಸೃಷ್ಟಿಸುತ್ತದೆ. ಅಂತಹ ಶಾಶ್ವತ ಮೌಲ್ಯವುಳ್ಳ ಸಂಸ್ಥೆಗಳನ್ನು ಕಟ್ಟುವುದು ನಮ್ಮ ಉದ್ದೇಶವಾಗಿದೆ" ಎಂದರು.

ಟಾಟಾ ಟ್ರಸ್ಟ್ಸ್‌ನ ಈ ಮಹತ್ವದ ಕೊಡುಗೆಯನ್ನು ಸ್ವಾಗತಿಸಿದ ಐಐಎಂ ಬೆಂಗಳೂರಿನ ಆಡಳಿತ ಮಂಡಳಿ (ಬೋರ್ಡ್ ಆಫ್ ಗವರ್ನರ್ಸ್) ಅಧ್ಯಕ್ಷ ಡಾ. ದೇವಿ ಶೆಟ್ಟಿ ಅವರು, "ಟಾಟಾ ಟ್ರಸ್ಟ್ಸ್ ನೀಡಿರುವಂತಹ ಅಭೂತಪೂರ್ವ ಆರ್ಥಿಕ ನೆರವು, ಐಐಎಂ ಬೆಂಗಳೂರಿನಂತಹ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳನ್ನು ಜಾಗತಿಕ ನಾಯಕತ್ವದ ಹಾದಿಯಲ್ಲಿ ದೃಢವಾಗಿ ಮುನ್ನಡೆಸಲು ಅತ್ಯಗತ್ಯವಾಗಿವೆ. ಪದವಿಪೂರ್ವ ಹಂತದಲ್ಲೇ ಪ್ರತಿಭೆಗಳನ್ನು ಪೋಷಿಸಲು ಮತ್ತು ದತ್ತಾಂಶ ಆಧಾರಿತ ಜಗತ್ತಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲ ಚಿಂತಕರ ದಂಡನ್ನು ಸೃಷ್ಟಿಸಲು ನಾವು ಬದ್ಧರಾಗಿದ್ದೇವೆ" ಎಂದು ಹೇಳಿದರು.

ಈ ಜಂಟಿ ಸಹಭಾಗಿತ್ವದ ಕುರಿತು ಮಾತನಾಡಿದ ಟಾಟಾ ಟ್ರಸ್ಟ್ಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಿದ್ದಾರ್ಥ್ ಶರ್ಮಾ ಅವರು, "ಟಾಟಾ ಟ್ರಸ್ಟ್ಸ್‌ನಲ್ಲಿ ನಾವು ಯಾವಾಗಲೂ ಮಹತ್ವಾಕಾಂಕ್ಷಿ ದೃಷ್ಟಿಕೋನ ಹಾಗೂ ವಾಸ್ತವಿಕ ಸವಾಲುಗಳಿಗೆ ಪರಿಹಾರ ನೀಡುವಂತಹ ಯೋಜನೆಗಳನ್ನು ಪ್ರೋತ್ಸಾಹಿಸಲು ಬಯಸುತ್ತೇವೆ. ಐಐಎಂ ಬೆಂಗಳೂರು ಸಂಸ್ಥೆಯು ತನ್ನ ಶೈಕ್ಷಣಿಕ ಶಿಸ್ತು ಮತ್ತು ಉತ್ಕೃಷ್ಟತೆಯನ್ನು ಪದವಿಪೂರ್ವ ಶಿಕ್ಷಣಕ್ಕೂ ವಿಸ್ತರಿಸುತ್ತಿರುವ ಈ ಸಂದರ್ಭದಲ್ಲಿ ಅದಕ್ಕೆ ಬೆಂಬಲ ನೀಡುತ್ತಿರುವುದು ನಮ್ಮ ಈ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಜ್ಞಾನದ ಮೇಲೆ ಹಾಗೂ ಭಾರತದ ಭವಿಷ್ಯವನ್ನು ರೂಪಿಸುವ ಯುವ ಪೀಳಿಗೆಯ ಮೇಲೆ ಹೂಡಿಕೆ ಮಾಡುವುದು ನಾವು ಮಾಡಬಹುದಾದ ಅತ್ಯಂತ ಅರ್ಥಪೂರ್ಣ ಕೆಲಸಗಳಲ್ಲಿ ಒಂದಾಗಿದೆ" ಎಂದು ಅಭಿಪ್ರಾಯಪಟ್ಟರು.

ನೂತನ ಪಠ್ಯಕ್ರಮದ ವಿನ್ಯಾಸದ ಕುರಿತು ವಿವರಿಸಿದ ಐಐಎಂ ಬೆಂಗಳೂರಿನ ಪ್ರಭಾರ ನಿರ್ದೇಶಕ ಪ್ರೊ. ಯು. ದಿನೇಶ್ ಕುಮಾರ್ ಅವರು, "ನಾವು ರೂಪಿಸಿರುವ ಕೋರ್ಸ್ ಗಳು ವಿದ್ಯಾರ್ಥಿಗಳಿಗೆ ಕೇವಲ ತಾಂತ್ರಿಕ ನೈಪುಣ್ಯತೆಯನ್ನು ನೀಡುವುದಷ್ಟೇ ಅಲ್ಲದೆ, ಯುವ ಮನಸ್ಸುಗಳು ಸೂಕ್ತ ಪ್ರಶ್ನೆಗಳನ್ನು ಕೇಳುವಂತೆ, ಸಂಕೀರ್ಣತೆಗಳನ್ನು ಅರ್ಥೈಸಿಕೊಳ್ಳುವಂತೆ ಮತ್ತು ಪುರಾವೆಗಳ ಆಧಾರದ ಮೇಲೆ ಮುನ್ನಡೆಯುವಂತೆ ಸಜ್ಜುಗೊಳಿಸುತ್ತವೆ. ಟಾಟಾ ಟ್ರಸ್ಟ್ಸ್ ನೀಡಿರುವ ಈ ಬೆಂಬಲವು ನಮಗೆ ಅತ್ಯುತ್ತಮ ಪ್ರಾಧ್ಯಾಪಕರು, ಸಂಶೋಧನಾ ಮೂಲಸೌಕರ್ಯ ಮತ್ತು ಕ್ಯಾಂಪಸ್ ವಾತಾವರಣದ ಮೇಲೆ ಬಂಡವಾಳ ಹೂಡಲು ಅನುವು ಮಾಡಿಕೊಡುತ್ತದೆ. ಇದು ಭಾರತದ ಅಭಿವೃದ್ಧಿಯ ಆದ್ಯತೆಗಳ ಮೇಲೆ ಗಮನ ಕೇಂದ್ರೀಕರಿಸುವ ಮತ್ತು ಜಾಗತಿಕ ಸಾಮರ್ಥ್ಯಗಳನ್ನು ಬಲಪಡಿಸಲು ಬದ್ಧವಾಗಿರುವ ಅತ್ಯಾಧುನಿಕ ಕಲಿಕಾ ವ್ಯವಸ್ಥೆಯನ್ನು ನಿರ್ಮಿಸಲು ನೆರವಾಗಲಿದೆ" ಎಂದರು.

## ಅರ್ಜಿ ಆಹ್ವಾನ

**ರಾಮನಗರ:** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ 2026–27ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ, ಅಲೆಮಾರಿ/ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು 2026ರ ಆಗಸ್ಟ್ 31ರೊಳಗೆ https://ssp.postmatric.karnataka.gov.in/ ಮೂಲಕ ಸಲ್ಲಿಬೇಕು.

ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ: 080–29782455 ಅನ್ನು ಸಂಪರ್ಕಿಸುವಂತೆ ರಾಮನಗರ ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೀನುಮರಿ ಪಾಲನೆಗೆ ಸಹಾಯಧನ ನೀಡಲು ಅರ್ಜಿ ಆಹ್ವಾನ

**ರಾಮನಗರ:** 2026–27ನೇ ಸಾಲಿನಲ್ಲಿ ಕೆರೆ/ಜಲಾಶಯದ ಅಂಚಿನಲ್ಲಿ ನಿರ್ಮಿಸಿರುವ ಕೊಳಗಳಲ್ಲಿ ಮೀನುಮರಿ ಪಾಲನೆಗೆ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಮೀನುಗಾರಿಕೆ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಕೆರೆ/ಜಲಾಶಯ ಹಾಗೂ ಗ್ರಾಮ ಪಂಚಾಯಿತಿ ಕೆರೆಗಳನ್ನು ಪಡೆದಿರುವ ಟೆಂಡರ್/ಗುತ್ತಿಗೆದಾರರು ಕೆರೆ/ಜಲಾಶಯದ ಅಂಚಿನಲ್ಲಿ ನಿರ್ಮಿಸಿರುವ ಕೊಳಗಳಲ್ಲಿ ಮೀನುಮರಿ ಪಾಲನೆ ಮಾಡಲು ಮೀನುಗಾರಿಕೆ ಇಲಾಖೆ ವತಿಯಿಂದ ಪ್ರತಿ ಹೆಕ್ಟೇರಿಗೆ ರೂ.2.50 ಲಕ್ಷ ಸಹಾಯಧನ ನೀಡಲಾಗುವುದು.

ಆಸಕ್ತರು ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು ಮೊ:9986883110, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಚನ್ನಪಟ್ಟಣ ತಾಲ್ಲೂಕು ಮೊ: 9972127558, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕನಕಪುರ ತಾಲ್ಲೂಕು ಮೊ:8618277242, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾಗಡಿ ತಾಲ್ಲೂಕು ಮೊ: 9880347733 ಮತ್ತು ಮೀನುಗಾರಿಕೆ ಉಪನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ ಮೊ:9448655014 ಇವರನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆ ತಲುಪಿಸಿ

**ಮಂಡ್ಯ:** ಪಂಚ ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯುತ್ತಿರುವ ಯಾವುದೇ ಅರ್ಹ ಫಲಾನುಭವಿಗಳಿಗೆ ತೊಂದರೆಯಾಗದಂತೆ ಯೋಜನೆಗಳನ್ನು ನಿರಂತರವಾಗಿ ಮುಂದುವರಿಸಲಾಗುವುದು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯೋಜನೆಗಳ ಪರಿಶೀಲನೆಯ ಉದ್ದೇಶ ಮೃತ ಹಾಗೂ ಅನರ್ಹ ಫಲಾನುಭವಿಗಳನ್ನು ಗುರುತಿಸಿ, ಸರ್ಕಾರದ ಹಣ ದುರುಪಯೋಗವಾಗುವುದನ್ನು ತಡೆಯುವುದಾಗಿದೆ ಎಂದರು.

ಜಿಲ್ಲೆಯಲ್ಲಿ ಯುವನಿಧಿ ಯೋಜನೆ ಅಡಿಯಲ್ಲಿ 9,946 ಅಭ್ಯರ್ಥಿಗಳು ನೋಂದಣಿಯಾಗಿದ್ದು, 8,723 ಫಲಾನುಭವಿಗಳಿಗೆ ವಿವಿಧ ಕಂತುಗಳ ಮೂಲಕ ರೂ.26.28 ಕೋಟಿ ಅನುದಾನ




ವರ್ಗಾವಣೆಯಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಎಪಿಎಲ್‌ನಿಂದ ಬಿಪಿಎಲ್‌ಗೆ ಪರಿವರ್ತನೆ ಸಂಬಂಧ ಜಿಲ್ಲೆಯಲ್ಲಿ ಬಂದಿದ್ದ 515 ಅರ್ಜಿಗಳ ಪೈಕಿ ಎಲ್ಲಾ 515 ಅರ್ಜಿಗಳನ್ನು ಪರಿವರ್ತಿಸಲಾಗಿದೆ ಎಂದು ತಿಳಿಸಲಾಯಿತು.

ಶಕ್ತಿ ಯೋಜನೆ ಅಡಿಯಲ್ಲಿ ಮೇ 2026ರ ಅಂತ್ಯದವರೆಗೆ 21.64 ಕೋಟಿ ಮಹಿಳೆಯರು ಉಚಿತ ಪ್ರಯಾಣದ ಸೌಲಭ್ಯ ಪಡೆದಿದ್ದು, ಸಾರಿಗೆ ಇಲಾಖೆಗೆ ರೂ.603.64 ಕೋಟಿ ಪರಿಹಾರಧನ ಬಿಡುಗಡೆಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ರಾಜ್ಯದ ಎಲ್ಲಾ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಣೆಯಲ್ಲಿ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಚಿಕ್ಕಲಿಂಗಯ್ಯ ಸೂಚಿಸಿದರು.ಸಭೆಯಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಇದೇ ವೇಳೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಸಭೆಯಲ್ಲಿ ಪ್ರಾಧಿಕಾರದ ಉಪಾಧ್ಯಕ್ಷರು, ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಜೂ.19ರಂದು ಕಾಲಘಟ್ಟ ಚಲನಚಿತ್ರ ತೆರೆಗೆ

**ಮಂಡ್ಯ:** ಎ.ಪ್ರಕಾಶ್ ಅಂಬಳೆ ನಿರ್ದೇಶನದ ಕಾಲಘಟ್ಟ ಚಲನಚಿತ್ರವು ಜೂ.19ರಂದು ರಾಜ್ಯಾದ್ಯಂತ ಪ್ರದರ್ಶನಗೊಳ್ಳಲಿದೆ ಎಂದು ಚಲನಚಿತ್ರದ ನಾಯಕಿ ಖುಷಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಲನಚಿತ್ರವು 90ರ ದಶಕ ಹಾಗೂ ಆನಂತರದ ದಶಕಗಳ ಕಾಲದಲ್ಲಿನ ಬದಲಾವಣೆಗಳು ಹಾಗೂ ಅನುಭವಗಳನ್ನು ತೆರೆದಿಡುವ ಚಿತ್ರವಾಗಿದೆ ಎಂದರು.




90ರ ದಶಕದಲ್ಲಿನ ಜೀವನ ಶೈಲಿ, ಜವಾಬ್ದಾರಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಅಂತೆಯೇ ತದನಂತರದ ಪ್ರೀತಿ ಪ್ರೇಮದ ಹಾದಿ, ಬೇಜವಾಬ್ದಾರಿ ಕಾಲಘಟ್ಟದ ಜೀವನದ ನಡುವಿನ ವ್ಯತ್ಯಾಸಗಳನ್ನು ತಿಳಿಸಿಕೊಡಲಾಗಿದೆ. ಚಲನಚಿತ್ರದಲ್ಲಿ ಅಭಿದಾಸ್, ಭವ್ಯ, ರಮೇಶ್ ಭಟ್, ಶೋಭ್‌ರಾಜ್ ಸೇರಿದಂತೆ ಬೃಹತ್ ತಾರಾಗಣದ ನಟನೆಯಿದೆ ಎಂದು ಹೇಳಿದರು.

ನಿರ್ಮಾಪಕ ಟಿ.ಸಿ.ಚಿಕ್ಕೇಗೌಡ ಮಾತನಾಡಿ, ರಾಜ್ಯಾದ್ಯಂತ 19 ರಂದು ಬಿಡುಗಡೆಯಾಗಲಿರುವ ಚಲನಚಿತ್ರವು 60 ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳಲಿದೆ. ಅಂದಾಜು 2 ಕೋಟಿ ರೂ.ಗಳಲ್ಲಿ ನಿರ್ಮಾಣ ಮಾಡಲಾಗಿದ್ದು, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ ಹಾಗೂ ಚಾಮರಾಜನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಟಿ.ಎಂ.ಪ್ರಕಾಶ್ ಇದ್ದರು.

## ಟೋಲ್ ಸುಂಕ ರದ್ದತಿಗೆ ಜೂ.23ರಂದು ಗಣಂಗೂರು ಟೋಲ್ ಬಳಿ ರೈತರ ಪ್ರತಿಭಟನೆ




**ಮಂಡ್ಯ:** ರೈತರ ವಾಹನಗಳಿಗೆ ಟೂಲ್ ಸುಂಕ ವಸೂಲಿ ನಿಲ್ಲಿಸಲು ಪಂಜಾಬ್ ಮಾದರಿಯಲ್ಲಿ ಶುಲ್ಕ ವಸೂಲಿ ಕೇಂದ್ರ ರದ್ದು ಮಾಡಲು ಒತ್ತಾಯಿಸಿ ಗಣಂಗೂರಿನ ರಾಷ್ಟ್ರೀಯ ಹೆದ್ದಾರಿ ಟೋಲ ಬಳಿ ಜೂ.23 ರಂದು ಪ್ರತಿಭಟನೆ ಮಾಡಲಾಗುವುದು ಎಂದು ರೈತ ಹೋರಾಟಗಾರ ಕುರುಬೂರು ಶಾಂತಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರ್ಮಾಣ ಮಾಡಿರುವ ಟೂಲ್ ಸುಂಕ ವಸೂಲಿ ಕೇಂದ್ರಗಳಲ್ಲಿ ರೈತರಿಗೆ, ರೈತರ ವಾಹನಗಳಿಗೆ ವಸೂಲಿ ಕಿರುಕುಳ ಹೆಚ್ಚುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರೈತರ ವಾಹನಗಳಿಗೆ ವಿನಾಯಿತಿ ನೀಡಿದರು ಸಹ ಕಬ್ಬು ಬತ್ತ ಹಣ್ಣು ತರಕಾರಿ ಸಾಗಾಣಿಕೆ ವಾಹನಗಳ ಹಾಗೂ ರೈತ ಮುಖಂಡರ ವಾಹನಗಳ ತಡೆ ಮಾಡಿ ಬಲತ್ಕಾರ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ವಾಹನ ಖರೀದಿ ಸಮಯದಲ್ಲಿ ತೆರಿಗೆ ಕಟ್ಟಿ ಮತ್ತೇ ಟೋಲ್ ಶುಲ್ಕ ಪಾವತಿಸುವ ಪರಿಸ್ಥಿತಿ ಎದುರಾಗಿದೆ. 8 ಕಿಮೀ ವ್ಯಾಪ್ತಿಯಲ್ಲಿ ಟೋಲ್ ಸಂಗ್ರಹಿಸದಂತೆ ಕೃಷಿ ಉತ್ಪನ್ನಗಳ ಸಾಗಾಣಿಕೆ ವಾಹನಗಳಲ್ಲಿ ಟೋಲ್ ಸಂಗ್ರಹಿಸದಂತೆ ವಿನಾಯ್ತಿ ನೀಡಲಾಗಿದೆ. ಆದರೂ ಟೋಲ್ ಸಂಗ್ರಹಿಸಲಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಣ್ಮುಚ್ಚಿಕುಳಿತಿದೆ ಎಂದು ದೂರಿದರು.

ಕೆಲವು ಕಡೆ ಹೆದ್ದಾರಿಗಳಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಮಾಡಿಲ್ಲ. ಮೂಲಭೂತ ಸೌಕರ್ಯಗಳಿಲ್ಲ ಈ ಬಗ್ಗೆ ಗಮನ ಹರಿಸದೆ ಕಾನೂನು ಬಾಹಿರವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ. ಪಂಜಾಬ್ ಸರಕಾರ ಸುಂಕ ವಸೂಲಿ ಕೇಂದ್ರಗಳನ್ನು ರದ್ದು ಮಾಡಿದ ರೀತಿ ಕರ್ನಾಟಕದಲ್ಲಿಯೂ ರದ್ದು ಮಾಡಬೇಕು ಎಂದು ಪ್ರತಿಭಟನೆಯ ಮೂಲಕ ಒತ್ತಾಯ ಮಾಡುವುದಾಗಿ ತಿಳಿಸಿದರು.

## ಮಂಡ್ಯ ಜಿಲ್ಲೆ ತಂಬಾಕು ಮುಕ್ತ ಜಿಲ್ಲೆಯಾಗಿಸಿ: ಎಂ.ಆನಂದ್

**ಮಂಡ್ಯ:** ತಂಬಾಕು ಸೇವನೆಯು ಯುವಜನರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದ್ದು, ಯುವಕರಲ್ಲಿ ಅದರ ಅಪಾಯಗಳ ಕುರಿತು ಜಾಗೃತಿ ಮೂಡಿಸುವುದು ಅಗತ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಆನಂದ್ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂಬಾಕು ಸೇವನೆಯಿಂದ ಅಸ್ತಮಾ, ಬ್ರಾಂಕೈಟಿಸ್, ಉಸಿರಾಟದ ತೊಂದರೆ ಹಾಗೂ ಶ್ವಾಸಕೋಶದ ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳ ಅಪಾಯ ಹೆಚ್ಚುತ್ತದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಅನಧಿಕೃತವಾಗಿ ತಂಬಾಕು ಮಾರಾಟ ನಡೆಯುವ ಸ್ಥಳಗಳನ್ನು ಗುರುತಿಸಿ, ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಮಂಡ್ಯ ಜಿಲ್ಲೆಯನ್ನು




ತಂಬಾಕು ಮುಕ್ತ ಹಾಗೂ ಡ್ರಗ್ ಮುಕ್ತ ಜಿಲ್ಲೆಯನ್ನಾಗಿ ರೂಪಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯ ವೈದ್ಯೆ ಡಾ.ಜೆ.ಡಿ.ಸ್ಮಿತಾ ಮಾತನಾಡಿ, ತಂಬಾಕು ಸೇವನೆಯು ಹೃದಯಾಘಾತ, ಪಾರ್ಶ್ವವಾಯು, ಶ್ವಾಸಕೋಶದ ಕ್ಯಾನ್ಸರ್ ಹಾಗೂ ಇತರೆ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗುತ್ತದೆ ಎಂದು ಎಚ್ಚರಿಸಿದರು. ಪರೋಕ್ಷ ಧೂಮಪಾನದಿಂದ ಮಕ್ಕಳಲ್ಲಿಯೂ ಅಸ್ತಮಾ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು. ತಂಬಾಕಿನಲ್ಲಿರುವ ನಿಕೋಟಿನ್ ರಕ್ತನಾಳಗಳನ್ನು ಸಂಕುಚಿತಗೊಳಿಸಿ ರಕ್ತದೊತ್ತಡ ಹೆಚ್ಚಿಸುವುದರೊಂದಿಗೆ ಹೃದಯ ಸಂಬಂಧಿ ಕಾಯಿಲೆಗಳ ಅಪಾಯವನ್ನೂ ಹೆಚ್ಚಿಸುತ್ತದೆ. ಬಾಯಿ, ಗಂಟಲು, ಅನ್ನನಾಳ, ಶ್ವಾಸಕೋಶ ಹಾಗೂ ಮೂತ್ರಕೋಶ ಕ್ಯಾನ್ಸರ್‌ಗಳಿಗೆ ತಂಬಾಕು ಪ್ರಮುಖ ಕಾರಣವಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ತಂಬಾಕು ನಿಯಂತ್ರಣ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಳವಳ್ಳಿ ತಾಲ್ಲೂಕು ಕಛೇರಿಗೆ ಜಿಲ್ಲಾಧಿಕಾರಿಗಳ ಅನಿರೀಕ್ಷಿತ ಭೇಟಿ




**ಮಂಡ್ಯ:** ಜಿಲ್ಲಾಧಿಕಾರಿ ಡಾ ಕುಮಾರ ಅವರು ಬುಧವಾರ ಮಳವಳ್ಳಿ ತಾಲ್ಲೂಕು ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕು ಕಚೇರಿಯ ವಿವಿಧ ಶಾಖೆಗಳ ಕಾರ್ಯನಿರ್ವಹಣೆ, ಕಡತ ವಿಲೇವಾರಿ ಪ್ರಗತಿ, ಸಿಬ್ಬಂದಿಗಳ ಹಾಜರಾತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನವನ್ನು ಪರಿಶೀಲಿಸಿದರು.


ಕಚೇರಿಯಲ್ಲಿ ಹಾಜರಿದ್ದ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಅವುಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸುವಂತೆ ತಹಶೀಲ್ದಾರ್ ಅವರಿಗೆ ಸೂಚಿಸಿದರು.

ಸರ್ಕಾರದಿಂದ ಇ–ಆಫೀಸ್ ತಂತ್ರಾಂಶವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಈಗಾಗಲೇ ಹಲವಾರು ಬಾರಿ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಇ–ಆಫೀಸ್ ನಲ್ಲಿಯೇ ಕಡ್ಡಾಯವಾಗಿ ಡತಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಿ, ಡಿಜಿಟಲ್ ಕಾರ್ಯ ವಿಧಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿದರು, ಇ–ಆಫೀಸ್ ಅನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದ್ದಿದ್ದಲ್ಲಿ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಹಶೀಲ್ದಾರ್ ರವರಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ಸರ್ಕಾರವು ಆಧುನೀಕರಣ ಹಾಜರಾತಿ ವ್ಯವಸ್ಥೆಯ (KAASMS) ಕರ್ತವ್ಯ ಆಪ್ ಅನ್ನು ಕಡ್ಡಾಯವಾಗಿ ಡೌನ್ ಲೋಡ್ ಮಾಡಿಕೊಂಡು, ಇ–ಹಾಜರಾತಿಯನ್ನು ದಾಖಲಿಸಲು ಸೂಚಿಸಿದರು. ಮಳವಳ್ಳಿ ತಾಲ್ಲೂಕಿನಲ್ಲಿ ಇನ್ನೂ 26,188 ಇ–ಪೌತಿ ಖಾತೆ ಪ್ರಕರಣಗಳು ಬಾಕಿಯಿದ್ದು, ತುರ್ತಾಗಿ ಕಾನೂನುಬದ್ಧ ವಾರಸುದಾರರಿಗೆ ಖಾತೆ ಬದಲಾವಣೆಯನ್ನು ಮಾಡುವಂತೆ ಸೂಚಿಸಿದರು. 48,392 ಆಧಾರ್ ಸೀಡಿಂಗ್ ಬಾಕಿಯಿದ್ದು, ತಾಲ್ಲೂಕಿನ ಗ್ರಾಮ ಆಡಳಿತ ಅಧಿಕಾರಿಗಳು ಬಾಕಿಯಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಸೂಚಿಸಿದರು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಫಾರಂ 01 ರಿಂದ 05, ಲ್ಯಾಂಡ್ ಬೀಟ್, ಬಗರ್ ಹುಕುಂ, ತಹಶೀಲ್ದಾರ್ ನ್ಯಾಯಾಲಯ ಪ್ರಕರಣಗಳು, ಭೂಸುರಕ್ಷಾ, ಆರ್ ಆರ್ ಟಿ ತಿದ್ದುಪಡಿ, ಕಂದಾಯ ಗ್ರಾಮ ರಚನೆ, ಸಕಾಲ, ದರ್ಖಾಸ್ತು ಪೋಡಿ, ಸರ್ವೆ ಕಾರ್ಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರನ್ನು ಕಛೇರಿಗೆ ಪದೇ ಪದೇ ಅಲೆಸದೇ ನ್ಯಾಯಸಮ್ಮತವಾಗಿ ಸೇವೆಯನ್ನು ನೀಡುವಂತೆ ತಿಳಿಸಿದರು.

## `ಹಟ್ಟಿಯಿಂದ ಹೈಕೋರ್ಟ್‌ವರೆಗೆ'



। ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 46

ಬದುಕಿನ ಹಾದಿಯಲ್ಲಿ ಎದುರಾಗುವ ಸವಾಲುಗಳು ಮನುಷ್ಯನನ್ನು ಕುಗ್ಗಿಸಬಾರದು, ಬದಲಾಗಿ ಸಾಧನೆಯ ಹಸಿವನ್ನು ಹೆಚ್ಚಿಸಬೇಕು ಎಂಬುದಕ್ಕೆ ರಾಜಸ್ಥಾನದ ಸೋನಲ್ ಶರ್ಮಾ ಅವರ ಯಶೋಗಾಥೆಯೇ ಸಾಕ್ಷಿ. ಉದಯಪುರದ ಹಟ್ಟಿಯೊಂದರಲ್ಲಿ ತಂದೆಯ ಜೊತೆ ಹೈನುಗಾರಿಕೆಯಲ್ಲಿ ನೆರವಾಗುತ್ತಾ ಬೆಳೆದ ಈ ಹೆಣ್ಣುಮಗಳು, ಇಂದು ನ್ಯಾಯಾಂಗ ಪೀಠದ ಮೇಲೆ ವಿರಾಜಮಾನರಾಗಿರುವುದು ಶ್ರಮ ಸಂಸ್ಕೃತಿಗೆ ಸಂದ ಜಯ.

ಸೋನಲ್ ಅವರ ಯಶಸ್ಸಿನ ಹಿಂದಿರುವುದು ಕೇವಲ ಪಠ್ಯದ ಓದಲ್ಲ, ಬದಲಾಗಿ ಬೆವರ ಹನಿಗಳ ಇತಿಹಾಸ. ಸೌಲಭ್ಯಗಳ ಕೊರತೆಯ ನಡುವೆಯೂ ದೃಢ ಸಂಕಲ್ಪದೊಂದಿಗೆ ವಿದ್ಯಾಭ್ಯಾಸ ಮುಂದುವರಿಸಿದ ಅವರು, ಕಾನೂನು ಪದವಿಯಲ್ಲಿ



ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡ ಪ್ರತಿಭಾವಂತೆ. ಮದುವೆಯ ನಂತರ ಹೆಣ್ಣುಮಕ್ಕಳ ಕನಸುಗಳು ಕಮರಿಹೋಗುತ್ತವೆ ಎಂಬ ನಂಬಿಕೆಯನ್ನು ಸೋನಲ್ ಸುಳ್ಳಾಗಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರ ಮಾವನವರು ನೀಡಿದ ಅಭೂತಪೂರ್ವ ಪ್ರೋತ್ಸಾಹ. ಮನೆಗೆಲಸದ ಚಿಂತೆ ಬಿಡು, ನಿನ್ನ ಗುರಿಯತ್ತ ಗಮನಹರಿಸು ಎಂದು ಬೆನ್ನೆಲುಬಾಗಿ ನಿಂತ ಆ ಹಿರಿಯ ಜೀವದ ಆಶಯ ಮತ್ತು ಸೋನಲ್ ಅವರ ಏಕಾಗ್ರತೆ ಇಂದು ಸಾಕಾರಗೊಂಡಿದೆ.

ಮದುವೆಯಾದ ಏಳು ವರ್ಷಗಳ ನಂತರ, ಕೌಟುಂಬಿಕ ಜವಾಬ್ದಾರಿಗಳ ಸುಳಿಯ ನಡುವೆಯೇ ರಾಜಸ್ಥಾನ ನ್ಯಾಯಾಂಗ ಸೇವೆಯಲ್ಲಿ (ಆರ್ ಜೆ ಎಸ್) ಸಿವಿಲ್ ಜಡ್ಜ್ ಆಗಿ ಆಯ್ಕೆಯಾಗಿರುವ ಸೋನಲ್ ಅವರ ಪಯಣ ಅದ್ಭುತ.

ಇಂದಿನ ಯುವ ಪೀಳಿಗೆಗೆ ಇವರ ಬದುಕು ಒಂದು ದಿವ್ಯ ಸಂದೇಶ ಸಂಕಲ್ಪ ದೃಢವಾಗಿದ್ದರೆ ಬಡತನದ ಬೇಲಿಗಳು ನಿಮ್ಮನ್ನು ಬಂಧಿಸಲಾರವು ಮತ್ತು ಪ್ರೋತ್ಸಾಹಿಸುವ ಕುಟುಂಬವಿದ್ದರೆ ಸಾಧನೆಯ ಶಿಖರ ಏರುವುದು ಅಸಾಧ್ಯವಲ್ಲ. ಸೋನಲ್ ಶರ್ಮಾ ಅವರ ಈ ಯಶೋಗಾಥೆ ಕೇವಲ ವೈಯಕ್ತಿಕ ಗೆಲುವಲ್ಲ; ಇದು ಸತತ ಪರಿಶ್ರಮ, ತಾಳ್ಮೆ ಮತ್ತು ಸಂಸ್ಕಾರಕ್ಕೆ ದಕ್ಕಿದ ಪವಿತ್ರ ಗೌರವ. ಇವರ ಸಾಧನೆಯ ಹಾದಿ ಕನಸು ಕಾಣುವ ಸಾವಿರಾರು ಯುವಮನಸುಗಳಿಗೆ ಸ್ಫೂರ್ತಿಯ ದೀವಿಗೆಯಾಗಿದೆ.

# ಕಾಲೇಜು ಪ್ರವೇಶಕ್ಕೆ ಅಂಕಗಳೇ ಮಾನದಂಡ?
## ಕಾಲೇಜು ಮತ್ತು ಶಿಕ್ಷಕರ ಪಾತ್ರವೇನು?



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಶಿಕ್ಷಣ ಎನ್ನುವುದು ಕೇವಲ ಅಂಕಗಳನ್ನು ಗಳಿಸುವ ಯಂತ್ರವಲ್ಲ; ಅದು ಮನುಷ್ಯನನ್ನು ರೂಪಿಸುವ, ವ್ಯಕ್ತಿತ್ವವನ್ನು ಬೆಳೆಸುವ ಮತ್ತು ಸಮಾಜಕ್ಕೆ ಜವಾಬ್ದಾರಿಯುತ ನಾಗರಿಕರನ್ನು ನೀಡುವ ಮಹತ್ತರ ಪ್ರಕ್ರಿಯೆಯಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಹಾಗೂ ಕಾಲೇಜುಗಳು ಪ್ರವೇಶಕ್ಕಾಗಿ 80?90% ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಮುಖ್ಯ ಮಾನದಂಡವನ್ನಾಗಿ ಮಾಡಿಕೊಂಡಿರುವುದು ಒಂದು ಮಹತ್ವದ ಪ್ರಶ್ನೆಯನ್ನು ಹುಟ್ಟುಹಾಕಿದೆ. ಅಂಕಗಳೇ ಎಲ್ಲವನ್ನೂ ನಿರ್ಧರಿಸುವುದಾದರೆ, ಶಾಲೆಗಳು, ಕಾಲೇಜುಗಳು ಮತ್ತು ಶಿಕ್ಷಕರ ಪಾತ್ರವೇನು?

ಒಬ್ಬ ವಿದ್ಯಾರ್ಥಿ ಶಾಲೆಗೆ ಸೇರುವ ದಿನದಿಂದ ಹಿಡಿದು ಕಾಲೇಜು ಪ್ರವೇಶ ಪಡೆಯುವವರೆಗೂ ಅನೇಕ ವರ್ಷಗಳ ಕಾಲ ಶಿಕ್ಷಕರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆಯುತ್ತಾನೆ. ಆ ಅವಧಿಯಲ್ಲಿ ಶಿಕ್ಷಕರು ಕೇವಲ ಪಾಠಗಳನ್ನು ಬೋಧಿಸುವುದಲ್ಲ; ಶಿಸ್ತು, ಮೌಲ್ಯಗಳು, ಸಾಮಾಜಿಕ ಜವಾಬ್ದಾರಿ, ನೈತಿಕತೆ, ಆತ್ಮವಿಶ್ವಾಸ ಮತ್ತು ಜೀವನ ಕೌಶಲ್ಯಗಳನ್ನು ಕಲಿಸುತ್ತಾರೆ. ಆದರೆ ಕೊನೆಗೆ ಎಲ್ಲವನ್ನೂ ಕೆಲವು ಅಂಕಗಳ ಆಧಾರದ ಮೇಲೆ ಮಾತ್ರ ಅಳೆಯುವುದಾದರೆ, ಶಿಕ್ಷಣದ ಮೂಲ ಉದ್ದೇಶವೇ ಮಸುಕಾಗುತ್ತದೆ.

ಒಂದು ಪರೀಕ್ಷೆಯ ಫಲಿತಾಂಶ ವಿದ್ಯಾರ್ಥಿಯ ಜ್ಞಾನವನ್ನು ಭಾಗಶಃ ಮಾತ್ರ ತೋರಿಸುತ್ತದೆ. ಪರೀಕ್ಷೆ ಎನ್ನುವುದು ನಿರ್ದಿಷ್ಟ ಸಮಯದಲ್ಲಿ, ನಿರ್ದಿಷ್ಟ ಪ್ರಶ್ನೆಗಳಿಗೆ ವಿದ್ಯಾರ್ಥಿ ನೀಡುವ ಉತ್ತರಗಳ ಮೌಲ್ಯಮಾಪನ. ಆದರೆ ಜೀವನದಲ್ಲಿ ಯಶಸ್ಸು ಸಾಧಿಸಲು ಬೇಕಾಗಿರುವ ಸೃಜನಶೀಲತೆ, ನಾಯಕತ್ವ, ಸಮಸ್ಯೆ ಪರಿಹಾರ ಕೌಶಲ್ಯ, ಸಂವಹನ ಸಾಮರ್ಥ್ಯ, ಮಾನವೀಯತೆ ಮತ್ತು ಧೈರ್ಯವನ್ನು ಕೇವಲ ಅಂಕಗಳಿಂದ ಅಳೆಯಲು ಸಾಧ್ಯವಿಲ್ಲ.

ಇತಿಹಾಸವನ್ನು ಗಮನಿಸಿದರೆ, ಸಮಾಜದ ಅನೇಕ ಮಹಾನ್ ವ್ಯಕ್ತಿಗಳು ಶಾಲಾ ಜೀವನದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದವರಾಗಿರಲಿಲ್ಲ. ಆದರೆ ಅವರ ಚಿಂತನೆ, ಪರಿಶ್ರಮ, ಹೊಸತನ ಮತ್ತು ಜೀವನದ ದೃಷ್ಟಿಕೋನವು ಅವರನ್ನು ಯಶಸ್ಸಿನ ಶಿಖರಕ್ಕೆ ಕೊಂಡೊಯ್ದಿತು. ಇದರಿಂದ ಅಂಕಗಳು ಮುಖ್ಯವಾದರೂ, ಅವು ಯಶಸ್ಸಿನ ಏಕೈಕ ಮಾನದಂಡವಲ್ಲ ಎಂಬುದು ಸ್ಪಷ್ಟವಾಗುತ್ತದೆ.

80?90% ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮಾತ್ರ ಉತ್ತಮರು ಎಂಬ ಕಲ್ಪನೆ ಅಪಾಯಕಾರಿಯಾಗಿದೆ. ಏಕೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲು ವಿಭಿನ್ನ ಪ್ರತಿಭೆಗಳು ಅಡಗಿರುತ್ತವೆ. ಕೆಲವರು ಗಣಿತದಲ್ಲಿ ನಿಪುಣರಾಗಿದ್ದರೆ, ಕೆಲವರು ಸಾಹಿತ್ಯದಲ್ಲಿ, ಇನ್ನು ಕೆಲವರು ಕ್ರೀಡೆ, ಸಂಗೀತ, ಚಿತ್ರಕಲೆ ಅಥವಾ ತಾಂತ್ರಿಕ ಕೌಶಲ್ಯಗಳಲ್ಲಿ ಅದ್ಭುತ ಸಾಮರ್ಥ್ಯ ಹೊಂದಿರುತ್ತಾರೆ. ಅಂಕಗಳ ಆಧಾರದ ಮೇಲೆ ಮಾತ್ರ ವಿದ್ಯಾರ್ಥಿಗಳನ್ನು ಅಳೆಯುವುದು ಅವರ ಪ್ರತಿಭೆಗಳಿಗೆ ಅನ್ಯಾಯ ಮಾಡುವಂತಾಗಿದೆ.

ಇಂದು ಅನೇಕ ವಿದ್ಯಾರ್ಥಿಗಳು ಕಲಿಯುವುದಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯುವ ಒತ್ತಡದಲ್ಲಿದ್ದಾರೆ. ಪಾಠದ ಅರ್ಥವನ್ನು ಗ್ರಹಿಸುವುದಕ್ಕಿಂತ, ಪರೀಕ್ಷೆಯಲ್ಲಿ ಬರೆಯಲು ಅಗತ್ಯವಿರುವ ಮಾಹಿತಿಯನ್ನು ಕಂಠಪಾಠ ಮಾಡುವುದು ಮುಖ್ಯವಾಗುತ್ತಿದೆ. ಇದರ ಪರಿಣಾಮವಾಗಿ ಶಿಕ್ಷಣವು ಜ್ಞಾನಾರ್ಜನೆಯ ಮಾರ್ಗವಾಗದೆ, ಅಂಕಗಳ ಸ್ಪರ್ಧೆಯಾಗಿ ಪರಿವರ್ತಿತವಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರ ಪಾತ್ರ ಇನ್ನಷ್ಟು ಮಹತ್ವ ಪಡೆದುಕೊಳ್ಳುತ್ತದೆ. ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಗೆ ಪಾಠವನ್ನಷ್ಟೇ ಕಲಿಸುವುದಿಲ್ಲ; ಅವನೊಳಗಿನ ಸಾಮರ್ಥ್ಯವನ್ನು ಗುರುತಿಸಿ ಬೆಳೆಸುತ್ತಾನೆ. ಆತ್ಮವಿಶ್ವಾಸ ಕಳೆದುಕೊಂಡ ವಿದ್ಯಾರ್ಥಿಗೆ ಧೈರ್ಯ ತುಂಬುತ್ತಾನೆ. ವಿಫಲತೆಯನ್ನು ಎದುರಿಸಲು ಶಕ್ತಿ ನೀಡುತ್ತಾನೆ. ಜೀವನದ ಮೌಲ್ಯಗಳನ್ನು ತಿಳಿಸುತ್ತಾನೆ. ಇಂತಹ ಅಮೂಲ್ಯ ಕಾರ್ಯವನ್ನು ಯಾವುದೇ ಅಂಕಪಟ್ಟಿ ಮಾಡಲಾರದು.

ಕಾಲೇಜುಗಳ ಉದ್ದೇಶವು ಕೇವಲ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಾಗಿರಬಾರದು. ಶಿಕ್ಷಣ ಸಂಸ್ಥೆಗಳು ಪ್ರತಿಭೆಯನ್ನು ಗುರುತಿಸುವ ಕೇಂದ್ರಗಳಾಗಬೇಕು. ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯ, ಸೃಜನಶೀಲತೆ, ನಾಯಕತ್ವ ಗುಣಗಳು, ಸಾಮಾಜಿಕ ಅರಿವು ಮತ್ತು ಕಲಿಯುವ ಆಸಕ್ತಿಯನ್ನು ಪರಿಗಣಿಸುವ ವ್ಯವಸ್ಥೆಗಳು ಬೆಳೆಬೇಕು. ಆಗ ಮಾತ್ರ ಶಿಕ್ಷಣದ ನಿಜವಾದ ಅರ್ಥ ಸಾರ್ಥಕವಾಗುತ್ತದೆ.

ಒಬ್ಬ ವಿದ್ಯಾರ್ಥಿ 95% ಅಂಕ ಪಡೆದಿರಬಹುದು. ಆದರೆ ಸಮಾಜದ ಸಮಸ್ಯೆಗಳ ಬಗ್ಗೆ ಅರಿವು ಇಲ್ಲದಿರಬಹುದು. ಮತ್ತೊಬ್ಬ ವಿದ್ಯಾರ್ಥಿ 70% ಅಂಕ ಪಡೆದಿರಬಹುದು. ಆದರೆ ಅವನಲ್ಲಿ ನಾಯಕತ್ವ ಗುಣ, ಮಾನವೀಯತೆ ಮತ್ತು ಸಮಸ್ಯೆ ಪರಿಹರಿಸುವ ಸಾಮರ್ಥ್ಯ ಅಪಾರವಾಗಿರಬಹುದು. ಭವಿಷ್ಯದಲ್ಲಿ ಸಮಾಜಕ್ಕೆ ಹೆಚ್ಚು ಕೊಡುಗೆ ನೀಡುವ ವ್ಯಕ್ತಿ ಯಾರು ಎಂಬುದನ್ನು ಅಂಕಗಳು ಮಾತ್ರ ನಿರ್ಧರಿಸಲು ಸಾಧ್ಯವಿಲ್ಲ.

ಇಂದಿನ ಜಗತ್ತಿನಲ್ಲಿ ಉದ್ಯೋಗ ಕ್ಷೇತ್ರವು ಬದಲಾಗುತ್ತಿದೆ. ಸಂಸ್ಥೆಗಳು ಕೇವಲ ಅಂಕಗಳನ್ನು ನೋಡುವುದಿಲ್ಲ. ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ, ಸಂವಹನ ಕೌಶಲ್ಯ, ಹೊಸ ಆಲೋಚನೆಗಳನ್ನು ರೂಪಿಸುವ ಶಕ್ತಿ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಸವಾಲುಗಳನ್ನು ಎದುರಿಸುವ ಮನೋಭಾವವನ್ನು ಹೆಚ್ಚಾಗಿ ಪರಿಗಣಿಸುತ್ತಿವೆ. ಇವೆಲ್ಲವನ್ನು ಬೆಳೆಸುವಲ್ಲಿ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರ ಅನನ್ಯವಾಗಿದೆ.

ಅಂಕಗಳನ್ನು ಸಂಪೂರ್ಣವಾಗಿ ಕಡೆಗಣಿಸಬೇಕು ಎಂಬುದಲ್ಲ. ಅಂಕಗಳು ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯನ್ನು ಸೂಚಿಸುವ ಒಂದು ಪ್ರಮುಖ ಅಂಶ. ಆದರೆ ಅದನ್ನೇ ಏಕೈಕ ಮಾನದಂಡವನ್ನಾಗಿ ಮಾಡುವುದು ಸರಿಯಲ್ಲ. ಶಿಕ್ಷಣವು ಅಂಕಗಳಿಗಿಂತ ದೊಡ್ಡದು. ಅದು ವ್ಯಕ್ತಿತ್ವ ನಿರ್ಮಾಣದ ಪ್ರಕ್ರಿಯೆ.



ಶಾಲೆಗಳು ಮತ್ತು ಕಾಲೇಜುಗಳು ವಿದ್ಯಾರ್ಥಿಗಳಲ್ಲಿರುವ ವಿವಿಧ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಕ್ರೀಡೆ, ಕಲೆ, ವಿಜ್ಞಾನ ಸಂಶೋಧನೆ, ಸಾಮಾಜಿಕ ಸೇವೆ, ನಾಯಕತ್ವ ಕಾರ್ಯಕ್ರಮಗಳು ಮತ್ತು ಸೃಜನಾತ್ಮಕ ಚಟುವಟಿಕೆಗಳಿಗೆ ಸಮಾನ ಪ್ರಾಮುಖ್ಯತೆ ನೀಡಬೇಕು. ಇದರಿಂದ ವಿದ್ಯಾರ್ಥಿಗಳು ಸಮಗ್ರವಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಶಿಕ್ಷಕರು ಸಮಾಜದ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳು. ಅವರು ಕೇವಲ ಪುಸ್ತಕದ ಜ್ಞಾನವನ್ನು ನೀಡುವುದಿಲ್ಲ; ಜೀವನದ ಪಾಠಗಳನ್ನು ಕಲಿಸುತ್ತಾರೆ. ಒಬ್ಬ ವೈದ್ಯ, ಇಂಜಿನಿಯರ್, ವಿಜ್ಞಾನಿ, ನ್ಯಾಯಾಧೀಶ ಅಥವಾ ರಾಜಕಾರಣಿಯ ಹಿಂದೆ ಒಬ್ಬ ಶಿಕ್ಷಕರ ಶ್ರಮ ಅಡಗಿರುತ್ತದೆ. ಆದ್ದರಿಂದ ಶಿಕ್ಷಕರ ಪಾತ್ರವನ್ನು ಅಂಕಗಳ ಮೂಲಕ ಅಳೆಯಲು ಸಾಧ್ಯವಿಲ್ಲ.

ಇಂದು ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯವಿರುವುದು ಅಂಕಗಳ ಆರಾಧನೆಯಲ್ಲ; ಜ್ಞಾನದ ಗೌರವ. ವಿದ್ಯಾರ್ಥಿಯ ಮೌಲ್ಯವನ್ನು ಅಂಕಪಟ್ಟಿಯಲ್ಲಿರುವ ಸಂಖ್ಯೆಗಳ ಮೂಲಕವಲ್ಲ, ಅವನ ವ್ಯಕ್ತಿತ್ವ, ಸಾಮರ್ಥ್ಯ ಮತ್ತು ಸಮಾಜಕ್ಕೆ ನೀಡುವ ಕೊಡುಗೆಯ ಮೂಲಕ ಅಳೆಯಬೇಕು. ಆಗ ಮಾತ್ರ ಶಿಕ್ಷಣದ ನಿಜವಾದ ಉದ್ದೇಶ ಈಡೇರುತ್ತದೆ.

80?90% ಅಂಕಗಳೇ ಕಾಲೇಜು ಪ್ರವೇಶದ ಮಾನದಂಡವಾದರೆ, ಶಿಕ್ಷಣದ ವರ್ಷಗಳ ಪಯಣ, ಶಿಕ್ಷಕರ ಮಾರ್ಗದರ್ಶನ, ವಿದ್ಯಾರ್ಥಿಯ ಸೃಜನಶೀಲತೆ ಮತ್ತು ವ್ಯಕ್ತಿತ್ವ ಬೆಳವಣಿಗೆ ಎಲ್ಲವೂ ಎರಡನೇ ಸ್ಥಾನಕ್ಕೆ ತಳ್ಳಲ್ಪಡುತ್ತವೆ. ಅಂಕಗಳು ಮುಖ್ಯ, ಆದರೆ ಅವು ಅಂತಿಮ ಸತ್ಯವಲ್ಲ. ಶಿಕ್ಷಣದ ಗುರಿ ಉತ್ತಮ ಅಂಕಗಳಿಗಿಂತ ಉತ್ತಮ ಮನುಷ್ಯರನ್ನು ರೂಪಿಸುವುದಾಗಿರಬೇಕು.

ಕೊನೆಯಲ್ಲಿ ಹೇಳುವುದಾದರೆ, ಒಂದು ಅಂಕಪಟ್ಟಿ ವಿದ್ಯಾರ್ಥಿಯ ಸಾಧನೆಯನ್ನು ತೋರಿಸಬಹುದು; ಆದರೆ ಅವನ ಕನಸುಗಳನ್ನು, ಹೋರಾಟವನ್ನು, ಮೌಲ್ಯಗಳನ್ನು, ಪ್ರತಿಭೆಯನ್ನು ಮತ್ತು ಮಾನವೀಯತೆಯನ್ನು ಅಳೆಯಲು ಸಾಧ್ಯವಿಲ್ಲ. ಆದ್ದರಿಂದ ಶಿಕ್ಷಣ ವ್ಯವಸ್ಥೆ ಅಂಕಗಳನ್ನು ಗೌರವಿಸಲಿ, ಆದರೆ ವಿದ್ಯಾರ್ಥಿಯ ಸಂಪೂರ್ಣ ವ್ಯಕ್ತಿತ್ವವನ್ನು ಇನ್ನಷ್ಟು ಗೌರವಿಸಲಿ. ಆಗ ಮಾತ್ರ ಶಿಕ್ಷಕರ ಶ್ರಮಕ್ಕು, ಶಿಕ್ಷಣದ ಉದ್ದೇಶಕ್ಕು ಮತ್ತು ವಿದ್ಯಾರ್ಥಿಗಳ ಭವಿಷ್ಯಕ್ಕೂ ನಿಜವಾದ ಅರ್ಥ ಸಿಗುತ್ತದೆ.

ಅಂಕಗಳು ವಿದ್ಯಾರ್ಥಿಯ ಸಾಮರ್ಥ್ಯದ ಒಂದು ಭಾಗವನ್ನು ಮಾತ್ರ ತೋರಿಸುತ್ತವೆ; ಆದರೆ ಶಿಕ್ಷಕರು ರೂಪಿಸುವ ವ್ಯಕ್ತಿತ್ವವೇ ಅವನ ಸಂಪೂರ್ಣ ಭವಿಷ್ಯವನ್ನು ನಿರ್ಧರಿಸುತ್ತದೆ.



---

# ಮಕ್ಕಳಿಗೆ ಶಿಕ್ಷಣದ ಪ್ರಾಮುಖ್ಯತೆ



| ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

ಪ್ರತಿಯೊಬ್ಬ ಮಗುವಿಗೂ ಪೋಷಕರ ಸಂಬಂಧ ಬಹಳ ಅಮೂಲ್ಯವೂ ಪ್ರಮುಖವೂ ಆಗಿದೆ.ಈ ಸಂಬಂಧ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಬಹಳಷ್ಟು ಪ್ರಭಾವ ಬೀರುತ್ತದೆ.ಪ್ರತೀ ಮಗುವಿನ ಶಿಕ್ಷಣ ಪ್ರಾರಂಭವಾಗುವದೇ ತನ್ನ ಸುತ್ತಲಿನ ಪರಿಸರದ ವೀಕ್ಷಣೆ,ಸದ್ದುಗದ್ದಲಗಳ ಆಲಿಸುವಿಕೆ,ತನ್ನ ಸುತ್ತಲಿರುವವರು ನಡೆಸುವ ಚಟುವಟಿಕೆಗಳ ಅನುಕರಣೆ ಮಾಡುವ ಮೂಲಕ .ಮಗು ಈ ಕ್ರಿಯೆಗಳನ್ನು ಪ್ರಾರಂಭಿಸುವದು ಪೋಷಕರ ಜೊತೆಯಲ್ಲಿಯೇ.

ಮಗುವಿನ ಯೋಚನಾಶಕ್ತಿ ಹಾಗೂ ಸಮಾಜದಲ್ಲಿ ಬದುಕಲು ಬೇಕಾಗುವ ಕೌಶಲಗಳು ಮಗುವೊಂದು ಶಾಲೆಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಹೊಂದಲು ಬೇಕಾಗುವಂತಹ ಕೌಶಲಗಳಾಗಿವೆ.ಮಕ್ಕಳು ಕೌಶಲಗಳನ್ನು ಗಳಿಸಿಕೊಳ್ಳುವಲ್ಲಿ ಪೋಷಕರ ಪಾತ್ರ ಮುಖ್ಯವಾದುದು.ಇದನ್ನು ನಾವು ಪೋಷಕರ ಜವಾಬ್ದಾರಿ ಎಂದುಕೂಡ ಕರೆಯಬಹುದು.

**ಪೋಷಕರ ಪಾತ್ರ:** ಮಗುವಿನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗಳ ಬಗ್ಗೆ ಕಾಳಜಿ ಯಾವ ಪೋಷಕರು ವಹಿಸುತ್ತಾರೋ ಅದು ಮಕ್ಕಳಿಗೆ ಪೂರಕವಾಗಿರುತ್ತದೆ.ಅದನ್ನು ಹಲವು ರೀತಿಯಲ್ಲಿ ಗಮನಿಸಬಹುದಾಗಿದೆ.

1.ಉತ್ತೇಜಿಸುವ ನಾಯಕ.

2.ಸ್ನೇಹಿತ ಅಥವಾ ಸ್ನೇಹಿತೆ

3.ಶಿಕ್ಷಕ

4.ಸ್ಫೂರ್ತಿ.

ಪೋಷಕರು ಈ ನಾಲ್ಕು ಪಾತ್ರಗಳ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸರಿಯಾಗಿ ತಿಳಿದುಕೊಂಡಾಗ ನಿಮ್ಮ ಮಗುವನ್ನು ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಿಸಲು ಸಾಧ್ಯವಾಗುತ್ತದೆ.

ಉತ್ತೇಜನ ನೀಡುವ ನಾಯಕ ಅಥವಾ ಲೀಡರ

ಮಕ್ಕಳ ಕಲಿಕೆಗೆ ಮುಖ್ಯವಾಗಿ ಬೇಕಾಗಿರುವದು ಪ್ರೋತ್ಸಾಹ.ಪ್ರೋತ್ಸಾಹವೆಂದರೆ ಅವರು ಕೇಳಿದ ವಸ್ತು ಕೊಡಿಸುವದು ಅಥವಾ ನೀಡುವದಲ್ಲ.ಮಕ್ಕಳನ್ನು ಆಗಾಗ ಪ್ರಶ್ನಿಸುವದು ಅವರ ಅಭಿರುಚಿ ಅರಿಯುವದು ನಾಯಕತ್ವ ಗುಣದಮೊದಲನೇಯ ಲಕ್ಷಣವೆಂದು ಹೇಳಬಹುದು.

ಸ್ನೇಹಿತ ಅಥವಾ ಸ್ನೇಹಿತೆಯಂತೆ ವರ್ತಿಸುವದು

ಓದುವ ಮಕ್ಕಳಿಗೆ ವಿದ್ಯೆಯ ಕಷ್ಟಕರ ವಿಚಾರದಲ್ಲಿ ತೊಡಗಿರುವದು ಎಂದು ಊಹಿಸದೇ ಮಗುವು ತನ್ನ ಶಿಕ್ಷಕರು ಅಥವಾ ಸ್ನೇಹಿತರೊಂದಿಗೆ ಬೆರೆಯುವ ,ವ್ಯವಹರಿಸುವ ವಿಚಾರದಲ್ಲಿ ತೊಂದರೆ ಕಾಣಬಹುದು.ಅವುಗಳನ್ನು ವಿಚಾರಿಸುವ ತಾಳ್ಮೆ ಸ್ವಭಾವ ಸ್ನೇಹಗುಣ ಪೋಷಕರಲ್ಲಿ ಇರಬೇಕು.ನಾವು ಮಕ್ಕಳ ಸ್ನೇಹ ಸಂಪಾದಿಸಿ ಅವರು ನಮ್ಮಲ್ಲಿ ಮುಕ್ತವಾಗಿ ಹಂಚಿಕೊಳ್ಳುವಂತಹ ವಾತಾವರಣ ಸೃಷ್ಟಿಸಬೇಕು.

ಮಕ್ಕಳ ಪಾಲಿಗೆ ಉತ್ತಮ ಶಿಕ್ಷಕಿ ಅಥವಾ ಶಿಕ್ಷಕ

ಕೇವಲ ಶಾಲೆಯಲ್ಲಿ ಶಿಕ್ಷಕರು ಕಲಿಸುವ ಪಾಠ ಸಾಲದು.ಶಿಕ್ಷಣ ಬರೀ ಶಾಲೆಗೆ ಸೀಮಿತವಾದದ್ದಲ್ಲ.ಮಕ್ಕಳ ಮನೆಯ ಪಾಠ,ಪ್ರಾಜೆಕ್ಟ ಕೆಲಸಗಳಲ್ಲಿ ನಾವು ಅವರ ಜೊತೆ ಬೆರೆತು ಮಾಡಿಸುವದು ಅಗತ್ಯವಾಗಿರುತ್ತದೆ.ಮಕ್ಕಳ ಕಲಿಕೆಯು ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿರುವದೂ ಅಷ್ಟೇ ಮುಖ್ಯವಾಗಿದೆ.ಪ್ರತೀ ದಿನ ಮಕ್ಕಳಿಗಾಗಿ ಕೆಲವು ಸಮಯ ಮೀಸಲಾಗಿಡುವದು ಮುಖ್ಯವಾಗಿದೆ.



**ಸ್ಫೂರ್ತಿ**


ಮಕ್ಕಳ ಕೆಲಸದಲ್ಲಿ ಪೋಷಕರ ಸ್ಫೂರ್ತಿ ಮುಖ್ಯವಾಗಿದೆ. ಮಕ್ಕಳಿಗೆ ಸಂತೋಷದಿಂದ ಕೆಲಸ ನಿರ್ವಹಿಸಲು ವಾತಾವರಣ ನಿರ್ಮಿಸಿಕೊಡಬೇಕು.ಕೆಲವೊಮ್ಮೆ ದೃಢ ಮತ್ತು ಕಠಿಣ ನಿಲುವನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಒದಗಿ ಬರಬಹುದು.

ಮಕ್ಕಳ ವಿದ್ಯಾಭ್ಯಾಸದಲ್ಲಿ ಕರ್ತವ್ಯವನ್ನು ಸಕಾರಾತ್ಮಕವಾಗಿ ಪೋಷಕರು ನಿಭಾಯಿಸಿದರೆ ಜೀವನದಲ್ಲಿ ಪೂರಕ ಬದಲಾವಣೆ ತರಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಅಕ್ಷರ ಜ್ಞಾನವೊಂದೇ ಶಿಕ್ಷಣವಲ್ಲ. ಉತ್ತಮಭವಿಷ್ಯ ಕೊಂಡುಕೊಳ್ಳುವಲ್ಲಿ ಸಕಾರಾತ್ಮಕ ವ್ಯಕ್ತಿತ್ವವನ್ನು ರೂಪುಗೊಳಿಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿರುತ್ತದೆ.ಹಿರಿಯರಾದ ಪೋಷಕರು ನುಡಿದಂತೆ ನಡೆದು ಅದೇ ದಾರಿಯಲ್ಲಿ ನಮ್ಮ ಮಕ್ಕಳು ನಡೆಯುವಂತೆ ನೋಡಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಿದೆ.



---

# ಪ್ರತಿಕೂಲತೆಯನ್ನು ಎದುರಿಸುವ ಕಲೆ



ನಮ್ಮ ಬದುಕಿನ ಪಯಣದಲ್ಲಿ ನಾವು ಎದುರಿಸುವ ಅತಿ ದೊಡ್ಡ ಸವಾಲು ಯಾವುದು? ಆರ್ಥಿಕ ಮುಗ್ಗಟ್ಟೇ? ಅನಾರೋಗ್ಯವೇ? ಅಥವಾ ಸಂಬಂಧಗಳ ಬಿರುಕೇ? ಮೇಲ್ನೋಟಕ್ಕೆ ಇವೆಲ್ಲವೂ ದೊಡ್ಡದಾಗಿ ಕಂಡರೂ, ಇವೆಲ್ಲಕ್ಕಿಂತ ಮಿಗಿಲಾದ ಒಂದು ಸವಾಲು ನಮ್ಮ ಮುಂದಿದೆ. ಅದು? "ನಮ್ಮ ಇಚ್ಛೆಗೆ ವಿರುದ್ಧವಾಗಿ ಘಟನೆಗಳು ನಡೆದಾಗ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?" ಎಂಬುದು.

"ಎಲ್ಲಾ ಸಲವೂ ನಮ್ಮ ಪರವಾದ ಸಂಗತಿಗಳೇ ಜರುಗುವುದಿಲ್ಲ... ಪ್ರತಿಕೂಲ ಪ್ರಸಂಗವನ್ನು ಎದುರಿಸಲು ನಮ್ಮ ಮನಸು ಸದಾ ಸಹಜವಾಗಿ ಸನ್ನದ್ಧವಾಗಿರಬೇಕು" . ಇದು ಬದುಕಿನ ಒಂದು ದೊಡ್ಡ ಪಾಠ. ಈ ಲೇಖನದಲ್ಲಿ ನಾವು ಈ ಚಿಂತನೆಯನ್ನು ಆಳವಾಗಿ ವಿಶ್ಲೇಷಿಸೋಣ.

**1. ನಿರೀಕ್ಷೆಯೆಂಬ ಮರಿಚೀಕೆ ಮತ್ತು ವಾಸ್ತವದ ನೆಲೆಗಟ್ಟು:** ಮಾನವ ಸಹಜವಾಗಿ ಸುಖಾಪೇಕ್ಷಿ . ನಮಗೆ ಎಲ್ಲವೂ ಮಂಗಳಕರವಾಗಿಯೇ ನಡೆಯಬೇಕು ಎಂಬ ಹಂಬಲವಿರುತ್ತದೆ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ನಾವು ಹಾಕುವ ಪ್ರತಿಯೊಂದು ಯೋಜನೆಯೂ ಯಶಸ್ವಿಯಾಗಬೇಕು ಎಂದು ಬಯಸುತ್ತೇವೆ. ಆದರೆ, ಪ್ರಕೃತಿಯ ನಿಯಮವೇ ಬೇರೆ ಇದೆ. ಈ ಜಗತ್ತು ನಮ್ಮ ಇಚ್ಛೆಯಂತೆ ನಡೆಯುವ 'ರಿಮೋಟ್ ಕಂಟ್ರೋಲ್' ಸಾಧನವಲ್ಲ.

ನಮ್ಮ ಹಿರಿಯರು ಒಂದು ಮಾತು ಹೇಳುತ್ತಿದ್ದರು: "ಗಾಳಿ ಬಂದ ಕಡೆ ತೂರು" ಎಂದು. ಇದರರ್ಥ ಸೋಲೊಪ್ಪಿಕೊಳ್ಳುವುದಲ್ಲ, ಬದಲಾಗಿ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು. ನಾವು ರೈಲ್ವೆ ನಿಲ್ದಾಣಕ್ಕೆ ಹೋಗುತ್ತೇವೆ, ರೈಲು ನಿಗದಿತ ಸಮಯಕ್ಕೆ ಬರುತ್ತದೆ ಎಂದು ನಿರೀಕ್ಷಿಸುತ್ತೇವೆ. ಆದರೆ ತಾಂತ್ರಿಕ ಕಾರಣದಿಂದ ಅದು ಎರಡು ಗಂಟೆ ತಡವಾದಾಗ ನಾವು ಸಿಟ್ಟಿಗೇಳುತ್ತೇವೆ, ಕಿರಿಕಿರಿ ಮಾಡಿಕೊಳ್ಳುತ್ತೇವೆ. ಇಲ್ಲಿ ರೈಲು ತಡವಾಗಿರುವುದು 'ಪ್ರತಿಕೂಲ ಸನ್ನಿವೇಶ'. ಅದಕ್ಕೆ ನಾವು ನೀಡುವ ಸಿಟ್ಟಿನ ಪ್ರತಿಕ್ರಿಯೆ ನಮ್ಮ 'ಧೃತಿಗೆಟ್ಟ' ಮನಸ್ಥಿತಿ. ಆ ಎರಡು ಗಂಟೆಗಳನ್ನು ಪುಸ್ತಕ ಓದುತ್ತಲೋ ಅಥವಾ ಶಾಂತವಾಗಿ ಕುಳಿತು ವಿವೇಕದಿಂದ ಕಳೆಯುವುದು 'ಸನ್ನದ್ಧತೆ'.

**2. 'ಧೃತಿಗೆಡುವುದು' ಎಂದರೆ ಆತ್ಮಶಕ್ತಿಯ ಸೋಲು:** 'ಧೃತಿಗೆಡಬಾರದು'. 'ಧೃತಿ' ಎಂದರೆ ಧೈರ್ಯ, ಸ್ಥಿರತೆ ಅಥವಾ ತಾಳ್ಮೆ. ಇದು ಕೇವಲ ಶಾರೀರಿಕ ಶಕ್ತಿಯಲ್ಲ, ಇದು ಆತ್ಮಬಲ. ಯಾವಾಗ ಸಂಗತಿಗಳು ನಮ್ಮ ಪರವಾಗಿ ಇರುವುದಿಲ್ಲವೋ, ಆಗ ಮೊದಲು ದಾಳಿಗೊಳಗಾಗುವುದು ನಮ್ಮ ಈ 'ಧೃತಿ'. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ಕಷ್ಟಪಟ್ಟು ಓದಿ ಪರೀಕ್ಷೆ ಬರೆದಿರುತ್ತಾನೆ. ಫಲಿತಾಂಶ ಬಂದಾಗ ಅವನು ನಿರೀಕ್ಷಿಸಿದಷ್ಟು ಅಂಕಗಳು ಬಂದಿರುವುದಿಲ್ಲ. ಆ ಕ್ಷಣದಲ್ಲಿ ಅವನಿಗೆ ಜಗತ್ತೇ ಮುಗಿದುಹೋಯಿತು ಅನ್ನಿಸುತ್ತದೆ. ಈ ಹಂತದಲ್ಲಿ ಧೃತಿಗೆಟ್ಟರೆ ಅವನು ಮುಂದಿನ ಅವಕಾಶಗಳನ್ನು ಕಾಣಲಾರ. ಆದರೆ, "ಅಂಕಗಳು ಕಡಿಮೆಯಾಗಿರುವುದು ಒಂದು ಘಟನೆ ಮಾತ್ರ, ಅದು ನನ್ನ ವ್ಯಕ್ತಿತ್ವದ ತೀರ್ಪಲ್ಲ" ಎಂದು ಯೋಚಿಸುವುದು ಜಾಣತನ.

ನಮ್ಮ ಸಮಾಜದಲ್ಲಿ ಇಂದು ಮಾನಸಿಕ ಒತ್ತಡ ಹೆಚ್ಚಾಗಲು ಕಾರಣವೇ ಇದು. ಸಣ್ಣ ಸಣ್ಣ ವಿಘ್ನಗಳಿಗೂ ನಾವು ದೊಡ್ಡ ಮಟ್ಟದಲ್ಲಿ ಕುಸಿದು ಹೋಗುತ್ತಿದ್ದೇವೆ. ಸನ್ನಿವೇಶಗಳು ನಮ್ಮನ್ನು ಸೋಲಿಸುವುದಿಲ್ಲ, ಆ ಸನ್ನಿವೇಶಗಳನ್ನು ಎದುರಿಸುವಲ್ಲಿ ನಾವು ತೋರಿಸುವ ಅಸಹಾಯಕತೆ ನಮ್ಮನ್ನು ಸೋಲಿಸುತ್ತದೆ.

**3. ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ:** ನಮ್ಮ ಭಾರತೀಯ ಸಮಾಜವು ಕೃಷಿ ಮೂಲದಿಂದ ಬಂದದ್ದು. ಒಬ್ಬ ರೈತನ ಬದುಕಿಗಿಂತ ದೊಡ್ಡ ಪಾಠ ಬೇರೊಂದಿಲ್ಲ. ಮಳೆ ಬಾರದಿದ್ದಾಗ ಅವನು ಆಕಾಶದ ಕಡೆ ನೋಡಿ ಪ್ರಾರ್ಥಿಸುತ್ತಾನೆಯೇ ಹೊರತು, ಭೂಮಿಗೆ ಶಾಪ ಹಾಕುವುದಿಲ್ಲ. ಅತಿಯಾದ ಮಳೆಯಿಂದ ಬೆಳೆ ನಾಶವಾದಾಗಲೂ, "ಇದು ದೈವೇಚ್ಛೆ" ಎಂದು ಹೇಳಿ ಸಮಾಧಾನ ತಂದುಕೊಂಡು, ಮುಂದಿನ ಹಂಗಾಮಿಗೆ ಬೀಜಗಳನ್ನು ಸಿದ್ಧಪಡಿಸಿಕೊಳ್ಳುತ್ತಾನೆ.

ಇದು 'ಹಣೆಬರಹ' ಎಂಬ ಮೂಢನಂಬಿಕೆಯಲ್ಲ; ಬದಲಾಗಿ ಇದು 'ಸಹಜ ಸನ್ನದ್ಧತೆ'. ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಈ ಗುಣವೇ ನಮ್ಮ ಪೂರ್ವಜರನ್ನು ಸಾವಿರಾರು ವರ್ಷಗಳ ಆಕ್ರಮಣಗಳು, ಕ್ಷಾಮಗಳು ಮತ್ತು ಕಷ್ಟಗಳ ನಡುವೆಯೂ ಬದುಕಿಸಿ ಉಳಿಸಿತು. ಇಂದಿನ ಕಾರ್ಪೊರೇಟ್ ಜಗತ್ತಿನ "ಎಲ್ಲವನ್ನೂ ನಿಯಂತ್ರಿಸಬೇಕು" ಎಂಬ ಹಠಕ್ಕಿಂತ, ನಮ್ಮ ಹಿರಿಯರ "ಬಂದದ್ದನ್ನು ಎದುರಿಸೋಣ" ಎಂಬ ನಿಲುವು ಹೆಚ್ಚು ಆರೋಗ್ಯಕರವಾದುದು.

**4. ಉದಾಹರಣೆಗಳ ಮೂಲಕ ವಿಶ್ಲೇಷಣೆ:** ಜೀವನದಲ್ಲಿ ಪ್ರತಿಕೂಲತೆಗಳು ಹೇಗೆ ನಮಗೆ ವರವಾಗಬಲ್ಲವು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ನೋಡೋಣ:

- ವೃತ್ತಿ ಜೀವನದಲ್ಲಿ: ಒಬ್ಬ ವ್ಯಕ್ತಿಗೆ ತಾನು ಬಹಳ ಇಷ್ಟಪಟ್ಟ ಕೆಲಸ ಸಿಗದೇ ಹೋಗಬಹುದು ಅಥವಾ ಇದ್ದ ಕೆಲಸದಿಂದ ವಜಾ ಆಗಬಹುದು. ಮೇಲ್ನೋಟಕ್ಕೆ ಇದು ದೊಡ್ಡ ಆಘಾತ. ಆದರೆ, ಇದೇ ಘಟನೆಯು ಅವನನ್ನು ತನ್ನದೇ ಆದ ಸ್ವಂತ ಉದ್ಯಮ ಪ್ರಾರಂಭಿಸಲು ಪ್ರೇರೇಪಿಸಬಹುದು. ಅಂದು ಆ ಕೆಲಸ ಹೋಗದಿದ್ದರೆ ಇಂದು ಅವನು ಮಾಲೀಕನಾಗುತ್ತಿರಲಿಲ್ಲ.
- ಆರೋಗ್ಯದಲ್ಲಿ: ದೈಹಿಕವಾಗಿ ಅಶಕ್ತರಾದ ಎಷ್ಟೋ ಜನರು ತಮ್ಮ ಆ ದೌರ್ಬಲ್ಯವನ್ನೇ ಶಕ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಕಣ್ಣಿಲ್ಲದಿದ್ದರೂ ಸಂಗೀತದಲ್ಲಿ ಸಾಧನೆ ಮಾಡಿದವರು, ಕಾಲುಗಳಿಲ್ಲದಿದ್ದರೂ ಪರ್ವತ ಏರಿದವರು ನಮ್ಮ ನಡುವೆ ಇದ್ದಾರೆ. ಇವರೆಲ್ಲರೂ 'ಪ್ರತಿಕೂಲ ಪ್ರಸಂಗವನ್ನು ಎದುರಿಸಲು ಮನಸ್ಸನ್ನು ಸನ್ನದ್ಧಗೊಳಿಸಿದವರು'.

**5. ಮನಸ್ಸನ್ನು ಸನ್ನದ್ಧಗೊಳಿಸುವುದು ಹೇಗೆ?** ಪ್ರತಿಕೂಲ ಸನ್ನಿವೇಶ ಬಂದಾಗ ಬೆಚ್ಚಿಬೀಳದೆ ಇರಲು ನಾವು ಕೆಲವು ಅಭ್ಯಾಸಗಳನ್ನು ಮಾಡಿಕೊಳ್ಳಬೇಕು:

1. ವಸ್ತುನಿಷ್ಠ ದೃಷ್ಟಿಕೋನ: ಯಾವುದೋ ಒಂದು ಕೆಲಸ ಕೆಟ್ಟಾಗ, "ನನ್ನ ಜೀವನವೇ ಹಾಳಾಯಿತು" ಎಂದು ಸಾರ್ವತ್ರೀಕರಿಸಬಾರದು . ಕೇವಲ ಆ ಒಂದು ಕೆಲಸ ಮಾತ್ರ ಕೆಟ್ಟಿದೆ ಎಂದು ಅರ್ಥಮಾಡಿಕೊಳ್ಳಬೇಕು .
2. ನಾಳೆಯ ಮೇಲಿನ ನಂಬಿಕೆ: ಇತಿಹಾಸವನ್ನು ಗಮನಿಸಿದರೆ ತಿಳಿಯುತ್ತದೆ, ಯಾವುದೇ ಬಿಕ್ಕಟ್ಟು ಶಾಶ್ವತವಾಗಿ ಉಳಿದಿಲ್ಲ. ಎರಡನೇ ಮಹಾಯುದ್ಧ ಮುಗಿಯಿತು, ಪ್ಲೇಗ್-ಕೊರೊನಾದಂತಹ ಸಾಂಕ್ರಾಮಿಕಗಳು ಬಂದು ಹೋದವು. ಕಾಲ ಚಲನಶೀಲವಾದುದು, ಈ ಕೆಟ್ಟ ಸಮಯವೂ ಕಳೆದುಹೋಗುತ್ತದೆ ಎಂಬ ಅರಿವಿರಲಿ.
3. ಚಿಕ್ಕ ಸಂಭ್ರಮಗಳಲ್ಲಿ ನೆಮ್ಮದಿ: ದೊಡ್ಡ ಗುರಿಗಳು ಈಡೇರದಿದ್ದಾಗ ಕಂಗೆಡದೆ, ದಿನನಿತ್ಯದ ಸಣ್ಣ ಸಣ್ಣ ಸಂತೋಷಗಳಲ್ಲಿ (ಉದಾಹರಣೆಗೆ ಒಂದು ಕಪ್ ಕಾಫಿ, ಮಿತ್ರನ ಜೊತೆಗಿನ ಮಾತು, ಒಂದು ಹಳೆಯ ಹಾಡು) ಆಶ್ರಯ ಪಡೆಯಬೇಕು . ಇದು ನಮ್ಮ ಮನಸ್ಸಿನ ಬ್ಯಾಟರಿಯನ್ನು ರೀಚಾರ್ಜ್ ಮಾಡುತ್ತದೆ.
4. ದೈಹಿಕ ಮತ್ತು ಮಾನಸಿಕ ಶಿಸ್ತು: ಪ್ರತಿದಿನದ ಧ್ಯಾನ ಮತ್ತು ಓದು ನಮ್ಮ ಆಲೋಚನಾ ಕ್ರಮವನ್ನು ಗಟ್ಟಿಗೊಳಿಸುತ್ತದೆ. ಉತ್ತಮ ಸಾಹಿತ್ಯದ ಓದು ನಮ್ಮನ್ನು ಮಹಾಪುರುಷರ ಸಂಕಷ್ಟಗಳ ಜೊತೆ ಕನೆಕ್ಟ್ ಮಾಡುತ್ತದೆ, ಆಗ ನಮ್ಮ ಕಷ್ಟಗಳು ನಗಣ್ಯವಾಗಿ ಕಾಣುತ್ತವೆ.

**6. ಸಂಬಂಧಗಳಲ್ಲಿನ ಪ್ರತಿಕೂಲತೆ**

ಇಂದಿನ ಕಾಲದಲ್ಲಿ ಸಂಬಂಧಗಳೂ ಕೂಡ ನಮ್ಮ ಪರವಾಗಿ ಇರುವುದಿಲ್ಲ. ನಂಬಿದವರು ಮೋಸ ಮಾಡಬಹುದು ಅಥವಾ ಪ್ರೀತಿಪಾತ್ರರು ನಮ್ಮನ್ನು ಅರ್ಥಮಾಡಿಕೊಳ್ಳದೆ ಇರಬಹುದು. ಇಂತಹ ಸಮಯದಲ್ಲೂ ಮನಸ್ಸು ಸನ್ನದ್ಧವಾಗಿರಬೇಕು. ಯಾರೋ ಒಬ್ಬರು ನಮ್ಮನ್ನು ಕಡೆಗಣಿಸಿದರು ಎಂಬ ಕಾರಣಕ್ಕೆ ನಮ್ಮ ಸ್ವಂತ ಮೌಲ್ಯವನ್ನು ನಾವು ಕಡಿಮೆ ಮಾಡಿಕೊಳ್ಳಬಾರದು. "ಇದು ಅವರ ದೃಷ್ಟಿಕೋನ, ನನ್ನದಲ್ಲ" ಎಂದು ಶಾಂತವಾಗಿರುವುದು ಅತ್ಯಂತ ದೊಡ್ಡ ಗೆಲುವು.

**ಬದುಕು ಒಂದು ಸುಂದರ ರಂಗಮಂಚ**

ಜೀವನವು ನಮಗೆ ಯಾವಾಗಲೂ ಸಿಹಿ ತಿನಿಸುಗಳನ್ನೇ ನೀಡುವುದಿಲ್ಲ. ಕೆಲವೊಮ್ಮೆ ಕಹಿ ಔಷಧವನ್ನೂ ನೀಡುತ್ತದೆ. ಆ ಔಷಧವು ನಮಗೆ ಇಷ್ಟವಿಲ್ಲದಿದ್ದರೂ ಅದು ನಮ್ಮ ಗುಣಮುಖಕ್ಕೆ ಅಗತ್ಯವಿರುತ್ತದೆ. "ಮನಸು ಸದಾ ಸಹಜವಾಗಿ ಸನ್ನದ್ಧವಾಗಿರಬೇಕು" ಎಂಬುದರಲ್ಲಿ 'ಸಹಜವಾಗಿ' ಎಂಬ ಪದ ಬಹಳ ಮುಖ್ಯ. ನಾವು ಸನ್ನದ್ಧತೆಯನ್ನು ಪ್ರಯತ್ನಪಟ್ಟು ಮಾಡಬಾರದು, ಅದು ನಮ್ಮ ಸ್ವಭಾವದ ಭಾಗವಾಗಬೇಕು. ಸಮುದ್ರದ ಅಲೆಗಳು ಬರುವುದು ಹೇಗೆ ಸಹಜವೋ, ಅವುಗಳನ್ನು ಎದುರಿಸುವುದು ಅಷ್ಟೇ ಸಹಜವಾಗಿರಬೇಕು.

ಧೃತಿಗೆಡಬೇಡಿ, ಏಕೆಂದರೆ ನಿಮ್ಮ ಒಳಗಿರುವ ಶಕ್ತಿಯು ಹೊರಗಿನ ಸನ್ನಿವೇಶಗಳಿಗಿಂತ ಹೆಚ್ಚು ಬಲವಾದುದು. ಎದುರಾಗುವ ಪ್ರತಿಯೊಂದು ಅಡೆತಡೆಯನ್ನೂ ಒಂದು ಅನುಭವದ ಮೆಟ್ಟಿಲನ್ನಾಗಿ ಮಾಡಿಕೊಳ್ಳಿ. ನೆನಪಿಡಿ, ಶಾಂತ ಸಮುದ್ರದಲ್ಲಿ ಯಾರೂ ದಕ್ಷ ನಾವಿಕರಾಗಲು ಸಾಧ್ಯವಿಲ್ಲ; ಬಿರುಗಾಳಿಯನ್ನೇ ಎದುರಿಸಿದವನೇ ನಿಜವಾದ ಕ್ಯಾಪ್ಟನ್.

ಬನ್ನಿ, ನಮ್ಮ ಮನಸ್ಸನ್ನು ಅಲುಗಾಡದ ಹಿಮಾಲಯದಂತೆ ಮಾಡಿಕೊಳ್ಳೋಣ. ಆಗ ಯಾವುದೇ ಪ್ರತಿಕೂಲ ಗಾಳಿಯೂ ನಮ್ಮನ್ನು ತಣಿಸಬಲ್ಲದೇ ಹೊರತು ಉರುಳಿಸಲು ಸಾಧ್ಯವಿಲ್ಲ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,